ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ದಿನಾಂಕ ೧೧ನೇ ಮೇ ೧೯೭೮, ವೈಶಾಖ ೨೧, ೧೯೦೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ವಿತ್ತೀಯ ಕಾರ್ಯಕಲಾಪಗಳು

೧೯೭೮-೭೯ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ (ಮಂತ್ರಿಯವರಿಂದ ಉತ್ತರ)

(ಕೃಷಿ ಇಲಾಖೆ)

† ಶ್ರೀ ಆರ್. ವಿ. ದೇಶಪಾಂಡೆ (ಕೃಷಿಮಂತ್ರಿ).—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರುಗಳು ಕೆಲವು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ ಕೆಲವು ಟೀಕೆ ಟಿಪ್ಪಣಿಗಳನ್ನೂ ಕೂಡ ಮಾಡಿದ್ದಾರೆ, ಒಳ್ಳೆಯ ಕೆಲಸ ಮಾಡಿದ್ದೇವೆಂದು ಅಭಿನಂದನೆಯನ್ನೂ ಸೂಚಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸಿ ಕೃಷಿ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ನಾನು ಈ ಸದನದ ಮುಂದಿಡಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶ ಕೃಷಿ ಪ್ರಧಾನವಾದ ದೇಶ. ಈ ದೇಶದಲ್ಲಿ ಇವತ್ತು ಶೇಕಡ ೭೦ ಕಿಂತ ಹೆಚ್ಚು ಜನ ಕೃಷಿಯ ಮೇಲೆ ಅವಲಂಬಿಸಿದ್ದಾರೆ. ಆದರೆ ದುರ್ದೈವದಿಂದ ಈ ದೇಶದ ಕೃಷಿಯ ನೀತಿ ಯಾವ ಪ್ರಕಾರವಾಗಿ ಇರಬೇಕಾಗಿತ್ತೋ ಕೇಂದ್ರ ಸರ್ಕಾರ ಎಷ್ಟು ಅಭಿರುಚಿಯನ್ನು ಈ ನೀತಿಯಲ್ಲಿ ತೋರಿಸಬೇಕಾಗಿತ್ತೋ ಅವನ್ನು ತೋರಿಸಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದರು, ಇವೊತ್ತು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ನಲ್ವತ್ತು ವರ್ಷಗಳಾದರೂ ಸಹ ಕೃಷಿಗೆ ಯಾವ ತರಹ ಮಹತ್ವ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಜನತಾ ಸರ್ಕಾರದಿಂದ ನಮ್ಮ ಇತಿಮಿತಿಯಲ್ಲಿ ಕೃಷಿಗೆ, ಈ ಒಂದು ಇಲಾಖೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಉಗ್ರವಾದ ಬರಗಾಲ ಇದೆ. ಈ ಬರಗಾಲದಿಂದ ರೈತರು ಸಾಕಷ್ಟು ಕಂಗಾಲಾಗಿದ್ದಾರೆ. ಇದರಿಂದ ಉತ್ಪಾದನೆ ಕೂಡ ಕಡಿಮೆ ಆಗಿದೆ. ಆದ್ದರಿಂದ ರಾಜ್ಯ ಹಣಕಾಸಿನ ಪರಿಸ್ಥಿತಿಯ ಮೇಲೆ ಇದರ ಪರಿಣಾಮ ಆಗಿದೆ. ಕಳೆದವರ್ಷ ದೇಶದ ಬೇರೆಬೇರೆ ಭಾಗದಲ್ಲಿ ಬರಗಾಲ ಬಂದಾಗ ನಾವು ನೋಡಿದ್ದೇವೆ, ಕೇಂದ್ರಸರ್ಕಾರ ತನ್ನ ಕಣ್ಣು ತೆರೆದು ಪರದೇಶಗಳಿಂದ ಸಹಾಯ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿತು. ಹಾಗೆಯೇ ವಿಶ್ವಬ್ಯಾಂಕಿನಿಂದ ಸಹಾಯ ಪಡೆಯಲಿಕ್ಕೆ ಪ್ರಯತ್ನ ಮಾಡಿತು. ಆದರೆ ಈ ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ಸತತವಾಗಿ ಬರಗಾಲ ಇದ್ದಾಗ ಈ ಒಂದು ಎಚ್ಚರಿಕೆ ಕೇಂದ್ರಸರ್ಕಾರಕ್ಕೆ ಬರಲಿಲ್ಲ. ಆದ್ದರಿಂದ ಕಳೆದ ಐದು ವರ್ಷಗಳ ಬರಗಾಲದ ಕಾರಣ ನಮ್ಮ ಹಣಕಾಸಿನ ಪರಿಸ್ಥಿತಿಮೇಲೆ ಪರಿಣಾಮ ಆಗಿ ಎಷ್ಟೊಂದು ಕೇಂದ್ರ ಸರ್ಕಾರ ನಮಗೆ ಸಹಾಯ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಆದರೂ ಸಹ ನಾವು ಎಷ್ಟು ಮಾಡ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಲಿಕ್ಕೆ ಸಾಧ್ಯವೋ ಅಷ್ಟು ಮಾಡಿದ್ದೇವೆ, ನಮ್ಮ ಮುಂಗಡ ಪತ್ರದಲ್ಲಿ ಕೃಷಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ. ಒಂದು ಸಂತೋಷದ ಸಂಗತಿ ಎಂದರೆ ಮೊದಲನೆಯ ಬಾರಿಗೆ ಕೇಂದ್ರ ಸರ್ಕಾರ ಈ ವರ್ಷ ತನ್ನ ಕೃಷಿ ನೀತಿಯಲ್ಲಿ ಬದಲಾವಣೆ ಮಾಡಿ ಕೃಷಿಗೆ ಪ್ರಾಧಾನ್ಯತೆಯನ್ನು ಕೊಡುತ್ತಿದೆ. ಆದರೆ ಬಡ್ಜೆಟ್ ಪ್ರೆಸೆಂಟ್ ಮಾಡುವುದಕ್ಕೆ ಮುಂಚೆ ಡೀಸೆಲ್, ಪೆಟ್ರೋಲ್ ಪಂಪುಸೆಟ್ಟುಗಳ ಬಿಡಿ ಭಾಗಗಳು ಇವುಗಳ ದರ ಹೆಚ್ಚು ಮಾಡಿ ಕೇಂದ್ರ ಸರ್ಕಾರದ ಮುಂಗಡಪತ್ರದಿಂದ ಏನು ಸಹಾಯ ಆಗಬೇಕಾಗಿತ್ತೋ ಅದು ಆಗಲಿಲ್ಲ. ಫರ್ಟಿಲೈಸರ್ಸ್ ಸಬ್ಸಿಡಿಯನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದರ ಉದ್ದೇಶ ಒಳ್ಳೆಯದಿರಬಹುದು. ಆದರೆ ಈ ಸಬ್ಸಿಡಿ ರೈತರಿಗೆ ಮುಟ್ಟುತ್ತಿಲ್ಲ, ದೊಡ್ಡ ದೊಡ್ಡ ಮಿಲ್‌ಮಾಲೀಕರಿಗೆ ಕಾರ್ಖಾನೆಯವರಿಗೆ, ಇಂಡಸ್ಟ್ರೀಸ್‌ನವರಿಗೆ ಇದರ ಲಾಭ ದೊರೆಯುತ್ತಿದೆ. ಈ ದೃಷ್ಟಿಯಿಂದ ಇವೊತ್ತು ಕೇಂದ್ರ ಸರ್ಕಾರ ಮೊದಲಬಾರಿಗೆ ಏನು ಪ್ರಾಮಾಣಿಕ ಪ್ರಯತ್ನ ಮಾಡಿದೆ ಅದನ್ನು ನಾನೂ ಸಹ ಮೆಚ್ಚುತ್ತೇನೆ. ಇವೊತ್ತು ೧೯೮೭-೮೮ ರಲ್ಲಿ ಪ್ರತಿಕೂಲ ಹವಾಮಾನದ ಕಾರಣ ಅದರ ಪರಿಣಾಮ ಬೆಳೆಗಳ ಮೇಲೆ ಆಗಿದೆ. ಇದನ್ನು ಕೇಂದ್ರ ಸರ್ಕಾರದವರು ಕೂಡ ಒಪ್ಪಿಕೊಂಡಿದ್ದಾರೆ. ಇದು ಒಂದು ಭೀಕರವಾದ ಬರಗಾಲ. ಇಡೀ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿಯು ಸಹ ಐದನೇಯ ವರ್ಷದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಬರಗಾಲ ಇದ್ದರೂ ಸಹ ನಾವು ರೈತರೆಲ್ಲರ ಸಹಕಾರದಿಂದ, ಇಲಾಖೆಯ ಸಿಬ್ಬಂದಿ ವಿಸ್ತರಣಾ ಕೆಲಸದಿಂದ ನಾವು ನಮ್ಮ ಗುರಿಯನ್ನು ಸಾಧಿಸಲಿಕ್ಕೆ ಆಗಿಲ್ಲದಿದ್ದರೂ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದರಿಂದ ನಮ್ಮ ಸಿರೀಲ್ ಪ್ರೊಡಕ್ಷನ್ ೫೬.೮೫ ಲಕ್ಷ ಆಗಿದೆ. ಇದರಲ್ಲಿ ಅತೀ ಸಂತೋಷದ ಸಂಗತಿ ಏನೆಂದರೆ ನಮ್ಮ ದ್ವಿದಳ ಧಾನ್ಯ ಉತ್ಪಾದನೆಯಲ್ಲಿ ರಾಜ್ಯದ ಇತಿಹಾಸದಲ್ಲೇ ಮೊದಲಬಾರಿಗೆ ೭.೫೪ ರಷ್ಟು ದ್ವಿದಳ ಧಾನ್ಯ ಉತ್ಪಾದನೆಯಾಗಿ ಒಂದು ಹೊಸ ದಾಖಲೆ ರಾಜ್ಯದಲ್ಲಿ ನಿರ್ಮಾಣ ಆಗಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಪರ್‌ಫಾರ್ಮೆನ್ಸ್ ಬಡ್ಜೆಟ್ ಪ್ರತಿಯನ್ನು ನಮಗೆ ಕೊಟ್ಟಿಲ್ಲ. ಬರೀ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ನೀವು ಮಾತನಾಡುವಾಗ ನಾನು ಸುಮ್ಮನೇ ಕುಳಿತಿದ್ದೆ...

ಶ್ರೀ ಜಿ. ಎಸ್. ಶಿವನಂಜಪ್ಪ.—ಪರ್‌ಫಾರ್ಮೆನ್ಸ್ ಬಡ್ಜೆಟ್ ನಮಗೆ ಕೊಟ್ಟಿಲ್ಲ. ನೀವು ಕೊಟ್ಟಿದ್ದರೆ ನಾವು ನಿಮ್ಮನ್ನು ಅಪ್ರಿಷಿಯೇಟ್ ಮಾಡುತ್ತಿದ್ದೆವು.

ಅಧ್ಯಕ್ಷರು.—ನೀವು ಎಷ್ಟುದ್ದ ಭಾಷಣ ಮಾಡಿದ್ದೀರಿ ಈಗ ಮಾನ್ಯ ಮಂತ್ರಿಗಳ ಉತ್ತರ ಕೇಳಿ. ಆಮೇಲೆ ಬೇಕಾದರೆ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಪರ್ಫಾರ್ಮೆನ್ಸ್ ಬಡ್ಜೆಟ್ ಇದ್ದರೆ, ನೀವು ಮಾಡಿರತಕ್ಕ ಸಾಧನೆಗಳ ಬಗ್ಗೆ ನಾವು ಮೆಚ್ಚುಗೆ ವ್ಯಕ್ತ ಮಾಡುತ್ತಿದ್ದೆವು.

ಶ್ರೀ ಆರ್. ವಿ. ದೇಶಪಾಂಡೆ.—ಪ್ರಾವಿಷನಲ್ ಫಿಗರ್ಸ್ ೧೯೮೭-೮೮ರ ಅಂಕಿಅಂಶಗಳು ಟ್ಯಾಲಿ ಆಗುತ್ತಿವೆ, ನೀವು ಸಂತೋಷಪಡಬೇಕು.

ಅಧ್ಯಕ್ಷರು.—ಇಲ್ಲಿಯವರೆಗೆ ೯ ತಿಂಗಳ ರಿಪೋರ್ಟ್ ಕೊಡುತ್ತಿದ್ದರು, ಈಗ ೧೨ ತಿಂಗಳ ರಿಪೋರ್ಟ್ ಕೊಟ್ಟಿದ್ದಾರೆ, ನೀವೂ ಸ್ವಲ್ಪ ಸುಧಾರಿಸಿಕೊಳ್ಳಿ. . ...

ಶ್ರೀ ಆರ್. ವಿ. ದೇಶಪಾಂಡೆ.—ಮುಂಗಾರಿನಲ್ಲಿ ಮಳೆ ಅಭಾವದಿಂದ, ಹಿಂಗಾರಿನಲ್ಲಿ ಹೆಚ್ಚಿನ ಮಳೆ ಬಂದುದರಿಂದ ಎಷ್ಟು ಅನ್ನಧಾನ್ಯವನ್ನು ಬೆಳೆಯಬೇಕಾಗಿತ್ತೋ ಅಷ್ಟು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಇದರಿಂದ ರೈತರಿಗೆ ಸಾಕಷ್ಟು ತೊಂದರೆಯಾಗಿದೆ. ಈಗ ಎಲ್ಲವೂ ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುತ್ತವೆ, ಸಂಪೂರ್ಣವಾಗಿ ವಿಕೇಂದ್ರೀಕರಣವಾಗಿದೆ, ಇವತ್ತು ಇನ್‌ಪುಟ್ ಕಿಟ್ಸ್ ಆಗಲೀ, ಸೀಡ್ಸ್ ವಿತರಣೆಯಾಗಲೀ, ವಿಸ್ತರಣಾ ಕೆಲಸವಾಗಲೀ ಎಲ್ಲವೂ ಜಿಲ್ಲಾಪರಿಷತ್ ಮುಖಾಂತರ ನಡೆಯುತ್ತಿವೆ. ಇವತ್ತು ನಮ್ಮ ಪ್ಲಾಂಟ್ ಪ್ರೊಟೆಕ್ಷನನ್ನು ೫೮ ೧೬ ಲಕ್ಷ ಹೆಕ್ಟೇರ್ ಭೂಮಿಯನ್ನು ಕವರ್ ಮಾಡಿಕೊಂಡಿದ್ದೇವೆ, ಅದೇ ಪ್ರಕಾರವಾಗಿ ಅಧಿಕ ಇಳುವರಿ ಬೆಳೆಯ ಕಾರ್ಯಕ್ರಮದಲ್ಲಿ ೧೯೬೬-೬೭ ರಲ್ಲಿ ಕೇವಲ ೫೦ ಸಾವಿರ ಹೆಕ್ಟೇರ್ ಇತ್ತು, ಈ ವರ್ಷ ೪೯-೩೩ ಲಕ್ಷ ಹೆಕ್ಟೇರ್ ಕವರ್ ಆಗಿದೆ. ಅದೇಪ್ರಕಾರ ಜಿಲ್ಲಾಪರಿಷತ್ ಮುಖಾಂತರ ೨.೪೧ ೧೭೪ ಇನ್‌ಪುಟ್ ಕಿಟ್ಸ್ ಸಪ್ಲೈ ಮಾಡಿದ್ದೇವೆ. ಈ ಎಲ್ಲ ಕೆಲಸ ಆದರೂ ಸಹ ಇನ್ನೂ ಸಾಕಷ್ಟು ಕೆಲಸಗಳು ಆಗಬೇಕಾಗಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ೧೯೮೮-೮೯ನೇ ಇಸವಿಯಲ್ಲಿ ಕೆಲವು ಗುರಿಯನ್ನು ಈಗಾಗಲೇ ನಿಗದಿ ಮಾಡಿದ್ದೇವೆ. ಇದರಲ್ಲಿ ಸಿರಿಯಲ್ಸ್ ೬೬.೮೦ ಲಕ್ಷ

ಟನ್ ಗರಿ, ಶುಗರ್ ಕೇನ್ ೧೫೭.೪ ಲಕ್ಷ ಟನ್, ಹತ್ತಿ ೫.೩೭ ಲಕ್ಷ ಟನ್ ಮತ್ತು ಟೊಬ್ಯಾಕೊ ೦.೫೧ ಲಕ್ಷ ಟನ್, ಈ ಪ್ರಕಾರ ನಮ್ಮ ಗುರಿಯನ್ನು ಇಟ್ಟುಕೊಂಡಿದ್ದೇವೆ. ಕೆಲವು ಮಾನ್ಯ ಸದಸ್ಯರು ಹೇಳಿದರು, ನಮ್ಮ ಬಜೆಟ್‌ನಲ್ಲಿ ಕೇವಲ ೬.೨ ಇಷ್ಟೇ ಅಲೋಕೇಷನ್ ಕೊಟ್ಟಿರುವುದು ಎಂದು. ಇವತ್ತು ತಾವುಗಳು ಇಷ್ಟನ್ನೇ ನೋಡಬಾರದು, ಬಜೆಟ್‌ನಲ್ಲಿ ನೀರಾವರಿಗೆ ಮತ್ತು ಬೇರೆ ಬೇರೆ ಇಲಾಖೆಗಳಿಗೆ ನಾವು ಅಲೋಕೇಷನ್ ಮಾಡಿದ್ದೇವೆ. ಇದರ ಲಾಭವೂ ಸಹ ರೈತರಿಗೆ ಹೋಗುತ್ತದೆ. ಅಗ್ರಿಕಲ್ಚರಲ್ ಇನ್‌ಪುಟ್ ಸರ್ವೀಸಸ್‌ಗೆ ೬.೩೩ ಕೋಟಿ ಕೊಟ್ಟಿದ್ದೇವೆ, ಇರಿಗೇಷನ್‌ಗೆ ೨೧.೯೧ ಕೋಟಿ ಕೊಟ್ಟಿದ್ದೇವೆ. ಅದೇಪ್ರಕಾರ ಪವರ್ ಪ್ರಾಜೆಕ್ಟ್‌ಗೆ ೨೩.೯೦ ಕೋಟಿ ಕೊಟ್ಟಿದ್ದೇವೆ. ಹೀಗೆ ಬೇರೆ ಬೇರೆ ರೀತಿಯಿಂದ ರೈತರಿಗೆ ಸಾಕಷ್ಟು ಅನುಕೂಲ ಮಾಡಿ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆ.

ನ್ಯಾಷನಲ್ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಪ್ರಾಜೆಕ್ಟ್ ಶುರುವಾಗಿ ಮೂರು ವರ್ಷ ಆಯಿತು. ಇದು ೬೫ ಕೋಟಿ ರೂಪಾಯಿಗಳ ಕಾರ್ಯಕ್ರಮ. ಕಳೆದ ಮೂರು ವರ್ಷದಲ್ಲಿ ಸ್ವಲ್ಪ ಹಣದ ತೊಂದರೆಯಿಂದ ಇದರಲ್ಲಿ ಎಷ್ಟು ಗುರಿ ಸಾಧಿಸಬೇಕಾಗಿತ್ತೋ ಅಷ್ಟನ್ನು ಸಾಧಿಸುವುದಕ್ಕೆ ಆಗಲಿಲ್ಲ. ಈ ವರ್ಷ ಅದರಲ್ಲಿ ಒಳ್ಳೆಯ ಕೆಲಸ ಆಗಿದೆ. ಇದರ ಅವಧಿಯನ್ನು ಮತ್ತೊಂದು ವರ್ಷ ಎಕ್ಸ್‌ಟೆಂಡ್ ಮಾಡಬೇಕೆಂದು ನಾನು ಈಗಾಗಲೇ ಕೇಂದ್ರ ಸರಕಾರದವರಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಇದೇ ಪ್ರಕಾರ ಡಾನಿಡ ಫಸ್ಟ್ ಫೇಸ್‌ನಲ್ಲಿಯೂ ಸಹ ಒಳ್ಳೆಯ ಕೆಲಸವಾಗಿದೆ. ಯುವಕ ಯುವತಿಯರ ತರಬೇತಿ ಇರಬಹುದು ಮತ್ತೊಂದು ಕಾರ್ಯಕ್ರಮ ಇರಬಹುದು ಇದರಲ್ಲಿ ಒಳ್ಳೆಯ ಕೆಲಸವಾಗಿದೆ. ರಸಗೊಬ್ಬರದ ಬಳಕೆಯಲ್ಲಿಯೂ ಸಹ ನಾವು ಪ್ರಗತಿ ಸಾಧಿಸಿದ್ದೇವೆ. ೧೯೫೬-೫೭ರಲ್ಲಿ ನಮ್ಮ ರಾಜ್ಯದಲ್ಲಿ ಕೇವಲ ೩೮೪ ಟನ್ ರಸಗೊಬ್ಬರದ ಬಳಕೆ ಇತ್ತು, ಆದರೆ ೧೯೮೬-೮೭ರಲ್ಲಿ ಇದು ೪೦೧.೩೯ ಲಕ್ಷ ಟನ್. ೧೯೮೭-೮೮ರಲ್ಲಿ ೫೫೮ ಲಕ್ಷ ಟನ್ ಆಗಿದೆ. ಇವತ್ತು ನಾವು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಈ ರಸಗೊಬ್ಬರಗಳ ಸೇಲ್ಸ್ ಪಾಯಿಂಟ್ ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಿತ್ತನೆ ಬೀಜದ ವಿಚಾರದಲ್ಲಿ ಮಾನ್ಯ ಸದಸ್ಯರು ಸಾಕಷ್ಟು ಬೇಕನ್ನು ಹೇಳಿದ್ದಾರೆ. ಈ ವರ್ಷ ಸ್ವಲ್ಪ ಸಿಹೆಚ್‌ಎಸ್-೫ ಜವಾರ್ ಮತ್ತು ಹೈಬ್ರಿಡ್ ಕಾಟನ್ ಬೀಜಗಳ ಬಗ್ಗೆ ಸಮಸ್ಯೆ ಇತ್ತು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಒಳ್ಳೆಯ ಗುಣಮಟ್ಟದ ಬೀಜ ಕೊಡುವುದು ನಮ್ಮ ಜವಾಬ್ದಾರಿ. ಸರಿಯಾದ ಸಮಯದಲ್ಲಿ ರೈತರಿಗೆ ಸಾಲ, ಒಳ್ಳೆಯ ಗುಣಮಟ್ಟದ ಬೀಜಗಳು ಮತ್ತು ರಸಗೊಬ್ಬರ ಹಾಗೂ ಪೆಸ್ಟಿಸೈಡ್‌ಗಳನ್ನು ಅವರ ಮನೆಯ ತನಕ ಮುಟ್ಟಿಸುವುದು ಸರಕಾರದ ಜವಾಬ್ದಾರಿ ಎಂದು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಸರಕಾರ ಪ್ರಯತ್ನ ಮಾಡುತ್ತಿದೆ. ಆಗ್ರೋ ಇಂಡಸ್ಟ್ರೀಸ್ ಮುಖಾಂತರ, ಮಾರ್ಕೆಟಿಂಗ ಫೆಡರೇಷನ್ ಮುಖಾಂತರ, ಪ್ರೈವೇಟ್ ಏಜೆನ್ಸಿ ಮುಖಾಂತರ ಆದಷ್ಟು ಬೇಗ, ಎಷ್ಟು ಸಾಧ್ಯವೋ ಅಷ್ಟು ಸೇಲ್ ಪಾಯಿಂಟ್‌ಗಳನ್ನು ನಾವು ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ೧೯೮೭-೮೮ರಲ್ಲಿ ಮೂರು ಲಕ್ಷದ ಮೂವತ್ತು ಸಾವಿರ ಕ್ವಿಂಟಾಲ್ ಬೀಜ ಸಂಗ್ರಹಣೆ ಮಾಡಿರುತ್ತೇವೆ. ೧೯೮೮-೮೯ರಲ್ಲಿ ನಾಲ್ಕು ಲಕ್ಷದ ನಲವತ್ತು ಸಾವಿರ ಕ್ವಿಂಟಾಲ್ ಬೀಜ ಬೇಕೆಂದು ಅಂದಾಜು ಮಾಡಿದ್ದೇವೆ. ಇನ್ನು ಸೀಡ್ಸ್ ಫಾರಮ್‌ಗಳ ಬಗ್ಗೆ ಹೇಳಬೇಕಾದರೆ, ನಮ್ಮ ಇಲಾಖೆಯ ವಶದಲ್ಲಿದ್ದ ಸೀಡ್ ಫಾರಂಗಳನ್ನು ಇವತ್ತು ಜಿಲ್ಲಾಪರಿಷತ್‌ಗೆ ಟ್ರಾನ್ಸ್‌ಫರ್ ಮಾಡಿದ್ದೇವೆ, ಕೆಲವನ್ನು ಯೂನಿವರ್ಸಿಟಿಗೆ ಟ್ರಾನ್ಸ್‌ಫರ್ ಮಾಡಿದ್ದೇವೆ, ನಮ್ಮಲ್ಲಿ ಇವತ್ತು ೬೪ ಸೀಡ್ ಫಾರಂಗಳು ಇವೆ. ಇವುಗಳಲ್ಲಿ ಕೆಲವು ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂದು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರ ಸಲುವಾಗಿ ಪ್ರತಿಯೊಂದು ಸೀಡ್ ಫಾರಂನ್ನೂ ಪ್ರತ್ಯೇಕವಾಗಿ ಡಿವಿಜನ್‌ವೈಸ್ ರಿವ್ಯೂ ಮಾಡಿರುತ್ತೇನೆ. ಪ್ರತಿಯೊಂದು ಸೀಡ್ ಫಾರಂನಲ್ಲಿ ಸಾಯಿಲ್ ಟೆಸ್ಟ್ ಮಾಡಿರುತ್ತೇವೆ. ಪ್ರತಿಯೊಂದು ಸೀಡ್ ಫಾರಂನಲ್ಲಿ ೫೦ ಪರ್ಸೆಂಟ್ ಕಮರ್ಷಿಯಲ್ ಪ್ರೊಡಕ್ಷನ್, ೫೦ ಪರ್ಸೆಂಟ್ ಸೀಡ್ಸ್ ಪ್ರೊಡಕ್ಷನ್ ಇರಬೇಕು, ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಇರಬೇಕು, ಪ್ರೊಡಕ್ಷನ್ ಹೆಚ್ಚಿರಬೇಕು. ಹೀಗೆ ಇವುಗಳು ನಡೆಯಬೇಕು ಎಂಬುದರ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆ ಪ್ರಕಾರ ಆದೇಶ ಕೊಟ್ಟಿದ್ದೇವೆ. ಇದಕ್ಕಾಗಿ ಇಲಾಖೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಕೆಲವೇಳೆಯಲ್ಲಿ ಎಷ್ಟೋ ಜನ ಅಧಿಕಾರಿಗಳು ನಮಗೆ ಒಂದು ಜೀಪು ತೆಗೆದುಕೊಳ್ಳುವುದಕ್ಕೂ ಅಧಿಕಾರ ಇಲ್ಲ, ಅದಕ್ಕೆ ಅಗ್ರಿಕಲ್ಚರ್ ಡೈರೆಕ್ಟರ್‌ರವರನ್ನು ಕೇಳಬೇಕಾದ ಪರಿಸ್ಥಿತಿ ಇದೆ ಎಂದು ಹೇಳಿದರು. ಅಧಿಕಾರಿಗಳ ಮೇಲೆ ರೆಸ್ಪಾನ್ಸಿಬಿಲಿಟಿ ಕೊಟ್ಟಾಗ ನೀವು ಏನು ಕೆಲಸ ಮಾಡಿದ್ದೀರಿ ಎಂದು ಅವರನ್ನು ಕೇಳಬಹುದು. ಆದುದರಿಂದ ಈ ಕೆಲಸವನ್ನೂ ಸಹ ಇಲಾಖೆ ಮಾಡಿದೆ. ಇನ್ನು ಕ್ರಾಪ್ ಇನ್‌ಷೂರೆನ್ಸ್ ಕ್ರಾಪ್‌ಲೋನ್

ಇನ್‌ಷ್ಯೂರೆನ್ಸ್ ಆಗಿದೆ ಯಾರು ಸಹಕಾರ ಸಂಘಗಳಿಂದ ಸಾಲ ಪಡೆದುಕೊಳ್ಳುತ್ತಾರೆ ಅವರಿಗಷ್ಟೇ ಕ್ರಾಪ್ ಇನ್‌ಷ್ಯೂರೆನ್ಸ್ ಸೌಲಭ್ಯ ಸಿಗುವುದಕ್ಕೆ ಒಂದು ಅವಕಾಶ ಇದೆ. ಬೇರೆಯವರಿಗೆ ಸಿಗುವುದಿಲ್ಲ. ಆದುದರಿಂದ ನಾವು ಈ ಬಗ್ಗೆ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೇವೆ. ಸ್ವತ; ನಾವೇ ಹೋಗಿ ಹೇಳಿದ್ದೇವೆ. ಈಗಿರುವ ಸ್ಕೀಮ್‌ನಿಂದ ರೈತರಿಗೆ ಸಹಾಯ ಸಿಗುವುದು ಸಾಧ್ಯವಿಲ್ಲ ಎಂದು ಹೇಳಿದ್ದೇವೆ ಈಗ ತಾಲ್ಲೂಕನ್ನು ಒಂದು ಯೂನಿಟ್ ಮಾಡಿಕೊಂಡಿದ್ದಾರೆ. ತಾಲ್ಲೂಕಿನಲ್ಲಿ ಒಂದು ಹೋಬಳಿಯಲ್ಲಿ ಬೆಳೆ ನಾಶವಾದರೆ ಆ ತಾಲ್ಲೂಕಿನ ರೈತರಿಗೆ ವಿಮೆಯ ಲಾಭ ಸಿಗುತ್ತದೆ ಎನ್ನುವುದು ಡೌಟ್ ಆಗಿದೆ. ಅದರ ಸಲುವಾಗಿ ನಾವು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿದ್ದೇವೆ. ಮಂಡಲವನ್ನು ಒಂದು ಯೂನಿಟ್ ಆಗಿ ಮಾಡಿರಿ ಎಂದು ಹೇಳಿದ್ದೇವೆ. ಈ ಸಲುವಾಗಿ ಮಂಡಲ್ ಯೂನಿಟ್‌ಗಳನ್ನು ಮಾಡಿ ಎಂದು ಕೇಂದ್ರ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಆಗ ಇದರ ಲಾಭ ಎಲ್ಲರಿಗೂ ಸಿಗುತ್ತದೆ. ಅದೇ ಪ್ರಕಾರ ಕ್ರಾಪ್ ಕಟಿಂಗ್ ಮೆಷನರಿ ಏನು ಇದೆ ಅದನ್ನು ಸ್ಟ್ಯಾಂಡರ್ಡ್ ಮಾಡಬೇಕಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರ ಸಹಾಯ ಮಾಡಬೇಕು. ಇನ್ನು ಮುಂದೆ ಹೋಗಿ ಒಂದು ಪಕಾತು ಹೇಳುವುದಾದರೆ ಕಳೆದ ನಾಲ್ಕೈದು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಬರಗಾಲವಿತ್ತು. ಬರಗಾಲವಿದ್ದಾಗ ಸಾಮಾನ್ಯವಾಗಿ ಯಾವುದೇ ರಾಜ್ಯದಲ್ಲಿ ಆಗಲಿ ಇಳುವರಿ ಕಡಿಮೆಯಾಗುತ್ತದೆ. ಇಂತಹ ರಾಜ್ಯಗಳಿಗೆ ಬೇರೆ ಒಂದು ಪರ್ಮ ಇಡಬೇಕಾಗುತ್ತದೆ. ಕಳೆದ ನಾಲ್ಕೈದು ವರ್ಷಗಳಿಂದ ನಮ್ಮಲ್ಲಿ ಇಳುವರಿ ಬಹಳ ಕಡಿಮೆಯಾಗಿದೆ. ಅದೇ ರೀತಿಯಾಗಿ ಕೆಲವು ಬೆಳೆಗಳಾದ ಶುಗರ್‌ಕೇನ್, ಫಾಡರ್ ಕ್ರಾಪ್ ಇವುಗಳಿಗೆ ಇನ್‌ಷ್ಯರೆನ್ಸ್ ಇಲ್ಲ. ಕ್ರಾಪ್‌ಗಳಿಗೂ ಇನ್‌ಷೂರೆನ್ಸ್ ಇರಬೇಕೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮೊನ್ನೆ ಮೊನ್ನೆ ಕೇಂದ್ರ ಸರ್ಕಾರದ ಕೃಷಿ ಸಚಿವರು ಈ ಕ್ರಾಪ್ ಇನ್‌ಶ್ಯೂರೆನ್ಸ್ ಬಗ್ಗೆ ಒಂದು ಮಾತು ಹೇಳಿದ್ದಾರೆ ಅದೇನೆಂದರೆ ಹಳ್ಳಿ ಒಂದು ಯುನಿಟ್ ಆಗಿ ಮಾಡಿದ್ದೇವೆಂದು ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಬರೀ ಮಾತಿನಲ್ಲಿ ಹೇಳಿದರೆ ನಡೆಯುವುದಿಲ್ಲ, ಅವರು ಹೇಳಿದ ಮಾತು ಕಾರ್ಯಗತವಾಗಬೇಕು. ಅದಕ್ಕೆ ಅವರು ದೃಢ ಮನಸ್ಸು ಮಾಡಬೇಕು. ಕ್ರಾಪ್ ಕಟಿಂಗ್ ಮೆಷನರಿ ಸ್ಟ್ಯಾಂಡರ್ಡ್ ಮಾಡಬೇಕೆಂದು ಪುನಃ ನಾನು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆ ಮೊನ್ನೆ ನಾಲ್ಕು ದಿವಸಗಳ ಹಿಂದೆ ಆ ಪತ್ರಕ್ಕೆ ನನಗೆ ಉತ್ತರ ಬಂದಿದೆ. ಅವರು ಆ ಪತ್ರದಲ್ಲಿ ಯಾವ ಯಾವ ಕ್ರಾಪ್‌ಗಳನ್ನು ನೋಟಿಫೈ ಮಾಡಬೇಕೆನ್ನುವುದನ್ನು ಇನ್ನು ನಾವು ನಿರ್ಧರಿಸಿಲ್ಲ ನಾವು ಹೇಳುವ ತನಕ ನೀವು ಕ್ರಾಪ್‌ಗಳನ್ನು ನೋಟಿಫೈ ಮಾಡಬಾರದೆಂದು ಅವರು ತಿಳಿಸಿದ್ದಾರೆ. ಮತ್ತು ಈ ಸಾರಿ ಸ್ವಲ್ಪ ಬದಲಾವಣೆಯನ್ನು ಸಹ ಮಾಡುವವರಿದ್ದೇವೆಂದೂ ಸಹ ಅವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಸಾಕಷ್ಟು ಒತ್ತಾಯ ತಂದು ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಈ ಹಿಂದೆ ಸ್ವಲ್ಪ ಲೋಪದೋಷಗಳು ಆಗಿರಬಹುದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ೧೯೮೩–೮೪ನೇ ಇಸವಿಯಲ್ಲಿ ೨೯೧.೧೧ ಲಕ್ಷ ರೂಪಾಯಿಗಳಷ್ಟು ಕ್ಲೈಮ್ಸ್ ಕೊಡಲಾಗಿದ್ದು ಇದರಿಂದ ಸುಮಾರು ೩೪.೧೧೬ ಜನರಿಗೆ ಲಾಭವಾಗಿದೆ. ಇನ್ನು ಪ್ರೀಮಿಯಂ ಬಗ್ಗೆ ನಿನ್ನೆಯ ದಿವಸ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ ಆ ಬಗ್ಗೆ ಹೇಳುವುದಾದರೆ ಸಬ್‌ಸಿಡೈಜ್ ರೇಟ್‌ನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬೀಜ ಕೊಡಬೇಕೆಂದು ಹೇಳಿದರು, ಅದರಂತೆ ಪ್ರಿಮಿಯಂನ ೫೦ ಪರ್ಸೆಂಟ್‌ನಷ್ಟು ಹಣವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಹಾಯದೊಂದಿಗೆ ಈಗಾಗಲೇ ರೈತರಿಗೆ ಕೊಡುತ್ತಿದ್ದೇವೆ ಇವತ್ತು ೧೯೮೪–೮೫ನೇ ಇಸವಿಯಲ್ಲಿ ದ್ವಿದಳ ಧಾನ್ಯಗಳನ್ನು ೬.೨೦ ಲಕ್ಷದಷ್ಟು ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಮತ್ತು ೬೭.೯೧ರಷ್ಟು ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಕಬ್ಬು ೧೫೭.೪೬ ಲಕ್ಷದಷ್ಟು ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಹತ್ತಿ ೫.೩೭ ಲಕ್ಷದಷ್ಟು ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ತಂಬಾಕು ೦.೫೧ ಲಕ್ಷದಷ್ಟು ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ನಮ್ಮ ಕೃಷಿ ಉತ್ಪಾದನೆಯ ಗುರಿಯನ್ನು ಮುಟ್ಟಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದರ ಜೊತೆಗೆ ನಿಸರ್ಗದ ಸಹಕಾರ ಕೂಡ ನಮಗೆ ಬೇಕಾಗುತ್ತದೆ. ಈ ವರ್ಷ ಬೇಗ ಮಳೆ ಶುರುವಾಗಿದೆ ಇದರಿಂದ ರಾಜ್ಯದಲ್ಲಿ ಕೃಷಿ ಉತ್ಪಾದನೆಯ ಗುರಿ ಇಟ್ಟುಕೊಂಡಿದ್ದಕ್ಕಿಂತ ಇಮ್ಮಡಿಯಾಗಬಹುದು. ಎಂದು ನಾನು ಆಸೆ ಮಾಡುತ್ತೇನೆ. ಇನ್ನು ರಾಷ್ಟ್ರೀಯ ಎಣ್ಣೆ ಕಾಳು ಅಭಿವೃದ್ಧಿ ಯೋಜನೆಯನ್ನು ೯ ಜಿಲ್ಲೆಗಳಲ್ಲಿ ಜಾರಿಗೆ ತಂದಿದ್ದೇವೆ. ಆ ಜಿಲ್ಲೆಗಳು ಯಾವುವೆಂದರೆ ಬಿಜಾಪುರ, ಧಾರವಾಡ ರಾಯಚೂರು, ಬಳ್ಳಾರಿ, ತುಮಕೂರು ಮತ್ತು

ಚಿತ್ರದುರ್ಗ ಇಲ್ಲಿ ಚೆನ್ನಾಗಿ ಕೆಲಸ ಮಾಡಲಾಗುತ್ತಿದೆ. ಇದರಿಂದ ರೈತರು ಹೆಚ್ಚು ದರ ಪಡೆಯುವವರಿದ್ದಾರೆ. ಈ ಯೋಜನೆಯನ್ನು ಸುಮಾರು ೨೮ ಲಕ್ಷ ಎಕರೆ ಜಮೀನಿನಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಇದೊಂದು ಆಯಿಲ್ ಸೀಡ್ಸ್ ಥ್ರಸ್ಟ್ ಪ್ರೋಗ್ರಾಂ ಇದು ಸುಮಾರು ೯ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಅಷ್ಟೇ ಅಲ್ಲ ನಾವು ಇವತ್ತು ಇಡೀ ರಾಷ್ಟ್ರದಲ್ಲಿಯೇ ಎಣ್ಣೇ ಕಾಳು ಉತ್ಪಾದನೆಯಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಸಹ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಪ್ರಧಾನ ಮಂತ್ರಿಗಳ ಟೆಕ್ನಾಲಜಿ ಮೆಷನರಿ ಏನು ಇದೆ ಅವರೂ ಸಹ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಂದು ಸಂತೋಷದ ಸಂಗತಿ ಎಂದರೆ ಮಾನ್ಯ ಮಾಜಿ ಕೃಷಿ ಸಚಿವರಾದ ಶ್ರೀಮಾನ್ ಜಿ. ಎಸ್. ಧಿಲೋನ್‌ರವರು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದಾರೆ. ಅದು ಈ ರೀತಿ ಇದೆ.

Dear Sri Hegdeji,

Please refer to your D. O. Letter dated 20th May 1987. It is heartening to note that the State Government has achieved the record production of 14.84 lakhs tonnes of oil seeds under the National Oil Seeds Development programme during the year 1987–88 and has fulfilled the seventh plan target during the second year itself. I must congradulate you for this commendable efforts put up by the farmers and the officers under your administration. Indeed it is an example to be emulated by other States also.''

೧೧.೩೦ ಎ.ಎಂ.

ಈ ವರ್ಷವೂ ಸಹ ನಮ್ಮರಾಜ್ಯದಲ್ಲಿ ಒಂದು ಕೃಷಿ ವಿಷಯದಲ್ಲಿ ಒಂದು ಕ್ರಾಂತಿಯಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ. — ನಿಮಗೆ ಕೊಟ್ಟಿರುವ ಸರ್ಟಿಫಿಕೇಟನ್ನು ನೋಡಿ (ಕೇಂದ್ರ ಸರ್ಕಾರದ ಮಾಜಿ ಕೃಷಿ ಸಚಿವರು ಮುಖ್ಯಮಂತ್ರಿಯವರಿಗೆ ಬರೆದಿದ್ದ ಪತ್ರವನ್ನು ಈ ಮೊದಲು ಓದಿದ್ದರ ಬಗ್ಗೆ.) ತೃಪ್ತಿಪಟ್ಟುಕೊಳ್ಳಬೇಡಿ. ರೈತನ ಬಗ್ಗೆ ಸ್ವಲ್ಪ ಕಾಳಜಿ ವಹಿಸಿ.

ಶ್ರೀ ಆರ್. ವಿ. ದೇಶಪಾಂಡೆ.— ೧೯೮೭–೮೮ರಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ೧೪.೭೨ ಲಕ್ಷ ಟನ್‌ಗಳಷ್ಟಾಗಿತ್ತು. ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಮೊದಲಸ್ಥಾನ ಬಂದಿದೆ. ೧೯೮೮–೮೯ನೇ ಇಸವಿಯಲ್ಲಿ ಸುಮಾರು ೧೬.೩೦ ಲಕ್ಷ ಟನ್‌ಗಳಷ್ಟು ಎಣ್ಣೆಕಾಳು ಬೀಜವನ್ನು ಉತ್ಪಾದನೆಮಾಡುವುದಕ್ಕೆ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಸಾಕಷ್ಟು ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಇನ್ನೂ ಸ್ವಲ್ಪಕೆಲಸ ಆಗಬೇಕಾಗಿದೆ. ರೈತರುಗಳಿಗೆ ಹೆಚ್ಚಿನ ರೀತಿಯಲ್ಲಿ ದರ ಸಿಗಬೇಕಾದರೆ ಎಣ್ಣೆಕಾಳುಗಳನ್ನು ಪಲ್ಸಸ್ ಬೆಳೆಯುವುದು ಬಹಳ ಜಾರಿಗೆ ತರಬೇಕಾಗಿದೆ. ನಮ್ಮ ರಾಜ್ಯದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವುದರಲ್ಲೂ ಸಹ ಬಹಳ ಪ್ರಗತಿಯಾಗಿದೆ. ಈ ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ೭.೬ ಲಕ್ಷ ಟನ್‌ಗಳಷ್ಟು ದ್ವಿದಳ ಧಾನ್ಯಗಳನ್ನು ಉತ್ಪಾದನೆ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ದ್ವಿದಳ ಧಾನ್ಯಗಳು ಎಲ್ಲಾ ಜನರಿಗೆ ಸಫಿಶಿಯೆಂಟ್ ಆಗಿ ಸಿಗಬೇಕಾದರೆ ೧೦ ಲಕ್ಷ ಟನ್‌ಗಳಷ್ಟು ಉತ್ಪಾದನೆ ಮಾಡಬೇಕಾಗುತ್ತದೆ. ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚು ಮಾಡುವುದಕ್ಕಾಗಿ ಪಲ್ಸಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆಮೇಲೆ ಒಣ ಬೇಸಾಯದ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ ಒಣ ಬೇಸಾಯ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ೧೯೮೭–೮೮ನೇ ಇಸವಿಯಲ್ಲಿ ಒಂದು ಲಕ್ಷ ಇಪ್ಪತ್ತೆರಡು ಸಾವಿರ ಹೆಕ್ಟೇರ್ ಭೂಮಿಯಲ್ಲಿ ಅಭಿವೃದ್ಧಿಯಾಗಿದೆ. ಇದಕ್ಕಾಗಿ ೧೭ ಕೋಟಿ ೪೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೮–೮೯ನೇ ಇಸವಿಯಲ್ಲಿ ಒಣ ಬೇಸಾಯದ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಒಣ ಭೂಮಿ

ಯನ್ನು ಅಭಿವೃದ್ಧಿ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಇದಕ್ಕಾಗಿ ೧೯ ಕೋಟಿ ೪೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದೇವೆ. ಈಗಾಗಲೇ ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ೬೭ ರಾಷ್ಟ್ರೀಯ ಜಲಾನಯನ ಪ್ರದೇಶಗಳು ಇವೆ. ಇದರ ಜೊತೆಗೆ ಈ ವರ್ಷ ೧೨ ಕಡೆಗಳಲ್ಲಿ ಜಲಾನಯನ ೫೯ ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೇವೆ, ಇದಕ್ಕಾಗಿ ೫೪೭ ೧೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಅಲೋಕೇಟ್ ಮಾಡಿದ್ದೇವೆ. ಅದೇ ಪ್ರಕಾರ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್ ಏನು ಇದೆ ಇದು ೫೦ ಪರ್ಸೆಂಟ್ ಗ್ರ್ಯಾಂಟ್ ೫೦% ಲೋನ್ ಇದು ನಡೆಯುತ್ತಾ ಇದೆ. ಇದು ತುಂಗಭದ್ರಾ ನಿಜಾಮ್ ಸಾಗರ ಜಲಾನಯನ ಪ್ರದೇಶಗಳಲ್ಲೂ ಪ್ರಗತಿಯಾಗಿದೆ. ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರು ಮತ್ತು ಮಾನ್ಯ ಲಕ್ಕಪ್ಪನವರು ರಾಜ್ಯದಲ್ಲಿ ನೀರಾವರಿ ಕೆಲಸಗಳಿಗೆ ಹೆಚ್ಚಿನ ರೀತಿಯಲ್ಲಿ ಹಣವನ್ನು ನಿಗದಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಂಡಿದ್ದೇನೆ. ನೀರಾವರಿ ಯೋಜನೆಗಳಿಗೆ ಹಣವನ್ನು ಕೊಡಲೇಬೇಕು. ಆದರೆ, ಮುಂಗಡ ಪತ್ರದ ಸಂಪೂರ್ಣ ಹಣವನ್ನು ನೀರಾವರಿ ಯೋಜನೆಗಳಿಗೆ ಕೊಟ್ಟರೆ ಬೇರೆ ಕೆಲಸಗಳು ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು ೩೨ ಪರ್ಸೆಂಟ್‌ನಷ್ಟು ಭೂಮಿಯನ್ನು ನೀರಾವರಿ ಯೋಜನೆ ಅಡಿಯಲ್ಲಿ ಅಳವಡಿಸಬಹುದು. ಉಳಿದ ೬೮ ಪರ್ಸೆಂಟ್‌ನಷ್ಟು ಭೂಮಿಯು ಮಳೆಯನ್ನೇ ಆಶ್ರಯಿಸಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ರಾಜ್ಯದ ಬಹಳ ಜನರು ಒಣ ಭೂಮಿಯನ್ನೇ ಆಶ್ರಯಿಸಿಕೊಂಡಿದ್ದಾರೆ. ಆದ್ದರಿಂದ ಒಣ ಬೇಸಾಯವನ್ನು ಮಾಡುವ ರೈತರ ಸಮಸ್ಯೆಗಳನ್ನು ನಾವು ಬಗೆಹರಿಸುವುದು ಅಷ್ಟೇ ಮುಖ್ಯವಾಗಿರುತ್ತದೆ. ನಮ್ಮ ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ನಮ್ಮ ಮುಖ್ಯ ಮಂತ್ರಿಯವರು ಒಣ ಬೇಸಾಯದ ಬಗ್ಗೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ನಮ್ಮ ಕರ್ನಾಟಕ ರಾಜ್ಯವನ್ನು ೪ ಡಿವಿಷನ್‌ಗಳನ್ನಾಗಿ ಮಾಡಿ ಒಣ ಬೇಸಾಯದ ಕೆಲಸಗಳು ಸುಗಮವಾಗಿ ನಡೆಯುವುದಕ್ಕೆ ಯೋಜನೆಗಳನ್ನು ತಯಾರು ಮಾಡಿದರು. ನಮ್ಮ ರಾಜ್ಯದ ರೈತರುಗಳ ಸಮಸ್ಯೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಪರಿಹರಿಸಬೇಕೆನ್ನುವ ಪ್ರಾಮಾಣಿಕ ದೃಷ್ಟಿಯಿಂದ ಒಣ ಬೇಸಾಯದ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಕೆಲಸವನ್ನು ವಿಶ್ವಬ್ಯಾಂಕ್ ಮತ್ತು ಭಾರತ ಸರ್ಕಾರದವರೂ ಸಹ ಮೆಚ್ಚಿದ್ದಾರೆ. ಒಣ ಬೇಸಾಯದ ಅಭಿವೃದ್ಧಿ ಕೆಲಸಗಳನ್ನು ಮಾಡಿದ ಮೇಲೆ ೧೭.೯೫ ಪರ್ಸೆಂಟ್‌ನಷ್ಟು ಬರುತ್ತಿದ್ದ ರಾಗಿ ಬೆಳೆ ೧೯.೩೫ರಷ್ಟು ಬರುವುದಕ್ಕೆ ಪ್ರಾರಂಭವಾಯಿತು. ಜೋಳ ೧೨.೪೪ ಲಕ್ಷ ಟನ್ ಉತ್ಪಾದನೆಯಾಗಿದೆ. ಔಟ್‌ಸೈಡ್ ವಾಟರ್ ಶೆಡ್ ಏರಿಯಾದಲ್ಲಿ ಹಾರ್ಡ್‌ಲಿ ಅಂದರೆ ೮.೩೩ ಲಕ್ಷ ಟನ್ ಉತ್ಪತ್ತಿ ಆಗುತ್ತಿತ್ತು. ಅದೇ ಪ್ರಕಾರ ಶೇಂಗಾದಲ್ಲಿ ಉತ್ಪಾದನೆ ೧೩.೭೬ ಬಂದಿದೆ. ವಾಟರ್‌ಶೆಡ್‌ನ ಔಟ್‌ಸೈಡ್‌ನಲ್ಲಿ ಇದು ೮.೬೧ ಆಗಿರುತ್ತದೆ. ಅದೇ ರೀತಿ ತೊಗರಿ ೭.೩೦ ಬಂದಿದೆ. ಅದೇ ವಾಟರ್‌ಶೆಡ್‌ನ ಔಟ್‌ಸೈಡ್‌ನಲ್ಲಿ ೪.೨೭ ಬಂದಿರುತ್ತದೆ. ಹೀಗಾಗಿ ನಮಗೆ ಏನು ಅನ್ನಿಸುತ್ತದೆ ಅಂದರೆ, ಇವೊತ್ತು ಒಣಬೇಸಾಯ ಅಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ಏನು ಕೊಟ್ಟಿದ್ದೇವೆ, ಅದರಿಂದ ಇವೊತ್ತು ನಮ್ಮ ರೈತರಿಗೆ ಅನುಕೂಲವಾಗಿದೆ. ಬಹಳಷ್ಟು ಜನ ರೈತರು ಈಗ ಸ್ವತಃ ಮುಂದೆ ಬಂದು ಅವರಿಗೂ ಸಹಾಯ ಮಾಡಲು ಕೇಳುತ್ತಿದ್ದಾರೆ. ವಿಶ್ವಬ್ಯಾಂಕ್‌ನವರು ಮತ್ತು ಕೇಂದ್ರ ಸರಕಾರದವರು ಕೂಡ ಈ ಒಂದು ನಮ್ಮ ಕ್ರಮವನ್ನು ಮೆಚ್ಚಿದ್ದಾರೆ. ಕೇಂದ್ರ ಸರಕಾರವು ತನ್ನ ೨೦ ಅಂಶಗಳ ಕಾರ್ಯಕ್ರಮಗಳಲ್ಲಿ ಡ್ರೈಲ್ಯಾಂಡ್ ಅಭಿವೃದ್ಧಿಯನ್ನು ಒಂದು ಸಬ್ಜೆಕ್ಟ್‌ನ್ನಾಗಿ ಇನ್‌ಕ್ಲೂಡ್ ಮಾಡಿದೆ. ಈ ಒಂದು ಗೌರವ, ಕ್ರೆಡಿಟ್ ಕರ್ನಾಟಕ ರಾಜ್ಯಕ್ಕೆ ಸೇರುತ್ತದೆ.

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ಇದರ ಆನ್ಯುಯಲ್ ರಿಪೋರ್ಟ್‌ನ್ನು ಈಗ ನಮಗೆ ಕೊಟ್ಟಿದ್ದಾರೆ. ನಾವು ಇದನ್ನು ನೋಡಿಕೊಂಡು ಮಾತನಾಡಬೇಕಾಗಿದೆ ಅಲ್ಲವೆ? ನಾವು ರಿಪೋರ್ಟ್‌ನ್ನು ನೋಡಿ ಮಾತನಾಡಬೇಕಾದರೆ ಒಂದು ದಿನ ಮುಂಚಿತವಾಗಿಯಾದರೂ ನಮಗೆ ಇವನ್ನು ಕೊಡಬೇಕು. ಅಂಥ ಒಂದು ವ್ಯವಸ್ಥೆಯನ್ನು ದಯವಿಟ್ಟು ಮಾಡುತ್ತೀರಾ ?

ಅಧ್ಯಕ್ಷರು.—ನೀವು ಬುದ್ಧಿವಂತರು ಇದ್ದೀರಿ ಎಂದು ಈಗ ಕೊಟ್ಟಿರಬೇಕು. ನಾನು ೧೯೭೭-೭೮ರ ಪೂರ್ಣ ವರ್ಷದ ರಿಪೋರ್ಟ್‌ಗಳನ್ನು ಕೊಡುತ್ತೇವೆ ಎಂದು ಹೇಳಿದ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ. ಇನ್ನು ಇಲಾಖೆಯಲ್ಲಿನ ವಿಸ್ತರಣ ಸಿಬ್ಬಂದಿ ಚುರುಕು ಆಗಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಿಬ್ಬಂದಿ ಸಂಪರ್ಕ ಹೆಚ್ಚಿಗೆ ಆಗಬೇಕು. ಸರಿಯಾದ ಮಾರ್ಗದರ್ಶನಗಳು ಮತ್ತು ಸಹಾಯವನ್ನು ಮಾಡುವಂತಹ ಜವಾಬ್ದಾರಿಯು ಸಿಬ್ಬಂದಿ ವರ್ಗದವರ ಮೇಲೆ ಇದೆ. ಇಲಾಖೆಯು ಸಿಂಗಲ್ ವಿಂಡೋ ಏಜನ್ಸಿಯಾಗಿ ಕೆಲಸ ಮಾಡ

ಬೇಕು. ಯಾವ ರೀತಿಯಲ್ಲಿ ಒಂದು ಕೈಗಾರಿಕೆಯನ್ನು ಶುರು ಮಾಡುವಾಗ ಸಾಲವೇ ಆಗಲೀ, ಪವರ್ ವಿಚಾರವೇ ಆಗಲಿ, ಭೂಮಿಯನ್ನು ಪಡೆಯುವ ವಿಚಾರದಲ್ಲಿಯೇ ಆಗಲಿ. ಹೀಗೆ ಯಾವುದೇ ವ್ಯವಸ್ಥೆಯ ಬಗ್ಗೆ ಹೇಗೆ ಅನುಕೂಲವನ್ನು ಒದಗಿಸಿಕೊಡುತ್ತಾರೋ ಅದೇ ರೀತಿಯಲ್ಲಿ ಕೃಷಿ ಇಲಾಖೆಯೂ ಸಹ ರೈತರಿಗೆ ಸಂಪೂರ್ಣ ಪ್ರಮಾಣದಲ್ಲಿ ಏಜನ್ಸಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇವರಲ್ಲಿ ನಮ್ಮ ಇಲಾಖೆಯ ಜವಾಬ್ದಾರಿಯೂ ಇದೆ. ನಾವು ಪ್ರಾಮಾಣಿಕವಾಗಿ ಇನ್ನೂ ಸಾಕಷ್ಟು ಕೆಲಸಕಾರ್ಯಗಳನ್ನು ಈ ಬಗ್ಗೆ ಮಾಡಬೇಕಾಗಿದೆ. ಆ ಬಗ್ಗೆ ತಮ್ಮೆಲ್ಲರ ಸಹಾಯ, ಸಹಕಾರ, ಮಾರ್ಗದರ್ಶನವೂ ಕೂಡ ಅವಶ್ಯಕವಾಗಿದೆ

ಇವೊತ್ತು ನಾನು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಮೊದಲು ಆದೇಶವನ್ನು ಕೊಟ್ಟಿದ್ದಾದು ಏನೆಂದರೆ ಜಿಲ್ಲಾ ಪರಿಷತ್ತು ಸದಸ್ಯರು, ಶಾಸಕರು, ಮಂಡಲಪಂಚಾಯತಿಯ ಸದಸ್ಯರು. ಹೀಗೆ ಇವರೆಲ್ಲರನ್ನೂ ಸತತ ಸಂಪರ್ಕದಲ್ಲಿ ಇಟ್ಟುಕೊಂಡು ಈ ಕಾರ್ಯವನ್ನು ಅವರ ಸಹಾಯದೊಂದಿಗೆ ಮಾಡಬೇಕು. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಇಂತಹ ಸಂಪರ್ಕವನ್ನು ಇಟ್ಟುಕೊಂಡು ರೈತರಿಗೆ ಹೊಸ ಹೊಸ ಕೃಷಿ ಸಲಕರಣೆಗಳ ಬಗ್ಗೆ ಸಂಶೋಧನೆ ಮುಂತಾದ ಎಲ್ಲಾ ವಿವರಗಳನ್ನು ವಿವರವಾಗಿ ಮನದಟ್ಟು ಮಾಡಿಕೊಡಬೇಕು. ಅವರಿಗೆ ತಿಳುವಳಿಕೆಯನ್ನು ಕ್ರಮಬದ್ಧವಾಗಿ ಕೊಡಬೇಕು. ಆ ದೃಷ್ಟಿಯಿಂದ ನಾವುಗಳು ಕೆಲಸ ಮಾಡುತ್ತಾ ಇದ್ದೇವೆ. ಇನ್ನು ತರಬೇತಿ ಕಾರ್ಯಕ್ರಮವನ್ನು ರೈತರ ಮಕ್ಕಳಿಗೆ ಮತ್ತು ಇನ್‌ಸರ್ವೀಸ್ ಕ್ಯಾಂಡಿಡೇಟ್ಸ್‌ಗೆ ಕೊಡುವಂತಹ ಕಾರ್ಯ ನಡೆಯುತ್ತಾ ಇದೆ. ಇದರಲ್ಲಿ ಬಹಳ ಒಳ್ಳೆಯ ಕೆಲಸ ಆಗಿದೆಯೆಂದು ನಾನು ಸಂತೋಷದಿಂದ ಹೇಳಬಯಸುತ್ತೇನೆ.

ಈಗ ನಮ್ಮಲ್ಲಿ ಎರಡು ಕೃಷಿ ವಿಶ್ವವಿದ್ಯಾಲಯಗಳು ಇವೆ. ಒಂದು ಬೆಂಗಳೂರಿನಲ್ಲಿ ಮತ್ತು ಇನ್ನೊಂದು ಧಾರವಾಡದಲ್ಲಿ ಇದೆ. ೧೯೮೫-೮೬ನೇ ಸಾಲಿನಲ್ಲಿ ೮,೩೩ರಷ್ಟು ನಾವು ಪ್ಲಾನ್ ಮತ್ತು ನಾನ್‌ಪ್ಲಾನ್ ಗ್ರಾಂಟ್ಸ್‌ನ್ನು ಕೊಟ್ಟಿದ್ದೇವೆ. ಈಗ ೧೯೮೭-೮೮ರಲ್ಲಿ ೧೭.೮೮ರಷ್ಟು ಗ್ರಾಂಟ್ಸ್‌ನ್ನು ಕೊಟ್ಟಿದ್ದೇವೆ. ಆದರೆ ಇನ್ನೂ ಸಾಕಷ್ಟು ಸಮಸ್ಯೆಗಳು ಇವೆ. ಹೊಸದಾಗಿ ಪ್ರಾರಂಭವಾದ ಧಾರವಾಡದ ಯೂನಿವರ್ಸಿಟಿಗೆ ಬಹಳಷ್ಟು ಸಮಸ್ಯೆಗಳು ಇವೆ. ಅದಕ್ಕೋಸ್ಕರವಾಗಿ ಕೇಂದ್ರ ಸರಕಾರದ ಐ.ಸಿ.ಎ.ಆರ್.ನವರಲ್ಲಿ ವಿನಂತಿ ಮಾಡಿಕೊಂಡು ಡೆವಲಪ್‌ಮೆಂಟ್ ಗ್ರಾಂಟ್‌ನ್ನು ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಕೊಡಿ ಎಂದು ಕೇಳಿಕೊಂಡಿದ್ದೇವೆ. ತಮಿಳುನಾಡಿನಲ್ಲಿ ಹಿಂದೆ ಹೊಸ ವಿಶ್ವವಿದ್ಯಾನಿಲಯ ಆದಾಗ ನಾಲ್ಕು ಕೋಟಿ ರೂಪಾಯಿಗಳ ಗ್ರಾಂಟ್ಸ್‌ನ್ನು ಕೇಂದ್ರ ಸರಕಾರದವರು ಕೊಟ್ಟಿದ್ದಾರೆ. ಆ ಬಗ್ಗೆ ಮಾನ್ಯ ಮಿತ್ರರು, ವಿರೋಧಪಕ್ಷದವರು ಕೇಂದ್ರವನ್ನು ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ಧಾರವಾಡ ವಿಶ್ವವಿದ್ಯಾಲಯದವರ ವತಿಯಿಂದ ರಾಯಚೂರು ಜಿಲ್ಲೆಯಲ್ಲಿ ಒಂದು ಕೃಷಿ ಡಿಪ್ಲೋಮ ಕೋರ್ಸ್ ಇತ್ತು. ಅಲ್ಲಿ ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಕಾಲೇಜನ್ನು ಶುರು ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಹೋದಾಗ ಆ ಒಂದು ಭರವಸೆಯನ್ನು ಕೊಟ್ಟಿದ್ದರು ಅದನ್ನು ಈಗ ನಾವು ಈಡೇರಿಸಿದ್ದೇವೆ.

ಅದೇ ರೀತಿ ಬೆಂಕಿ ರೋಗ ಮುಂತಾದ ಸಸ್ಯಪೀಡೆಗಳ ವಿರುದ್ಧ ಗುಡ್ಡಗಾಡು ಪ್ರದೇಶಗಳಲ್ಲಿ ಅವನ್ನು ಕಂಟ್ರೋಲ್ ಮಾಡುವ ಸಲುವಾಗಿ ಔಷಧಿಗಳನ್ನು ರಿಲೀಸ್ ಮಾಡಿದ್ದೇವೆ. ಅಷ್ಟೇ ಅಲ್ಲ, ಎಪಿಎಂಸಿ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿದರೆ ಸಹಾಯವಾಗುತ್ತದೆಂದು ಈ ಸದನದಲ್ಲಿ ಅಭಿಪ್ರಾಯ ವ್ಯಕ್ತವಾಗಿದ್ದರಿಂದ ಅದನ್ನೂ ಅಮೆಂಡ್ ಮಾಡುತ್ತಿದ್ದೇವೆ. ಆದ್ದರಿಂದ ತಾವೆಲ್ಲರೂ ತಮ್ಮ ಭಾಗದಲ್ಲಿ ಎಪಿಎಂಸಿಗಳಲ್ಲಿ ಹಣ ಹೂಡಲು ಅವಕಾಶ ಮಾಡಿಕೊಳ್ಳಬೇಕು.

ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ೮೫—೮೬ರಲ್ಲಿ ೪೧ ಕೋಟಿ ರೂಪಾಯಿಗಳ ಟರ್ನ್ ಓವರ್ ಇದ್ದದ್ದು ೮೬—೮೭ರಲ್ಲಿ ೫೧ ಕೋಟಿ ಆಗಿದೆ. ೮೭—೮೮ರಲ್ಲಿ ೬೨ ಕೋಟಿ ಆಗಿದೆ. ಲಾಭ ೮೬—೮೭ರಲ್ಲಿ ೧೨ ೧೪ ಲಕ್ಷ ಇದ್ದದ್ದು ಈ ವರ್ಷ ಪ್ರಾವಿಷನಲಾಗಿ ೩೫ ಲಕ್ಷ ಆಗಬಹುದೆಂಬ ಅಂದಾಜು ಇದೆ. ಅದೇ ರೀತಿ ಅಕ್ಯುಮುಲೇಟೆಡ್ ಲಾಸ್ ೧೨ ಕೋಟಿ ಇದ್ದದ್ದು ೮೭—೮೮ರ ಕೊನೆಗೆ ೫ ೭೧ ಲಕ್ಷಕ್ಕೆ ಬಂದಿದೆ. ಈ ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡುತ್ತಿದ್ದು ರೈತರ ಏಳಿಗೆ ಸಾಧಿಸುವ ಜವಾಬ್ದಾರಿ ಅದರ ಮೇಲಿದೆ. ಅದೇ ರೀತಿ ಶ್ರೀ ಶಿವನಂಜಪ್ಪನವರು ಇಲ್ಲಿ ಭ್ರಷ್ಟಾಚಾರ ಇದೆ ಎಂದು ಹೇಳಿದರು. ಇಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ಇಂಥ ಕಡೆ ಎಷ್ಟು ಭ್ರಷ್ಟಾಚಾರ ಇದೆಯೆಂದು

ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ನಾನು ಕ್ರಮ ಕೈಗೊಳ್ಳುತ್ತೇನೆ. ಈ ರೀತಿ ವೇಗ್ ಆಗಿ ಕ್ಲೋರ್ಸ್ ಅಫ್ ರೂಪೀಸ್ ಮಿಸ್‌ಪ್ರೊಪ್ರಿಯೇಷನ್ ಆಗಿದೆ ಎಂದರೆ ಏನು ಮಾಡಲಿ?

ಇನ್ನು ಫರ್ಟಿಲೈಸರ್ಸ್ ವಿಚಾರದಲ್ಲಿ ಸಂಬಂಧಪಟ್ಟ ಆಗ್ರೋ ಇಂಡಸ್ಟ್ರೀಸ್ ನಿಗಮ ಒಳ್ಳೆಯ ಕೆಲಸ ಮಾಡಿದೆ. ಮಾರ್ಕೆಟ್ ಷೇರು ೧೬ ಪರ್ಸೆಂಟಿಗೆ ಏರಿತ್ತು. ೮೭—೮೮ರಲ್ಲಿ ಆಗ್ರೋ ಕೇಂದ್ರಗಳನ್ನು ಸೇಲ್ಸ್‌ಗಾಗಿ ಓಪನ್ ಮಾಡಿದ್ದೇವೆ ಸಾಕಷ್ಟು ಪ್ರಮಾಣದಲ್ಲಿ. ೮೮ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಮನೆಬಾಗಿಲಿಗೇ ಬೀಜ ಗೊಬ್ಬರ ಕೊಡುವ ದೃಷ್ಟಿಯಿಂದ ಅವು ಚುರುಕಾಗಿ ಕೆಲಸ ಮಾಡಲು ಶ್ರಮಿಸುತ್ತಿವೆ. ಅದೇ ಪ್ರಕಾರ ಆಗ್ರೋ ಫುಡ್ಸ್ ನಿಗಮದಿಂದ ಹೊಸ ಟೆಟ್ರಾಪ್ಯಾಕ್ ಎಂಬ ಫ್ರೂಟ್ ಜ್ಯೂಸನ್ನು ಹೊಸದಾಗಿ ದೇಶದಲ್ಲೇ ಮೊದಲಿಗೆ ಇಂಟರ್‌ಡ್ಯೂಸ್ ಮಾಡಲಾಗಿದೆ. ಇನ್ನು ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಕೂಡ ಒಳ್ಳೆಯ ಕೆಲಸ ಮಾಡುತ್ತಿದೆ. ೮೫—೮೬ರಲ್ಲಿ ಸೇಲ್ಸ್ ೧೨.೭೯ ಲಕ್ಷ ಇದ್ದರೆ ೮೬—೮೭ರಲ್ಲಿ ೧೩ ಲಕ್ಷ ೮೭—೮೮ರಲ್ಲಿ ೧೬.೫೦ ಲಕ್ಷ, ಮುಂದಿನ ವರ್ಷ ಸುಮಾರು ೧೭ ಕೋಟಿಯಷ್ಟು ಟರ್ನ್ ಓವರ್ ಮಾಡಬೇಕೆಂಬ ಗುರಿ ಇರಿಸಿಕೊಂಡಿದೆ. ಇದು ೮೬—೮೭ರಲ್ಲಿ ೯೧ ಲಕ್ಷ ಲಾಭ ಮಾಡಿದ್ದುದು ೮೭—೮೮ರಲ್ಲಿ ೯೯ ಲಕ್ಷ ಮತ್ತು ಮುಂದಿನ ವರ್ಷಕ್ಕೆ ೧೦೦ ಲಕ್ಷ ಲಾಭ ಮಾಡುವ ಅಂದಾಜು ಮಾಡಿಕೊಂಡಿದೆ. ಸರ್ಕಾರಿ ಎಣ್ಣೆ ಕಾಳು ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡುತ್ತಿದ್ದು ೬ ಜಿಲ್ಲೆಗಳಲ್ಲಿ ಇದು ಕೆಲಸ ಮಾಡುತ್ತಿದೆ. ೩೧-೧೦-೧೯೮೭ರ ಸಾಲಿನಲ್ಲಿ ಅದು ೨೪೦ ಸಹಕಾರ ಸಂಘಗಳ ರಿಜಿಸ್ಟರ್ ಮಾಡಿಸಬೇಕಾಗಿದ್ದು ಈಗಾಗಲೇ ೨೨೦ ಸಂಘಗಳು ಸೇಲ್ಸ್ ಸೆಂಟರಾಗಿ ರಿಜಿಸ್ಟರಾಗಿವೆ. ಮೆಂಬರ್‌ಶಿಪ್ ೯೬೦೧ ಅಕ್ಟೋಬರ್ ೮೭ರ ಹೊತ್ತಿಗೆ ಮಾಡಬೇಕಾಗಿತ್ತು? ೧೯೮೭ರಲ್ಲಿ ಆಯಿಲ್ ಸೀಡ್ಸ್ ಪ್ರೊಕ್ಯೂರ್‌ಮೆಂಟ್ ಟಾರ್ಗೆಟ್ ೧೦ ಸಾವಿರ ಟನ್ ಇದ್ದರೆ, ೨೧,೮೫೭ ಟನ್ ಉತ್ಪಾದನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇಡೀ ದೇಶದಲ್ಲಿಯೇ ನಮ್ಮ ರಾಜ್ಯ ಹೆಚ್ಚಿನ ಆಯಿಲ್ ಸೀಡ್ಸ್ ಅನ್ನು ಪ್ರೊಕ್ಯೂರ್ ಮಾಡಿ, ಸಂಸ್ಥೆ ಮೊದಲನೆಯ ಸ್ಥಾನದಲ್ಲಿ ಸಿಕ್ಕಿದೆ. ಅದೇ ರೀತಿಯಾಗಿ ಇದರ ಟರ್ನ್ ಓವರ್ ೧೯೮೫-೮೬ರಲ್ಲಿ ೫ ಕೋಟಿಯಿದ್ದರೆ ೮೬-೮೭ರಲ್ಲಿ ೨೭ ಕೋಟಿಯಾಗಿದೆ. ೧೯೮೫—೮೬ರಲ್ಲಿ ೬ ಲಕ್ಷ ರೂಪಾಯಿ ಲಾಭ ಗಳಿಸಿದ್ದರೆ ೮೬—೮೭ರಲ್ಲಿ ೨೪೦ ಲಕ್ಷ ರೂಪಾಯಿ ಲಾಭವನ್ನು ಗಳಿಸಿದೆ. National award has been presented to the Federation by Union Minister for Agriculture in April, 1987. ಒಳ್ಳೆಯ ಕೆಲಸ ಮಾಡಿದ್ದಾರೆಂದು ಕೇಂದ್ರ ಸರಕಾರ ಇವರಿಗ ನ್ಯಾಷನಲ್ ಕ್ವಾಲಿಟಿ ಅವಾರ್ಡ್ ಅನ್ನು ೮೭ರಲ್ಲಿ ಕೊಟ್ಟಿದ್ದಾರೆ. ಬೀಜ ನಿಗಮದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಬೀಜ ನಿಗಮ ಏನು ಇದೆ ಇದೊಂದು ಗವರ್ನ್‌ಮೆಂಟ್ ಬಾಡಿಯಾಗಿ ಕೆಲಸ ಮಾಡಬಾರದು ಇದು ರೈತರ ಸಂಸ್ಥೆಯಾಗಿ ರೈತರ ಸೇವೆಯನ್ನು ಮಾಡುವಂತಹ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಇಲ್ಲಿ ಕೆಲವು ವ್ಯತ್ಯಾಸಗಳು ಇವೆ ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದನ್ನು ದೂರ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. ಬೀಜದ ದರವನ್ನು ನಿಗದಿ ಮಾಡುವಲ್ಲಿ ಸೈಂಟಿಫಿಕ್ ಪದ್ಧತಿ ಇಲ್ಲ. ಕಾಸ್ಟ್ ಚಾರ್ಟರ್ಡ್ ಅಕೌಂಟ್ಸ್‌ನಿಂದ ಪ್ರೊಕ್ಯೂರ್‌ಮೆಂಟ್ ರೇಟ್ ಅನ್ನು ನಿಗದಿ ಮಾಡಿದ ನಂತರ ಯಾವ ರೇಟಿನಲ್ಲಿ ಇದನ್ನು ಬಿಕರಿ ಮಾಡಬೇಕು ಯಾವ ರೇಟಿಗೆ ಸೇಲ್ ಮಾಡಬೇಕು ಎಂಬುದನ್ನು ಸೈಂಟಿಫಿಕ್ ಆಗಿ ಸ್ಟಡೀ ಮಾಡೀ ಎಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ, ಅದು ನಡೆಯುತ್ತಿದೆ. ೧೯೮೭—೮೮ರಲ್ಲಿ ೨೧,೦೦೦ ಎಕರೆ ಪ್ರದೇಶದಲ್ಲಿ ಈ ಸೀಡ್ಸ್ ಅನ್ನು ಬೆಳೆಯಬೇಕೆಂದು ಮಾಡಿದ್ದೇವೆ ಮತ್ತು ಒಂದು ಲಕ್ಷ ಐದು ಸಾವಿರ ಕ್ವಿಂಟಾಲ್ ಸೀಡ್ಸ್ ಡಿಸ್ಟ್ರಿಬ್ಯೂಷನ್ ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೀಜದ ಬಗ್ಗೆ ತಾವು ಮಾತನಾಡುತ್ತಿದ್ದೀರಿ. ಈ ರಾಜ್ಯದಲ್ಲಿ ಇವತ್ತು ಯಾವ ರೈತನಿಂದ ಬೀಜಗಳನ್ನು ಬೆಳೆಸುತ್ತಿದ್ದೀರಿ ಅಂದರೆ ಭತ್ತ ಇರಬಹುದು. ಸೂರ್ಯಕಾಂತಿ ಬೀಜ ಇರಬಹುದು ಜೋಳ ಇರಬಹುದು. ಆತನು ಬೀಜವನ್ನು ತಂದು ಕೊಟ್ಟಮೇಲೆ ೮೦—೭೫ ಪರ್ಸೆಂಟ್ ಹಣವನ್ನು ತಕ್ಷಣ ಕೊಟ್ಟು ಉಳಿದಂತಹ ಹಣವನ್ನು ಎರಡು ಮೂರು ತಿಂಗಳಾದರೂ ಕೊಟ್ಟಿಲ್ಲ ಇದರಿಂದಾಗಿ ಆತನಿಗೆ ತೊಂದರೆಯಾಗುತ್ತದೆ. ಆತನು ಬೀಜ ಕೊಟ್ಟ ನಾಲ್ಕೈದು ದಿವಸದಲ್ಲಿ ಇದನ್ನು ಪರೀಕ್ಷೆ ಮಾಡಿ ಉಳಿದ ಹಣವನ್ನು ಕೂಡ ತಕ್ಷಣ ಕೊಟ್ಟರೆ ಒಳ್ಳೆಯದಾಗುತ್ತದೆ ಮತ್ತು ಇದರಿಂದ ಆತನಿಗೆ ಎನ್‌ಕರೇಜ್‌ಮೆಂಟ್ ಕೊಟ್ಟಹಾಗಾಗುವುದಿಲ್ಲವೇ ತಾವು ಇದನ್ನು ದಯವಿಟ್ಟು ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ನಾನು ಸೂರ್ಯಕಾಂತಿ ಬೀಜವನ್ನು ತಂದೆನೆಂದು ಇಟ್ಟುಕೊಳ್ಳಿ. ಅದಕ್ಕೆ ೯೦೦ ಚಿಲ್ಲರೆ ರೇಟ್ ಫಿಕ್ಸ್ ಮಾಡಿರುತ್ತೀರಿ. ನಾನು ೨೦ ಚೀಲ ಕೊಟ್ಟರೆ ಅದನ್ನು ಕೇರಿ ತೂರಿ ಒಳ್ಳೆಯ ಬೀಜಗಳನ್ನು ತೆಗೆದುಕೊಂಡರೆ ೧೫ ಚೀಲ ಆಗುತ್ತದೆ. ಭತ

ಕೊಟ್ಟು ೨—೩ ತಿಂಗಳಾದರೂ ಕೂಡ ಹಣವನ್ನು ಕೊಡದಿದ್ದರೆ ಅವರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿಗೆ ಇಷ್ಟು ಹಣ ಇಟ್ಟುಕೊಂಡಿದ್ದೀರಿ ಆದರೂ ಕೂಡ ಬೀಜವನ್ನು ಕೊಟ್ಟ ತಕ್ಷಣ ದುಡ್ಡು ಕೊಡುವ ವ್ಯವಸ್ಥೆ ಏಕೆ ಮಾಡುವುದಿಲ್ಲ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಒಪ್ಪಿಕೊಳ್ಳುತ್ತೇನೆ. ೭೦–೮೦ ಪರ್ಸೆಂಟ್ ಹಣವನ್ನು ತಕ್ಷಣ ಕೊಡುತ್ತೇವೆ. ಸೀಡ್ಸ್ ಸರ್ಟಿಫೈಡ್ ಏಜೆನ್ಸಿ ಎಲ್ಲಿಯವರೆಗೆ ಸರ್ಟಿಫೈಡ್ ಮಾಡುವುದಿಲ್ಲ ಅಲ್ಲಿಯವರೆಗೆ ಪೂರ್ತಿ ಹಣವನ್ನು ಕೊಡುವುದಕ್ಕೆ ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ನಾವು ಬ್ಯಾಂಕಿನಲ್ಲಿ ಡೆಪಾಜಿಟ್ ಇಟ್ಟ ತಕ್ಷಣ ಬಹಳ ದೊಡ್ಡ ಮನುಷ್ಯನೆಂದು ಅವರು ನಮಗೆ ಸಾಲ ಕೊಡುತ್ತಾರೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ.—ತಕ್ಷಣ ಸರ್ಟಿಫೈ ಮಾಡಿಸಿ.

ಶ್ರೀ ಆರ್ ವಿ. ದೇಶಪಾಂಡೆ.—ಈ ವಿಳಂಬವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ನಿಗಮ ಈ ವರ್ಷದಿಂದ ಹೊಸದಾಗಿ ಸರ್ಟಿಫೈಡ್ ತರಕಾರಿ ಬೀಜವನ್ನು ಉತ್ಪಾದನೆ ಮಾಡುವ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಮಾನ್ಯ ಲಕ್ಕಪ್ಪನವರು ೩೦ ಲಕ್ಷ ಹೆಕ್ಟೇರ್ ಭೂಮಿ ಪಡ ಇದೆ ಎಂದು ಹೇಳಿದ್ದಾರೆ ಅಷ್ಟು ಇಲ್ಲ ನಮ್ಮ ರಾಜ್ಯದಲ್ಲಿ ಪಡ ಭೂಮಿ ಇದೆ ಇಲ್ಲವೆಂದು ಹೇಳುವುದಿಲ್ಲ. ಈ ಪಡ ಭೂಮಿಯನ್ನು ಆದಷ್ಟು ಬೇಗನೆ ರೈತನು ಉತ್ಪಾದನೆ ಮಾಡಲು ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇವತ್ತು ರೈತರು ಆರ್ಥಿಕ ತೊಂದರೆಯಿಂದಾಗಿ ಕೆಲವು ಸಮಸ್ಯೆಯಿಂದಾಗಿ ಬೆಳೆಯನ್ನು ತೆಗೆದುಕೊಳ್ಳುವುದಿಲ್ಲ ಹೀಗಾಗಿ ಕರೆಂಟ್ ಫ್ಯಾಲೋ ಭೂಮಿ ೧೦.೪೪ ಲಕ್ಷ ಹೆಕ್ಟೇರ್ ಇದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಮಾನ್ಯ ಸದಸ್ಯರು ಹೇಳಿದ ಹಾಗೆ ವೇಸ್ಟ್ ಲ್ಯಾಂಡ್ ಹೆಚ್ಚಿಗೆ ಇಲ್ಲ. cultivable waste land is 4.7 lakh hectres. ನನ್ನ ಜಿಲ್ಲೆಯಲ್ಲೇ ಡಿ ಗ್ರೇಡ್ ಫಾರೆಸ್ಟ್ ಲ್ಯಾಂಡ್ ಇದೆ. ಅದನ್ನು ಕಲ್ಟಿವೇಷನ್ ಮಾಡುವುದಕ್ಕೆ ಆದರೂ, ಅದು ನಮ್ಮ ಫಾರೆಸ್ಟ್ ಇಲಾಖೆಗೆ ಸೇರಿರುವುದರಿಂದ ಆ ಲ್ಯಾಂಡನ್ನು ಪ್ಲಾಂಟೇಷನ್ ಎಂದು ಕರೆಯಲಾಗುತ್ತವೆ, ರಾಜ್ಯದಲ್ಲಿ ಎಲ್ಲೆಲ್ಲಿ ಪಡ ಬಿದ್ದಿದೆಯೋ ಅಂಥ ಭೂಮಿಯಲ್ಲಿ ಕ್ರಾಪ್ ತೆಗೆಯುವ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ಪಡ ಬಿದ್ದಿರುವ ಭೂಮಿಗೆ ಆದಷ್ಟು ಪ್ರಾಧಾನ್ಯತೆಯನ್ನು ಕೊಟ್ಟು ಕಲ್ಟಿವೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ನಾನು ಆಗಲೇ ಹೇಳಿದ ಹಾಗೆ ಡ್ರೈಲ್ಯಾಂಡ್‌ಗೆ ಬಹಳ ಮಹತ್ವವನ್ನು ನಮ್ಮ ಸರ್ಕಾರ ಕೊಡುತ್ತಿದೆ. ಮದ್ರಾಸ್‌ನಲ್ಲಿ ಯಾವ ರೀತಿ ಡ್ರೈಲ್ಯಾಂಡ್ ಬೋರ್ಡ್ ಇದೆಯೋ ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಸಹಾ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ವೇಸ್ಟ್ ಲ್ಯಾಂಡ್ ಇದೆ ಎಂದು ನಾನು ಹೇಳಿದ್ದೇನೆ ಅದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಸೇರಿಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ೭೫ ಲಕ್ಷ ಎಕರೆ ಮಾತ್ರ ಇದೆ. ಅಂದರೆ ೧೬ ಪರ್‌ಸೆಂಟ್ ಭೂಮಿ ಫಾರೆಸ್ಟ್ ಇಲಾಖೆಗೆ ಒಳಪಟ್ಟಿದೆ. ಇನ್ನು ಉಳಿದಿರತಕ್ಕಂಥ ೩೫ ಲಕ್ಷ ಎಕರೆ ಅಂದರೆ ೮ ಪರ್‌ಸೆಂಟ್ ಏನು ಇದೆ ಆ ಭೂಮಿಯನ್ನು ಭೂಸಾರ ಸಂರಕ್ಷಣಾ ಇಲಾಖೆಯವರು ಅಭಿವೃದ್ಧಿ ಪಡಿಸಿದರೆ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಾಗುತ್ತದೆಂದು ನಾನು ಹೇಳಿದ್ದೇನೆ. ಈ ಭೂಮಿ ಫಾರೆಸ್ಟ್ ಇಲಾಖೆಗೆ ಸೇರಿಲ್ಲ. ಜೊತೆಗೆ ಅದನ್ನು ಕಲ್ಟಿವೇಷನ್ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿಯೂ ಬೇಕಾಗಿಲ್ಲ, ಅದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿಯೇ ಇದೆ.

ಶ್ರೀ ಆರ್. ವಿ. ದೇಶಪಾಂಡೆ.—ತಮ್ಮ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಮದ್ರಾಸ್‌ನಲ್ಲಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಯಾವ ರೀತಿ ಇದೆಯೋ ಅದೇ ರೀತಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ನಮ್ಮ ಜನತಾ ಸರ್ಕಾರ ಬಂದ ನಂತರ ಅಂದರೆ ೧೯೮೪ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದೇವೆ. ಈ ಬೋರ್ಡಿನ ಅಡಿಯಲ್ಲಿ ಒಣ ಬೇಸಾಯದ ಅಭಿವೃದ್ಧಿಗೆ ಸಾಕಷ್ಟು ಪ್ರಾಶಸ್ತ್ಯ ಕೊಟ್ಟಿದ್ದೇವೆ, ಅದರ ಸಲುವಾಗಿ ಕರ್ನಾಟಕದಲ್ಲಿ ನಾಲ್ಕು ಡಿವಿಜನ್‌ಗಳನ್ನು ಮಾಡಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಫಾರಂ ಮಾಡಿದ್ದೇವೆ, ಈ ಬೋರ್ಡ್ ಸರಿಯಾಗಿ ಕಾರ್ಯವನ್ನು ಮಾಡುತ್ತಿದೆ. ಅದೇ ರೀತಿ ಭೂಸಾರ ಸಂರಕ್ಷಣಾ ಕೆಲಸ ಏನಿದೆಯೋ ಅದೂ

ಸಹಾ ಪ್ರಾಮಾಣಿಕವಾಗಿ ರಚನಾತ್ಮಕವಾಗಿ ಮತ್ತು ಸ್ಪೆಸಿಫಿಕ್ ಆಗಿ ಕೆಲಸ ಮಾಡುತ್ತಿದೆ. ನಮ್ಮ ಇಲಾಖೆಯಲ್ಲಿ ಕೆಲವು ಕಡೆ ಸರಿಯಾಗಿ ಕೆಲಸ ನಡೆಯದೇ ಇರಬಹುದು. ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅಂಥ ಆಫೀಸರ್ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡಿದ್ದೇನೆ. ನಮ್ಮ ಕೆಲಸದಲ್ಲಿ ಸ್ವಲ್ಪ ಲೋಪದೋಷಗಳು ಇರಬಹುದು, ಅವುಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರಾದ ಲಕ್ಕಪ್ಪನವರು ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ಕೊಟ್ಟಿಗೆ ಗೊಬ್ಬರವನ್ನು ಕೃಷಿ ಇಲಾಖೆಯವರು ತಯಾರು ಮಾಡಿ ರೈತರುಗಳಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎಂದು, ಈ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೊಟ್ಟಿಗೆ ಗೊಬ್ಬರವನ್ನು ಭೂಮಿಗೆ ಹಾಕುವುದರಿಂದ ಫರ್ಟಿಲಿಟಿ ಹೆಚ್ಚಾಗುತ್ತದೆ. ಫರ್ಟಿಲಿಟಿ ಹೆಚ್ಚಾಗುವುದರಿಂದ ರೈತರಿಗೆ ಹೆಚ್ಚಿನ ಉತ್ಪಾದನೆ ಸಿಗುತ್ತದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ಇಲಾಖೆಯ ವತಿಯಿಂದ ಹೋದ ವರ್ಷ ಹಸಿರು ಗೊಬ್ಬರವನ್ನು ಆರು ಲಕ್ಷ ಅರವತ್ತೈದು ಸಾವಿರ ಟನ್ ಉತ್ಪತ್ತಿ ಮಾಡಿ ರೈತರುಗಳಿಗೆ ಹಂಚಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ರೈತರುಗಳ ಬಗ್ಗೆ ಮಾತನಾಡುತ್ತಾ ರೈತರುಗಳು ಸಾಲದಲ್ಲಿಯೇ ಹುಟ್ಟಿ ಸಾಲದಲ್ಲಿಯೇ ಸಾಯುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ, ಅದು ನಿಜವಿರಬಹುದು. ಅದರ ಸಲುವಾಗಿ ಜನತಾ ಸರ್ಕಾರ ಬಂದನಂತರ ರೈತರುಗಳಿಗೆ ಹಲವಾರು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ಸಾಲಕ್ಕೆ ತೆಗೆದುಕೊಳ್ಳುವ ದಂಡದ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಫೈಲ್ಡ್ ಬಾವಿಗಳಿಗೆ ಕನ್ಸೆಷನ್ ಕೊಟ್ಟಿದ್ದೇವೆ. ಇದೇ ರೀತಿ ಹಲವಾರು ರೀತಿಯಲ್ಲಿ ರೈತರುಗಳಿಗೆ ಸಹಕಾರ ಸಂಘಗಳ ಮೂಲಕ ಮತ್ತು ಬ್ಯಾಂಕುಗಳ ಮೂಲಕ ಸಹಾಯವನ್ನು ಮಾಡಿದ್ದೇವೆ. ಪ್ರತಿಯೊಂದು ರೈತ ಕುಟುಂಬವೂ ಎರಡು ಸಾವಿರ ಇಸವಿಯೊಳಗೆ ಆರ್ಥಿಕವಾಗಿ ಮುನ್ನಡೆಯುವುದಕ್ಕೆ ಅನುಕೂಲವಾಗಲಿ ಎಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಮಾನ್ಯ ಸಹಕಾರ ಸಚಿವರಾದ ಏಕಾಂತಯ್ಯನವರು ಮಾತನಾಡುತ್ತಾ ರೈತರುಗಳು ತಮ್ಮ ಸಾಲವನ್ನು ಸಹಕಾರ ಸಂಘಗಳಿಗೆ ಸಮಯಕ್ಕೆ ಸರಿಯಾಗಿ ಪಾವತಿ ಮಾಡಿರುವುದರಿಂದ ದಂಡದ ಬಡ್ಡಿ ವಸೂಲು ಮಾಡಿಲ್ಲವೆಂದು ಹೇಳಿದರು. ಇಡೀ ವಿಶ್ವದಲ್ಲಿಯೇ ಜನತಾ ಸರ್ಕಾರವನ್ನು ಬಿಟ್ಟರೆ ಯಾವ ಸರ್ಕಾರ ರೈತರಿಂದ ದಂಡದ ಬಡ್ಡಿ ಬಿಟ್ಟು ಸಾಲವನ್ನು ವಸೂಲು ಮಾಡಿದೆ ? ನಾವು ಅಸಲನ್ನು ಮಾತ್ರ ತೆಗೆದುಕೊಳ್ಳುತ್ತೇವೆ, ದಂಡದ ಬಡ್ಡಿಯನ್ನು ತೆಗೆದುಕೊಳ್ಳುವುದಿಲ್ಲ. ಇವೊತ್ತು ಯಾವ ಸರ್ಕಾರ ರೈತರಿಗೆ ಸಾಲ ಕೊಟ್ಟು ಅಸಲನ್ನು ಮಾತ್ರ ತೆಗೆದುಕೊಳ್ಳುತ್ತಾ ಇದೆ? ನಮ್ಮ ಸರ್ಕಾರ ಮಾತ್ರ ಆ ಕೆಲಸ ಮಾಡುತ್ತಾ ಇದೆ. ಇಸ್ಲಾಮಿಕ್ ಧರ್ಮದಲ್ಲಿ ಬಡ್ಡಿಯನ್ನು ತೆಗೆದುಕೊಳ್ಳುವುದಿಲ್ಲ, ಅದೇ ರೀತಿ ನಾವು ಕೇವಲ ಅಸಲನ್ನು ಮಾತ್ರ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಜನತಾ ಸರ್ಕಾರ ಮಾಡುತ್ತಿದೆಯೋ ? ಇವೊತ್ತು ನೀವು ರೈತರ ಪರವಾಗಿ ಮಾತನಾಡುತ್ತಾ ಇದ್ದೀರಿ, ಸಾಲ ಕೊಡಬೇಕು, ಅದಕ್ಕೆ ಕೆಲವು ರಿಯಾಯಿತಿಗಳನ್ನು ಕೊಡತಕ್ಕ ಯೋಜನೆ ಮಾಡಬೇಕು. ನೀವು ಬರೀ ಅಸಲು ಮಾತ್ರ ತೆಗೆದುಕೊಳ್ಳುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆ, ಎಂದರೆ ಸರ್ಕಾರ ನಡೆಸುವುದಕ್ಕೆ ಆಗುತ್ತದೆಯೋ ? ನೀವು ಏನು ಸರ್ಕಾರದ ಹಣವನ್ನು ದಾನ ಮಾಡುವುದಕ್ಕೆ ಹೊರಟಿದ್ದೀರಾ ?

(ಗೊಂದಲ)

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಎಷ್ಟು ಪ್ರೀತಿ ರೈತರ ಮೇಲೆ...

ಉಪಾಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ರೈತರಿಗೆ ರಿಯಾಯಿತಿ ತೋರಿಸುತ್ತಿದೆ. ಕೈಗಾರಿಕಾ ಉದ್ಯಮಗಳಿಗೆ ಸಾಲ ಕೊಡುತ್ತಿದೆ.

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಲ್ಲಪ್ಪನವರು ಏಕೆ ಮಾತನಾಡುತ್ತಿದ್ದಾರೆ ?

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಲ್ಲಪ್ಪನವರು ಮಾತನಾಡಿದ್ದುದನ್ನು ರೆಕಾರ್ಡ್‌ಗೆ ಹಾಕಬಾರದು.

ಉಪಾಧ್ಯಕ್ಷರು.—ಅದನ್ನು ತೆಗೆಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರ ಪರವಾಗಿ ಇವರೂ ಇಲ್ಲ, ಇವರ ಪಕ್ಷವೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಎಷ್ಟು ಪರ ಇದ್ದೀರಿ ಎಂದು ಆ ಮೇಲೆ ಹೇಳುತ್ತೇನೆ.

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ, ರೈತರ ಪರವಾಗಿ ನಾವು ಇಲ್ಲ, ಎಂದು. ನಿಮ್ಮ ಪಕ್ಷ ಇದೆಯೇ ? ನಿಮ್ಮ ಪಕ್ಷ ಇದ್ದರೆ, ರೈತರು ಎಲ್ಲರೂ ಸೇರಿಕೊಂಡು 'ಕನ್ನಡ ದೇಶ' ಎಂದು ಒಂದು ರಾಜಕೀಯ ಪಕ್ಷ ಮಾಡುತ್ತಿರಲಿಲ್ಲ. ಏಕೆ ಮಾಡಿಕೊಂಡರು ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜೇತ್ಮಲಾನಿ ರೈತರೋ ?

ಉಪಾಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ರಘುಪತಿ.—ಪ್ರಧಾನಿಯವರಿಗೆ ರೈತರ ಬಗ್ಗೆ ಗೊತ್ತಿಲ್ಲ.

(ಗೊಂದಲ)

೧೧-೦೦ ಎ.ಎಂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ರೈತರ ಬಗ್ಗೆ ಶ್ರೀಮಾನ್ ಬೊಮ್ಮಾಯಿ ಅವರಿಗೆ ಮತ್ತು ಮಾನ್ಯ ಸದಸ್ಯರಾದ ಶ್ರೀ ರೇವಣ್ಣಸಿದ್ದಪ್ಪನವರಿಗೆ ಬಹಳ ಕಳಕಳಿ ಇವೆ. ಆದರೆ ಇಲ್ಲಿ ರೈತರು ಅಂದರೆ ಯಾರು ಎಂಬ ಪ್ರಶ್ನೆ ಬರುತ್ತದೆ ? ರೈತರು ಅಂದರೆ, ಅದರಲ್ಲಿ ಜಮೀನುದಾರರೂ ಬರುತ್ತಾರೆ ಮತ್ತು ಕೃಷಿ ಕಾರ್ಮಿಕರು ಮತ್ತು ಕೂಲಿಗಾರರು ಸಹ ಬರುತ್ತಾರೆ. ಆದ್ದರಿಂದ ಇವರು ಯಾರ ಪರವಾಗಿದ್ದಾರೆ ? ಇವರು ಕೃಷಿ ಕೂಲಿಗಾರರ ಪರವಾಗಿದ್ದರೆ ಅವರ ಜೀವನಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕು. ಸಣ್ಣ ಸಣ್ಣ ರೈತರಿಗೆ ಅನುಕೂಲ ಮಾಡಿಕೊಟ್ಟು ನಂತರ ರೈತರ ಪರವಾಗಿದ್ದೇವೆಂದು ಹೇಳಲಿ. ಕೋಟ್ಯಾಧೀಶ್ವರರು ಏನಾದರೂ ರೈತರಾಗುವುದಕ್ಕೆ ಸಾಧ್ಯವೇ ? ಇನ್ನೂರು ಎಕರೆಗಳಷ್ಟು ಪ್ಲಾಂಟೇಷನ್ ಜಮೀನನ್ನು ಇಟ್ಟುಕೊಂಡಿರುವ ಯಜಮಾನರುಗಳು ರೈತರಾಗುತ್ತಾರೆಯೇ ಇಂತಹವರಿಗೆ ಅನುಕೂಲ ಮಾಡಿಕೊಡುವುದು ಸರಿಯೇ ? ರೈತರ ಬಗ್ಗೆ ಮಾನ್ಯ ಬೊಮ್ಮಾಯಿ ಅವರು ಮಂತ್ರಿಗಳಾಗುವುದಕ್ಕೆ ಮುಂಚೆ ಒಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ಯಾವುದನ್ನು ಇಲ್ಲಿಯವರೆಗೆ ಕಾರ್ಯಗತ ಮಾಡಿದ್ದೀರೆಂಬುದನ್ನು ತಾವು ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂದಾಯ ಇಲಾಖೆಯ ಬೇಡಿಕೆಗಳು ಇಲ್ಲಿ ಚರ್ಚೆಗೆ ಬಂದಾಗ ಇದರ ಬಗ್ಗೆ ಹೇಳುತ್ತೇನೆ, ನಾನು ಕೊಟ್ಟ ವರದಿಯಲ್ಲಿ ಏನೇನು ಶಿಫಾರಸ್ಸುಗಳನ್ನು ಮಾಡಲಾಗಿತ್ತು, ಅದರಲ್ಲಿ ಯಾವುದನ್ನು ಜಾರಿಗೆ ಕೊಟ್ಟಿದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಕಂದಾಯ ಮಂತ್ರಿಗಳಾದ ಮೇಲೆ ನೀವೇ ಕೊಟ್ಟ ವರದಿಯನ್ನು ಜಾರಿಗೆ ತರಲು ಪ್ರಯತ್ನ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು ? ನಿಮ್ಮ ದೃಷ್ಟಿಯಲ್ಲಿ ಯಾರು ನಿಜವಾದ ರೈತರು ಎಂಬುದನ್ನು ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರು, ನಾಳೆ ಕಂದಾಯ ಇಲಾಖೆಯ ಬೇಡಿಕೆಗಳು ಇಲ್ಲಿ ಚರ್ಚೆಗೆ ಬರುತ್ತವೆ. ಆ ಸಂದರ್ಭದಲ್ಲಿ ನಾನು ಜನತಾ ಪಕ್ಷದ ಅಧ್ಯಕ್ಷನಾಗಿ ಮತ್ತು ವಿರೋಧ ಪಕ್ಷದ ನಾಯಕನಾಗಿ ಕೊಟ್ಟಂತಹ ವರದಿಗಳು ಏನಿವೆ, ಅವರಲ್ಲಿರುವ ಯಾವ ಯಾವ ಅಂಶಗಳನ್ನು ಕಾರ್ಯಗತ ಮಾಡಲಾಗಿದೆ ಎಂಬತಕ್ಕಂಥ ವಿವರಗಳನ್ನು ಕೊಡುತ್ತೇನೆ. ಅದರ ಮೇಲೆ ನೀವು ಚರ್ಚೆ ಮಾಡಿ. ನಾನು ಹೇಳುವುದು ಸಮಂಜಸವಾಗಿದ್ದರೆ ನೀವು ಒಪ್ಪಿಕೊಳ್ಳಿ, ಇಲ್ಲದಿದ್ದರೆ ಟೀಕೆ ಮಾಡಿ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಮಾನ್ಯ ಬಸವಲಿಂಗಪ್ಪನವರು ದೊಡ್ಡ ರೈತರ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿರುವ ರೈತರ ಸಂಖ್ಯೆಯಲ್ಲಿ ಶೇಕಡ ಒಂದರಷ್ಟು ಮಾತ್ರ ದೊಡ್ಡ ರೈತರಿದ್ದಾರೆ. ಶೇಕಡ ೩೯ರಷ್ಟು ಸಣ್ಣ ರೈತರಿದ್ದಾರೆ. ಶೇಕಡ ೬೦ ರಷ್ಟು ಮಧ್ಯಮ ವರ್ಗದ ರೈತರಿದ್ದಾರೆ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬಾಬುರೆಡ್ಡಿ ಪಿ. ತುಂಗಳ್.—ಕುಮಾರಾ ಕೃಪಾದಲ್ಲಿರುವವರು ರೈತರಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ.—ಇವೊತ್ತು ನಮ್ಮ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಏನಿದ್ದಾರೆ, ಇವರು ಕೇವಲ ಕೃಷಿಯನ್ನೇ ಅವಲಂಬಿಸಿದರೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುವುದಿಲ್ಲವೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿ ವ್ಯವಸಾಯದ ಭೂಮಿ ಕಡಿಮೆ ಇದೆ. ಈ ಕಾರಣದಿಂದ ವ್ಯವಸಾಯದ ಜೊತೆಗೆ ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ ಡೈರಿ ಮುಂತಾದ ಪೂರಕ ಕಸಬುಗಳನ್ನು ಕೈಗೊಳ್ಳಲು ನಾವು ಈ ಸಣ್ಣ ರೈತರಿಗೆ ಉತ್ತೇಜನ ಕೊಡುತ್ತಿದ್ದೇವೆ. ಈ ರೀತಿ ಉತ್ತೇಜನ ಕೊಡುವುದರಿಂದ ಇವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆಂದು ಸರ್ಕಾರ ತಿಳಿದುಕೊಂಡು ಪೂರಕ ಕಸಬುಗಳನ್ನು ಕೈಕೊಳ್ಳಲು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇವೊತ್ತು ರೈತರು ಬೆಳೆದ ಮಾಲಿಗೆ ನ್ಯಾಯವಾದ ಬೆಲೆ ಸಿಗಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಕೊಡಬೇಕು ಎಂಬ ಬಗ್ಗೆ ಯಾರೂ ಸಹ ವಿರೋಧ ಮಾಡುವುದಿಲ್ಲ. ಆದರೆ ಇವೊತ್ತು ನ್ಯಾಯವಾದ ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರ. ಮೊದಲು ಕೇಂದ್ರದಲ್ಲಿರುವ ಅಗ್ರಿಕಲ್ಚರಲ್ ಪ್ರೈಸ್ ಅಂಡ್ ಕಾಸ್ಟ್ ಕಮೀಷನ್ ಅವರು ಬೆಲೆಗಳನ್ನು ನಿಗದಿ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ. ನಂತರ ಇವರ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಬೆಲೆಗಳನ್ನು ನಿಗದಿ ಮಾಡುತ್ತಾರೆ.

ನಾನು ಇವತ್ತು ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಸಂಕ್ರಿ ಕೊಪ್ಪ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಿದ್ದುದು ಭತ್ತಕ್ಕೆ ೨೫೫ ರೂಪಾಯಿ. ಆದರೆ ನಿಗದಿಯಾಗಿದ್ದು ೧೬೦ ರೂಪಾಯಿ, ೧೭೦ ರೂಪಾಯಿ ಮತ್ತು ೧೮೦ ರೂಪಾಯಿ, ಇದು ಕಾಮನ್ ಫೈನ್ ಮತ್ತು ಸೂಪರ್ ಫೈನ್‌ಗೆ ಜೋಳಕ್ಕೆ ನಾವು ೨೧೫ ರೂಪಾಯಿ ರೆಕಮೆಂಡ್ ಮಾಡಿದ್ದುದು. ಕೇಂದ್ರ ಸರ್ಕಾರದವರು ೧೪೫ ರೂಪಾಯಿ ನಿಗದಿ ಮಾಡಿದ್ದಾರೆ. ಬಾಜ್ರಾಕ್ಕೆ ೧೯೫ ರೂಪಾಯಿ ರೆಕಮೆಂಡ್ ಮಾಡಿದರೆ ಕೇಂದ್ರ ಸರ್ಕಾರದವರು ೧೪೫ ರೂಪಾಯಿ ನಿಗದಿ ಮಾಡಿದ್ದಾರೆ. ಮೈಸ್‌ಗೆ ೨೨೯ ರೂಪಾಯಿ ನಾವು ಹೇಳಿದೆವು ಅವರು ೧೫೫ ರೂಪಾಯಿ ನಿಗದಿ ಮಾಡಿದ್ದಾಗ, ರಾಗಿಗೆ ೧೯೭ ರೂಪಾಯಿ ಹೇಳಿದೆವು, ಅವರು ೧೪೫ ರೂಪಾಯಿ ಮಾಡಿದ್ದಾರೆ. ತೊಗರಿಗೆ ೫೭೦ ರೂಪಾಯಿ ನಾವು ರೆಕಮೆಂಡ್ ಮಾಡಿದ್ದು ಅವರು ೩೬೦ ರೂಪಾಯಿ ಮಾಡಿದ್ದಾರೆ ಮುಂಗ್‌ಗೆ ೫೩೦ ರೂಪಾಯಿ ನಾವು ಮಾಡಿದೆವು ಅವರು ೩೬೦ ರೂಪಾಯಿ ನಿಗದಿ ಮಾಡಿದ್ದಾರೆ ಬ್ಲಾಕ್ ಗ್ರಾಂಗೆ ೬೨೦ ರೂಪಾಯಿ ಮಾಡಿದೆವು ಅವರು ೩೬೦ ರೂಪಾಯಿ ಮಾಡಿದ್ದಾರೆ ಶೇಂಗಾಗೆ ೬೨೫ ರೂಪಾಯಿ ರೆಕಮೆಂಡ್ ಮಾಡಿದೆವು ಅವರು ೪೩೦ ರೂಪಾಯಿ ನಿಗದಿ ಮಾಡಿದ್ದಾರೆ ಸೋಯಾಬೀನ್‌ಗೆ ೩೪೫ ರೂಪಾಯಿ ರೆಕಮೆಂಡ್ ಮಾಡಿದೆವು. ಅವರು ೩೫೦ ರೂಪಾಯಿ ನಿಗದಿ ಮಾಡಿದ್ದಾರೆ. ಸೂರ್ಯಕಾಂತಿಗೆ ೬೨೨ ರೂಪಾಯಿ ನಾವು ರೆಕಮೆಂಡ್ ಮಾಡಿದೆವು ಕೇಂದ್ರ ಸರ್ಕಾರದವರು ೫೪೫ ರೂಪಾಯಿ ನಿಗದಿ ಮಾಡಿದ್ದಾರೆ. ಹೈಬ್ರಿಡ್ ಕಾಟನ್‌ಗೆ ೬೭೦ ರೂಪಾಯಿ ರೆಕಮೆಂಡ್ ಮಾಡಿದೆವು ಅವರು ೬೦೦ ರೂಪಾಯಿ ನಿಗದಿ ಮಾಡಿದ್ದಾರೆ. ಮೊದಲು ನಾವು ಸಂಕ್ರಿ ಕೊಪ್ಪ ಸಮಿತಿಯನ್ನು ಸ್ಥಾಪನೆ ಮಾಡಿದೆವು. ಅವರ ರೆಕಮೆಂಡೇಷನ್ ಮತ್ತು ನಮ್ಮ ಕೃಷಿ ಇಲಾಖೆಯವರು ಅಭ್ಯಾಸ ಮಾಡಿ ಈ ಬೆಲೆಗಳನ್ನು ರೆಕಮೆಂಡ್ ಮಾಡಿದ್ದೇವೆ. ಇವತ್ತು ಆ ರೆಕಮೆಂಡೇಷನ್ ಬಗ್ಗೆ ಕೇಂದ್ರ ಸರ್ಕಾರ ಕಣ್ಣು ತೆಗೆದು ನೋಡಿಲ್ಲ. ಇವತ್ತು ನ್ಯಾಯವಾದ ಬೆಲೆಯನ್ನು ನಿಗದಿ ಮಾಡುವ ಅಧಿಕಾರವನ್ನು ದೇಶದ ಜನ ನಮ್ಮ ಕೈಗೆ ಕೊಟ್ಟರೆ ನಾವು...

ನಿಜವಾಗಿ ಕೆಲಸ ಮಾಡುತ್ತೇವೆ ಇವತ್ತು ಪ್ರಾಮಾಣಿಕವಾಗಿ ಸದನಕ್ಕೆ ಹೇಳುತ್ತೇನೆ. ಇವತ್ತು ಈ ಅಧಿಕಾರ ನಮಗೆ ಇಲ್ಲದಿರುವಾಗ ಈ ಬಗ್ಗೆ ತಾವು ಕೇಳಿದಾಗ ನಾವು ಏನು ಮಾಡಬೇಕು ? ಅಗ್ರಿಕಲ್ಚರಲ್ ಕಾಸ್ಟ್ಸ್ ಪ್ರೈಸ್‌ಗೆ ನಾವು ಒತ್ತಾಯ ಮಾಡುತ್ತಾ ಇದ್ದೇವೆ. ಇವತ್ತು ರೈತ ಪ್ರತಿನಿಧಿಗಳಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಿ ಎಂಬ ಬೇಡಿಕೆ ಇದೆ. ಒಂದು ಸಂತೋಷದ ಸಂಗತಿ ಎಂದರೆ. ಮೊನ್ನೆ ಭಜನ್‌ಲಾಲ್‌ರವರು ೩ ಜನ ರೈತ ಪ್ರತಿನಿಧಿಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇವತ್ತು ದಕ್ಷಿಣ ಹಿಂದೂಸ್ತಾನದಲ್ಲಿ ಮತ್ತು ಉತ್ತರ ಹಿಂದೂಸ್ತಾನದಲ್ಲಿ ಹವಾಮಾನ ಮತ್ತು ಸೋಯಿಂಗ್ಸ್‌ಗೆ ವ್ಯತ್ಯಾಸ ಇದೆ, ಕಾಸ್ಟ್ ಆಫ್ ಪ್ರೊಡಕ್ಷನ್‌ನಲ್ಲಿ ವ್ಯತ್ಯಾಸ ಇದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಆ ಒಂದು ಕಮಿಷನ್‌ನಲ್ಲಿ ರೈತರಿಗೆ ಹೆಚ್ಚಿನ ಆದ್ಯತೆ ಕೊಡಿ ಎಂದು ಕೇಳುತ್ತಿದ್ದೇವೆ. ಅಷ್ಟೇ ಅಲ್ಲ, ಇವತ್ತು ರೈತರಿಗೆ ಅವರ ಕಾಸ್ಟ್ ಆಫ್ ಪ್ರೊಡಕ್ಷನ್ ಏನಿದೆ ಅದರ ಮೇಲೆ ಕನಿಷ್ಟ ೧೫ ಪರ್ಸೆಂಟ್ ಪ್ರಾಫಿಟ್ ಬರುವ ಹಾಗೆ ದರ ನಿಗದಿ ಮಾಡಿ ಎಂದು ಪತ್ರ ಬರೆದಿದ್ದೇವೆ. ನಿನ್ನೆ ಇದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಪತ್ರ ಬಂದಿದೆ. ನ್ಯಾಯವಾದ ಬೆಲೆ ಸಿಗಬೇಕು ಎಂದು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಇದರಲ್ಲಿ ತಮ್ಮ ಸಹಕಾರ ಬೇಕು ತಾವೂ ಸಹ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಇವತ್ತು ರೈತರಿಗೆ ನ್ಯಾಯವಾದ ಬೆಲೆ ಸಿಗಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕಾಗಿದೆ. ರೈತರು ಸಾಕಷ್ಟು ತೊಂದರೆಯಲ್ಲಿದ್ದಾರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜೋಳವಾಗಲಿ, ಅಕ್ಕಿಯಾಗಲಿ, ಗೋಧಿಯಾಗಲಿ ರೈತ ಏನು ಉತ್ಪಾದನೆ ಮಾಡುತ್ತಾನೋ ಅದನ್ನು ಅರ್ಬನ್ ಏರಿಯಾಸ್‌ನಲ್ಲಿ ಸಬ್ಸಿಡೈಸ್ ಮಾಡಿ ಮಾರಾಟ ಮಾಡುತ್ತೇವೆ. ಆದರೆ ಕೈಗಾರಿಕೆಗಳಿಂದ ತಯಾರು ಮಾಡಿದ ವಸ್ತುಗಳು, ಅಂದರೆ ಸೋಪು ಇರಬಹುದು, ಬಟ್ಟೆ ಇರಬಹುದು ಅಥವಾ ಎಣ್ಣೆ ಇರಬಹುದು ಅದನ್ನು ಇವತ್ತು ಸಬ್ಸಿಡೈಸ್ ರೇಟ್‌ನಲ್ಲಿ ಕೊಡುತ್ತಾ ಇಲ್ಲ. ಇದರ ಸಲುವಾಗಿ ಕೇಂದ್ರ ಸರ್ಕಾರ ಇವತ್ತು ತನ್ನ ಕೃಷಿ ನೀತಿಯಲ್ಲಿ ಮತ್ತು ಕೈಗಾರಿಕಾ ನೀತಿಯಲ್ಲಿ ಬದಲಾವಣೆ ಮಾಡಬೇಕಾಗಿದೆ, ಬದಲಾವಣೆ ಮಾಡಬೇಕಾದ ಜವಾಬ್ದಾರಿ ಅವರ ಮೇಲೆ ಇದೆ. ನಮ್ಮ ರಾಜ್ಯದಲ್ಲಿ, ರಾಜ್ಯ ಸರ್ಕಾರದ ಇತಿಮಿತಿಯಲ್ಲಿ ಏನು ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುತ್ತಿದ್ದೇವೆ, ಇನ್ನು ಮುಂದೂ ಸಹ ಮಾಡುತ್ತೇವೆ. ತಾವು ಮಾರ್ಕೆಟಿಂಗ್ ಬಗ್ಗೆ ಹೇಳಿದಿರಿ ನಿಜ. ಇವತ್ತು ಕಾಫಿ ಬೋರ್ಡ್ ಮೂಲಕ ಯಾವ ರೀತಿ ಕಾಫಿ ಮಾರ್ಕೆಟಿಂಗ್ ಆಗುತ್ತಿದೆಯೋ ಆ ರೀತಿ ಈ ಬೆಳೆಗಳು ಆಗಬೇಕು. ಇದು ಸರಿ. ಇಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕಾಗಿದೆ. ಎಂ.ಪಿ.ಎಂ.ಸಿ.ಯಲ್ಲಿ ಈ ಕೆಲಸ ನಡೆಯುತ್ತಿದೆ, ಆದರೂ ಸಹ ಇವತ್ತು ಇದಕ್ಕಿಂತ ಹೆಚ್ಚಿನ...

ಶ್ರೀ ಬಿ. ಬಸವಲಿಂಗಪ್ಪ.— ಅದೆಲ್ಲಾ ಎ ಪಿ ಎಂ.ಸಿ. ಕೆಲಸ, ಆ ಕೆಲಸ ದೇಶದಲ್ಲಿ ನಡೆದಿದೆ. ಆದರೆ ನಿಮ್ಮದು ಅತಿಶಯವಾದಂಥ ಹೆಚ್ಚಿನ ಕೆಲಸ ಏನು ಎನ್ನುವುದನ್ನು ಹೇಳಿ ? ದಯಮಾಡಿ ಇದನ್ನು ಹೇಳಿದರೆ ನಾವು ಋಣಿಯಾಗಿರುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ.— ತಾವು ಹಿರಿಯ ಸದಸ್ಯರು ತಾವು ಡಿಬೇಟ್‌ನಲ್ಲಿ ಇದ್ದಿಲ್ಲ, ಮಾನ್ಯ ಸದಸ್ಯರುಗಳು ಈ ಪಾಯಿಂಟನ್ನು ರೈಸ್ ಮಾಡಿದಾಗ ರಿಪ್ಲೈ ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ.— ನೀವು ಹೆಚ್ಚಿನ ಕೆಲಸ ಏನು ಮಾಡಿದಿರಿ ಎನ್ನುವುದನ್ನು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.— ಅದರ ಬಗ್ಗೆ ನಾನು ಹೇಳಿದ್ದೇನೆ. ತಾವು ಸಭೆಯಲ್ಲಿ ಇದ್ದಿಲ್ಲ. ಲೇಟಾಗಿ ಬಂದಿರಿ ಕೇಳುವ ಸೌಜನ್ಯತೆ ಇರಲಿ ಕೇಳುವ ಸೌಜನ್ಯತೆಇದ್ದರೆ ಸಾಕು. ಮಾರ್ಕೆಟಿಂಗನ್ನೂ ಸಹ ನಾವು ಚೆನ್ನಾಗಿ ಡೆವಲಪ್‌ಮೆಂಟ್ ಮಾಡಬೇಕಾಗಿದೆ. ಆಮೇಲೆ ಬೋರ್ಡ್ ಆಫಿಷಿಯಲ್ಸ್ ಬಗ್ಗೆ ಹೇಳಿದರು, ಎಂ.ಎಲ್ ಎ. ಮತ್ತು ಎಂ.ಎಲ್.ಸಿ ಗಳಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿದರು. ಧಾರವಾಡದಲ್ಲಿ ಹೊಸ ಯೂನಿವರ್ಸಿಟಿ ಏನಾಯಿತು ಆ ಯೂನಿವರ್ಸಿಟಿಗೆ ಐ.ಸಿ.ಆರ್. ಮತ್ತು ಯು ಜಿ.ಸಿ ಯವರು ಮಾನ್ಯತೆ ಕೊಡುವುದಕ್ಕೆ ಮುಂಚೆ ಒಂದು ಕಂಡೀಷನ್ ಹಾಕಿದರು. ಏನೆಂದರೆ, ಇಲ್ಲಿಗೆ ಎಂ ಎಲ್.ಎ ಮತ್ತು ಎಂ.ಎಲ್.ಸಿ.ಗಳನ್ನು ನಾಮಿನೇಟ್ ಮಾಡಬಾರದು ಎಂದು.

ಶ್ರೀ ಬಿ. ಬಸವಲಿಂಗಪ್ಪ.— ಎಕ್ಸ್ ಎಂ.ಎಲ್.ಎ.ಗಳನ್ನು ನಾಮಿನೇಟ್ ಮಾಡಬಹುದೇ ?

ಶ್ರೀ ಆರ್. ವಿ ದೇಶಪಾಂಡೆ.— ಎಂ.ಎಲ್.ಎ.ಗಳಿಗೆ ಅವಕಾಶವಿಲ್ಲ. ಇದನ್ನು ಮಾಡಲಿಕ್ಕೆ ನಮಗೆ ಅಸಾಧ್ಯ. ನಾವು ಅದನ್ನು ಒಪ್ಪಿಕೊಂಡಿದ್ದೇವೆ, ಈ ಸದನ ಅದಕ್ಕೆ ಮಾನ್ಯತೆ ಕೊಟ್ಟಿದೆ.

ಮಾನ್ಯ ಸದಸ್ಯರು ಮತ್ತೊಂದು ಸಲಹೆಯನ್ನು ಮಾಡಿದರು. ಅಲ್ಲಿ ಒಬ್ಬರು ಎಸ್.ಸಿ.ಯವನ್ನು ನಾಮಿನೇಟ್ ಮಾಡಲಿಕ್ಕೆ ಕಾಯಿದೆಯಲ್ಲಿ ಒಂದು ವ್ಯವಸ್ಥೆ ಮಾಡಬೇಕು ಎಂದು. ತಮ್ಮ ಈ ಸೂಚನೆ ಒಳ್ಳೆಯದು, ಆದರೆ ತಾವು ಒಂದು ವಿಚಾರ ಯೋಚನೆ ಮಾಡಬೇಕು.

ಸಿಂಡಿಕೇಟ್ ಆಗಲಿ ಸೆನೇಟ್ ಆಗಲಿ, ಯಾವುದೇ ಯೂನಿವರ್ಸಿಟಿಗಳಲ್ಲಿ ಹರಿಜನರನ್ನು ನಾಮಿನೇಟ್ ಮಾಡುವಂಥ ಕಾಯಿದೆ ಇಲ್ಲ.

SRI M. MALLIKARJUNE KHARGA — In the Universities Act there is a provision. I raised this when that Bill came before this House. The then Minister Sri Basavaraj Anwari told, official ಆಗಿ ನಾವೇ ಪ್ರಾವಿಷನ್ ತರುತ್ತೇವೆ. ನೀವು ಅಮೆಂಡ್‌ಮೆಂಟನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ಹೇಳಿದ ಮೇಲೆ ನಾವು ವಿತ್‌ಡ್ರಾ ಮಾಡಿಕೊಂಡೆವು. ಈಗ ನೀವು ಈ ರೀತಿಯ ಅವಕಾಶ ಮಾಡುವುದಕ್ಕೆ ಬರುವುದಿಲ್ಲವೆಂದರೆ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ — ಹರಿಜನರನ್ನು ನಾಮಿನೇಟ್ ಮಾಡುವಂಥ ಜವಾಬ್ದಾರಿ ಸರ್ಕಾರದ್ದು.

SRI M. MALLIKARJUNA KHARGE.—Not nomination will You please make a provision in the act? It will be mandatory ಇಲ್ಲದಿದ್ದರೆ ಡಿಸ್‌ಕ್ರಿಷನರಿ ಆಗುತ್ತದೆ. You may or may not.

SRI R. V. DESHAPANDE.— Please cooperate with me. ಈಗಾಗಲೇ ಬೆಂಗಳೂರು ಯೂನಿವರ್ಸಿಟಿಯಲ್ಲಿ ಶ್ರೀ ಪರಮೇಶ್ವರಪ್ಪ ಎಂಬುವವರನ್ನು ನಾಮಿನೇಟ್ ಮಾಡಿದ್ದೇವೆ. ಇದನ್ನು ಕಾಯಿದೆ ಮಾಡುವುದರ ಬಗ್ಗೆ ಎಕ್ಸಾಮಿನ್ ಮಾಡುತ್ತೇನೆ.

SRI M. MALLIKARJUNA KHARGE.— No examination. This is a promise given on the floor of the House by the then Minister. That is why I withdrew my amendment. You are telling as if some charity is given to us we are not begging. As per the Act you should do it. It is a nomination. He is an expert and the Governor has nominated him.

SRI R. V. DESHAPANDE.— I am not aware of it. If an assurance is given, it will be implemented. ಆಯಿತು, ಶುಗರ್ ಕೇನ್ ರೀಸರ್ಚ್ ಸೆಂಟರ್ ಗೋಸ್ಕರ, ಹಣ ವಸೂಲು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ಸಂತೋಷದ ಸಂಗತಿ ಜಮಖಂಡಿಯಲ್ಲಿ ಐ. ಸಿ. ಆರ್. ವತಿಯಿಂದ ಶುಗರ್ ರೀಸರ್ಚ್ ಸೆಂಟರನ್ನು ಪ್ರಾರಂಭಿಸಲು ನಿರ್ಧರಿಸಿದ್ದಾರೆ. ಇದಕ್ಕೆ ಬೇಕಾಗುವಂಥ ಭೂಮಿಯನ್ನು ಕೊಡಲು ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ಆ ಭಾಗದ ರೈತರಿಗೆ ಅನುಕೂಲ ಆಗಬಹುದೆಂದು ನಾನು ಆಶಿಸುತ್ತೇನೆ. ಶ್ರೀಮಾನ್ ಯಡಿಯೂರಪ್ಪನವರು, ರೈತರ ಬಿತ್ತನೆ ಮಾಡುವುದಕ್ಕೆ ಮುಂಚೆ ಆಹಾರ ಧಾನ್ಯಗಳ ದರವನ್ನು ನಿಗದಿ ಮಾಡಬೇಕೆಂದು ಹೇಳಿದರು. ಇದು ಒಳ್ಳೆಯ ಸೂಚನೆ ಇದನ್ನು ಒಪ್ಪಬೇಕಾಗಿದೆ. ಈ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಉತ್ತರ ಹಿಂದೂಸ್ಥಾನಕ್ಕಿಂತ ನಮ್ಮ ಕಡೆ ಸೋಯಿಂಗ್ಸ್ ಬೇಗ ಬರುತ್ತದೆ. ಎರಡು ತಿಂಗಳ ಮುಂಚೆ ದರವನ್ನು ನಿಗದಿ ಮಾಡಿ ಘೋಷಣೆ ಮಾಡಿದರೆ ಯಾವ ತರಹದ ಬೆಳೆ ತೆಗೆಯುವುದಕ್ಕೆ ಸಾಧ್ಯ ಎನ್ನುವುದು ಗೊತ್ತಾಗುತ್ತದೆ. ಇದರಿಂದ ಯಾವ ರೀತಿಯ ಬೀಜವನ್ನು ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇನ್ನು ಅಧಿಕಾರಿಗಳ ಮೇಲೆ ನಿಯಂತ್ರಣ ಇರಬೇಕೆಂಬ ವಿಚಾರವನ್ನು ಹೇಳಿದ್ದಾರೆ. ಇದು ಬಹಳ ದೊಡ್ಡ ಇಲಾಖೆ. ಕೆಲವು ಲೋಪದೋಷಗಳು ಇವೆ. ಇತ್ತೀಚೆಗೆ ಅಧಿಕಾರ ವಿಕೇಂದ್ರೀಕರಣ ಆದನಂತರ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ನಮ್ಮ ಇಲಾಖೆ ಹೋಗಿದೆ. ಅಸಂಖ್ಯಾತ ಮಂಡಲ ಪಂಚಾಯತಿ ಸದಸ್ಯರುಗಳು ಜಿಲ್ಲಾ ಪರಿಷತ್ತಿನ ಸದಸ್ಯರುಗಳು, ಸಹಕಾರ ನೀಡಿದರೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಆಶಿಸುತ್ತೇನೆ.

ಇವತ್ತು ಕಾಟನ್ ಸೀಡ್ಸ್ ಬಗ್ಗೆ ಸ್ಕೇರ್‌ಸಿಟಿ ಇದೆ. ಇದಕ್ಕಾಗಿ ನಾವು ಬೀಜ ನಿಗಮದ ಮೇಲೆ ಅಥವಾ ಸರ್ಕಾರದ ಮೇಲೆ ಆಪಾದನೆ ಮಾಡುವುದಕ್ಕಾಗುವುದಿಲ್ಲ. ೧೯೮೧–೮೨ನೇ ಇಸವಿಯಲ್ಲಿ ರಾಜ್ಯದಲ್ಲಿ ೧೦.೦೪ ಲಕ್ಷ ಎಕರೆ ಭೂಮಿಯಲ್ಲಿ ಹತ್ತಿ ಉತ್ಪಾದನೆ ಮಾಡಲಾಗುತ್ತಿತ್ತು. ೮೪-೮೫ ರಲ್ಲಿ ೮.೩ ಲಕ್ಷ ಎಕರೆ ಭೂಮಿಯಲ್ಲಿ ಹತ್ತಿ ಉತ್ಪಾದನೆ ಮಾಡಲಾಗುತ್ತಿತ್ತು. ೮೬–೮೭ ರಲ್ಲಿ ೪.೯೯ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಹತ್ತಿ ಉತ್ಪಾದನೆ ಮಾಡಲಾಯಿತು. ಕಳೆದ ವರ್ಷ ೪.೦೨ ಲಕ್ಷ ಹೆಕ್ಟೇರಿಗೆ ಬಂತು. ಆದರೆ ಇವತ್ತು ಹೈಬ್ರಿಡ್ ಡಿ. ಸಿ. ಹೆಚ್. ಹತ್ತಿ ಬೀಜವನ್ನು ಉತ್ಪಾದನೆ ಮಾಡಬೇಕಾದರೆ ಅದರ ಅಂದಾಜನ್ನು ಮಾಡಬೇಕಾದರೆ ಬೀಜ ನಿಗಮಕ್ಕೆ ೨ ವರ್ಷ ಮುಂಚೆ ಮೂಲ ಬೀಜ (ಫೌಂಡೇಷನ್ ಸೀಡ್ಸ್) ಬಗ್ಗೆ ಯೂನಿವರ್ಸಿಟಿಗೆ ಇಂಡೆಂಟ್ ಕೊಡಬೇಕಾಗುತ್ತದೆ. ಇವತ್ತು ಕಲ್ಟಿವೇಷನ್‌ನಲ್ಲಿ ಡಿಕ್ರಿಜೆಂಟ್ ರೇಂಜ್ ಇದೆ. ಹತ್ತಿ ಉತ್ಪಾದನೆಯನ್ನು ರೈತರು ಕಡಿಮೆ ಮಾಡುತ್ತಿದ್ದಾರೆ. ಬೀಜ ನಿಗಮ ಅಂಟಿಸಿಪೇಟ್ ಮಾಡಿ, ಕೊಡಲಿಕ್ಕೆ ಸಾಧ್ಯ ಎನ್ನುವುದನ್ನು, ತಾವು ವಿಚಾರ ಮಾಡಬೇಕು. ಉದಾಹರಣೆಗೆ ೮೬–೮೭ನೇ ಇಸವಿಯಲ್ಲಿ ಡಿ. ಸಿ. ಹೆಚ್. ಮತ್ತು ವರಲಕ್ಷ್ಮೀ ಹತ್ತಿ ಬೀಜವನ್ನು ೨೨೫೧ ಕ್ವಿಂಟಾಲನ್ನು ರಾಜ್ಯದಲ್ಲಿ ಮಾರಾಟ ಮಾಡಿದ್ದೇವೆ. ಇದರಲ್ಲಿ ೨೦೦ ಕ್ವಿಂಟಾಲನ್ನು ಗುಜರಾತಿನಿಂದ ಡಿ. ಸಿ. ಹೆಚ್. ಹತ್ತಿ ಬೀಜವನ್ನು ತಂದಿದ್ದೇವೆ. ೮೭–೮೮ ರಲ್ಲಿ ಎಲ್ಲಾ ಕೂಡಿ, ನಮ್ಮ ಕಾರ್ಯಕ್ರಮ ೨೫೧೬ ಕ್ವಿಂಟಾಲ್ ಇತ್ತು. ಆದರೆ ಮಳೆಯ ಅಭಾವದಿಂದ ಫ್ಲೈಟ್ ಪ್ಲಾಮಿನೆನ್ಸಿನಿಂದ ಸ್ವಲ್ಪ ಬೆಳೆ ಹಾಳಾಯಿತು. ನಮ್ಮ ದುರ್ದೈವದಿಂದ ಕೆಲವು ಬೀಜ ಉತ್ಪಾದನೆ ಮಾಡದಂತ ಕೆಲವು ರೈತರು ನಮ್ಮೊಂದಿಗೆ ಸಹಕರಿಸಲಿಲ್ಲ. ಹೀಗಾಗಿ ಇವತ್ತು, ನಾವು ಶೇಖರಣೆ ಮಾಡಿರತಕ್ಕ ಬೀಜ ೧೫೦೫ ಕ್ವಿಂಟಾಲ್ ಅಷ್ಟೆ, ಹೋದ ವರ್ಷದ ಸ್ಟಾಕ್ ೧೫೨ ಕ್ವಿಂಟಾಲ್ ವರಲಕ್ಷ್ಮೀ ಬೀಜ ಇದೆ. ಈಗ ನಮ್ಮ ಕಡೆ ೧೬೬೧ ಕ್ವಿಂಟಾಲ್ ಇದೆ. ಈಗ ಇದನ್ನು ರಾಜ್ಯದಲ್ಲಿ ವಿತರಣೆ ಮಾಡಬೇಕಾಗಿದೆ. ಸಾಕಷ್ಟು ಡಿಮ್ಯಾಂಡ್ ಕೂಡ ಇದೆ. ನನಗೆ ಇರತಕ್ಕ ಭಯ ಏನೆಂದರೆ ಕಳೆದ ವರ್ಷ ೧೨೦೦. ೧೪೦೦ ಕಾಟನ್‌ಗೆ ರೇಟು ಸಿಕ್ಕಿದ್ದರಿಂದ ಇವತ್ತು, ಎಲ್ಲಾ ರೈತರು ಹತ್ತಿ ಬೆಳೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಇದು ಸರಿಯಲ್ಲ. ಕೃಷಿ ನೀತಿಯಲ್ಲಿ ಬದಲಾವಣೆಯಾಗಬೇಕು. ಇದು ಆಗದೆ ಇದ್ದರೆ ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಈ ವರ್ಷ ಹತ್ತಿ ರೇಟು ೫೦೦–೬೦೦ ಆದರೆ ಏನು ಮಾಡುತ್ತಾರೆ? ರೈತರು ಬೀಜವನ್ನು ಬೇಡುತ್ತಿದ್ದಾರೆ. ಅದರ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಕಳೆದ ವರ್ಷ ೮೪–೮೫ನೇ ಇಸವಿಯಲ್ಲಿ ಇದೇ ಪ್ರಕಾರ ಹತ್ತಿ ಬೀಜದ ಬೇಡಿಕೆಯ ಬಗ್ಗೆ ಸರ್ಕಾರದ ಮೇಲೆ ಪ್ರೆಜರ್ ಬಂತು. ಬೀಜ ನಿಗಮಕ್ಕೆ ಡೈರೆಕ್ಷನ್ ಕೊಡಬೇಕಾಗಿ ಬಂತು. ಆವರೆ ಬೀಜ ನಿಗಮದವರು, ೫೪೦೦ ಕ್ವಿಂಟಾಲ್ ಬೀಜವನ್ನು ಕೊಡಲು ಸಾಧ್ಯವಿಲ್ಲವೆಂದು ಹೇಳಿದರು. ಸರ್ಕಾರದವರು, ಗ್ಯಾರಂಟಿ ಕೊಡುತ್ತೇವೆಂದರೂ, ಸಾಧ್ಯವಾಗಲಿಲ್ಲ. ೧೯೮೪–೮೫ ರಲ್ಲಿ ೨೨೦೦ ಕ್ವಿಂಟಾಲ್ ಸೇಲ್ ಆಯಿತು. ೮೬–೮೭ ರಲ್ಲಿ ೨೩೦೦ ಕ್ವಿಂಟಾಲ್ ಸೇಲ್ ಆಯಿತು. ಮುಂದೆ ಸುಮಾರು ೬೦೦ ಕ್ವಿಂಟಾಲ್ ಬೀಜವನ್ನು ಕೆ. ಜಿ. ಗೆ ೧೦ ರೂಪಾಯಿಯಂತೆ ಖರೀದಿ ಮಾಡಿ, ೬೦ ರೂಪಾಯಿ ಕೆ. ಜಿ. ಯಂತೆ ಮಾರಾಟ ಮಾಡಲಾಯಿತು. ರೈತರು ಬೀಜಗಳನ್ನು ಸರೆಂಡರ್ ಮಾಡಿದ್ದರ ಸಲುವಾಗಿ ೮೧ ರೂಪಾಯಿ ಹೆಚ್ಚಿಗೆ ಕೊಡಬೇಕಾಗಿ ಬಂತು. ಅಧಿಕಾರಿಗಳು ಇದನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ವಿರೋಧ ಮಾಡಿದರೂ ಕೂಡ, ಬೀಜವನ್ನು ರೈತರಿಗೆ ಕೊಡಬೇಕಾಗಿ ಬಂತು. ದರ ಜಾಸ್ತಿ ಮಾಡಿದರೆ ತಪ್ಪಾಗುತ್ತದೆಂದು ಅಧಿಕಾರಿಗಳು ಹೇಳಿದರು. ಇವತ್ತು ಪ್ರೊಡ್ಯೂಸರ್ ಸಂಖ್ಯೆ ೧.೦೨ ಇದೆ. ಗ್ರೋಯರ್ಸ್ ಸಂಖ್ಯೆ ೯೦ ಇದೆ. ಆದರೂ ಸಹ ನಾನು ೮೫ ರೂಪಾಯಿಗಳ ದರವನ್ನು ೧೨೦ ಎಂದು ಗೊತ್ತು ಮಾಡಿದೆ "they werethappy" ಯಾವ ಪ್ರಮಾಣದಲ್ಲಿ ಬೀಜ ಬೆಳೆಯತಕ್ಕ ರೈತರು ಸರೆಂಡರ್ ಮಾಡಬೇಕಾಗಿತ್ತೋ, ಆ ರೀತಿ ಮಾಡುವುದರಲ್ಲಿ ಸಹಕರಿಸದೇ ಇದ್ದುದರಿಂದ ೮೪–೮೫ ರಲ್ಲಿ ಸಮಸ್ಯೆ ಆಯಿತು. ಇದರಿಂದ ರಾಜ್ಯ ಸರ್ಕಾರ, ಬೀಜ ನಿಗಮಕ್ಕೆ ೨೧೪ ಲಕ್ಷ ರೂಪಾಯಿಗಳ ರೀಎಂಬರ್ಸ್‌ಮೆಂಟ್ ಮಾಡಬೇಕಾಯಿತು. to wards their losses. ಪ್ರತಿ ವರ್ಷ ಹೀಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಬೀಜ ನಿಗಮಗಳು ಮಹಾರಾಷ್ಟ್ರದಲ್ಲಿರಬಹುದು, ಗುಜರಾತಿನಲ್ಲಿರಬಹುದು. ಪ್ರತಿ ವರ್ಷ ಇಂತಹ ಒಂದು ಸಮಸ್ಯೆ ಬರುತ್ತಿರುವುದರಿಂದ "ರಿಸ್ಕ್ ಫಂಡ್" ಕ್ರಿಯೇಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡಿದ್ದೇನೆ. ಇದನ್ನು ಮಾಡುವುದರಿಂದ ಇಂತಹ ಸಮಸ್ಯೆಗಳು ಬಂದಾಗ "ರಿಸ್ಕ್ ಫಂಡ್" ನಿಂದ ರೀಎಂಬರ್ಸ್ ಮಾಡಬಹುದು. ಹೆಚ್ಚಿನ ಲಾಭವಾದಾಗ ಕಾಂಟ್ರಿಬ್ಯೂಷನ್ ಕೂಡ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ವಿಚಾರವನ್ನೂ ಕೂಡ ಕೇಂದ್ರ

ಸರ್ಕಾರಕ್ಕೆ ತಿಳಿಸಿದ್ದೇವೆ, ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತೂ ಕೂಡ ಹತ್ತಿ ಬೀಜದ ಸಮಸ್ಯೆ ಇದೆ. ಇದನ್ನು ಬಗೆಹರಿಸಲಿಕ್ಕೆ ಮಹಾರಾಷ್ಟ್ರ ಸೀಡ್ ಕಾರ್ಪೊರೇಷನ್ ನಿಂದ ಸರ್ಟಿಫೈಡ್ ಡಿಸಿಎಚ್. ಹತ್ತಿ ಬೀಜಗಳನ್ನು ತರಿಸುವ ವ್ಯವಸ್ಥೆ ಮಾಡಿದ್ದೇವೆ. ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಅಲ್ಲದೆ ಮೈಕೋ ಸರ್ಟಿಫೈಡ್ ಡಿಸಿಹೆಚ್ ಹತ್ತಿ ಬೀಜವನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಹೀಗೆ ತರಿಸಿಕೊಳ್ಳುವುದಕ್ಕೆ ಪರ್ಮಿಷನ್ ಅನ್ನೂ ಕೂಡ ಕೊಟ್ಟಿದ್ದಾರೆ, ಹತ್ತಿ ಬೀಜದ ಸಮಸ್ಯೆಯನ್ನು ಬಗೆಹರಿಸಿ ಸಾಧ್ಯವಾದಷ್ಟು ಮಟ್ಟಿಗೆ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಳೆದ ವರ್ಷ ಹತ್ತಿಗೆ ಒಳ್ಳೆಯ ದರ ಸಿಕ್ಕಿದ್ದರಿಂದ ಈ ವರ್ಷ ರೈತರು ಹತ್ತಿ ಬೆಳೆಯನ್ನು ಬೆಳೆಯುವುದರಲ್ಲಿ ಮುಂದೆ ಬಂದಿದ್ದಾರೆ. ಹೋದ ವರ್ಷ ಹತ್ತಿ ಬೀಜಕ್ಕೆ ತೊಂದರೆಯಾಗಿದ್ದುದು ಕೃಷಿ ಅಧಿಕಾರಿಗಳಿಗೆ ಗೊತ್ತಿದ್ದರೂ, ಡಿ. ಸಿ. ಹೆಚ್. ಹತ್ತಿ ಬೀಜಗಳನ್ನು ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆಯುವಂತಹ ವ್ಯವಸ್ಥೆಯನ್ನು ಮುಂದಾಲೋಚನೆಯಿಂದ ಮಾಡಬೇಕಾಗಿತ್ತು. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಯಾವ ಪ್ರಮಾಣದಲ್ಲಿ ಹತ್ತಿ ಬೀಜಗಳನ್ನು ಬೆಳೆಯುತ್ತಾರೋ ಅದೇ ಪ್ರಮಾಣದಲ್ಲಿ ಇಲ್ಲೂ ಕೂಡ ಬೆಳೆಸಬೇಕಾಗಿತ್ತು. ಇಲ್ಲವೇ ಹೊರಗಡೆಯಿಂದ ಹತ್ತಿ ಬೀಜಗಳನ್ನು ನಮ್ಮ ರಾಜ್ಯದ ರೈತರಿಗೆ ಅವಶ್ಯಕತೆ ಇರುವಷ್ಟು ತರಿಸಿ ದಾಸ್ತಾನು ಮಾಡಬೇಕಾಗಿತ್ತು.

ಇನ್ನು ನಾಲ್ಕೈದು ದಿವಸಗಳಲ್ಲಿ ರೈತರು ಬಿತ್ತನೆ ಕಾರ್ಯ ಮಾಡಬೇಕಾಗಿರುವುದರಿಂದ ಯಾವ ರೀತಿಯಲ್ಲಿ ರೈತರಿಗೆ ಬೀಜಗಳನ್ನು ಒದಗಿಸಿಕೊಡುತ್ತೀರಿ ? ಸರ್ಕಾರದ ಇಲಾಖೆ ಇದೆ. ಅಧಿಕಾರಿಗಳಿದ್ದಾರೆ. ಆದರೂ ಕೂಡ ಈ ವಿಚಾರದಲ್ಲಿ ಗಮನ ಕೊಟ್ಟಿಲ್ಲ. ನಮ್ಮ ರಾಜ್ಯದ ರೈತರಿಗೆ ಇಂತಿಷ್ಟು ಪ್ರಮಾಣದಲ್ಲಿ ಇಂತಿಷ್ಟು ಪ್ರದೇಶದಲ್ಲಿ ಬೀಜಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಬೆಳೆದಂತಹ ಬೀಜಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಿದ್ದರೆ ಈ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ತಾವು ಮಾತನಾಡುತ್ತಾ ಒಂದು ಮಾತನ್ನು ಹೇಳಿದಿರಿ. ಅಧಿಕಾರಿಗಳು ಒಪ್ಪದೇ ಇದ್ದರೂ ಸೀಡ್ ಕಾರ್ಪೊರೇಷನ್‌ಗೆ ೨೧೪ ಲಕ್ಷ ರೂಪಾಯಿಗಳನ್ನು ರೀಎಂಬರ್ಸ್ ಮಾಡಿದ್ದೇವೆಂದು ಹೇಳಿದ್ದೀರಿ ರಾಜ್ಯದ ರೈತನ ಸಲುವಾಗಿ ಲಾಸಾದರೂ ಕೂಡ ಸರ್ಕಾರ ಅದನ್ನು ತಡೆದುಕೊಳ್ಳುವುದಕ್ಕೆ ಸಿದ್ಧರಿರಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ನನ್ನ ಮಟ್ಟದಲ್ಲಿ ಹಾಗೂ ಕಾರ್ಯದರ್ಶಿಯವರ ಮಟ್ಟದಲ್ಲಿ ಕಳೆದ ೭ ತಿಂಗಳುಗಳಿಂದ ಹಲವಾರು ಸಲ ಇದನ್ನು ರಿವ್ಯೂ ಮಾಡುತ್ತಿದ್ದೇನೆ, ಸನ್ ಫ್ಲವರ್ ಬಗ್ಗೆ, ಕಾಟನ್ ಬಗ್ಗೆ, ಜವಾರ್ ಬಗ್ಗೆ Secretary ಮಟ್ಟದಲ್ಲಿ ಸುಮಾರು ೭ ಸಭೆಗಳನ್ನು ಕರೆದು ರಿವ್ಯೂ ಮಾಡಿದ್ದೇನೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ಮಧ್ಯಪ್ರದೇಶ ಹಾಗೂ ಗುಜರಾತ್ ಈ ನಾಲ್ಕು ಕಡೆಗಳಿಗೂ ನಮ್ಮ ಜನರನ್ನು ಕಳುಹಿಸಿದ್ದೇನೆ. ಟೆಲೆಕ್ಸ್ ಮೆಸೇಜ್ ಅನ್ನು ಕೂಡ ಕೊಟ್ಟಿದ್ದೇವೆ, ಅಲ್ಲೂ ಕೂಡ ಬೀಜದ ಸ್ಕೇರ್‌ಸಿಟಿ ಇದೆ. ಗುಜರಾತ್ ರಾಜ್ಯದವರು ನಮ್ಮ ರಾಜ್ಯದ ಪಾವಗಡ ತಾಲ್ಲೂಕಿಗೆ ಬಂದು ಶೇಂಗಾವನ್ನು ಕೊಂಡುಕೊಂಡು ಹೋಗಿದ್ದಾರೆ. ಅಲ್ಲೂ ಕೂಡ ಬೀಜಗಳು ಇಲ್ಲ. ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಕನಿಷ್ಟ ಫೌಂಡೇಷನ್ ಬೀಜಗಳು ಬೇಕಾಗಿದ್ದರೆ ೨ ವರ್ಷಕ್ಕಿಂತ ಮುಂಚಿತವಾಗಿಯೇ ಇಂಡೆಂಟ್ ಮಾಡಬೇಕಾಗುತ್ತದೆ. How can we anticipate this demand ? ಆದರೂ ಸಾಧ್ಯವಾದಷ್ಟು ಈ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಅಂಕಿ ಅಂಶಗಳನ್ನು ಕೊಡಿ, ಹತ್ತಿ ಬೀಜಗಳನ್ನು ಪ್ರೊಕ್ಯೂರ್ ಮಾಡುವುದಕ್ಕೆ ಹೋದವರ್ಷ ಎಷ್ಟು ಡಿ. ಸಿ. ಹೆಚ್.ನ್ನು ಬೆಳೆಯುವುದಕ್ಕೆ ಆರ್ಡರ್ ಕೊಟ್ಟಿದ್ದೀರಿ ಎಂಬುದರ ಬಗ್ಗೆ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಕಳೆದ ವರ್ಷ ಎಷ್ಟು ಪ್ರೊಕ್ಯೂರ್‌ಮೆಂಟ್ ಮಾಡಿದ್ದೇವೆಂಬುದನ್ನು ಹೇಳಿದ್ದೇನೆ, ಈ ವರ್ಷವೂ ಕೂಡ ಎಷ್ಟು ಪ್ರೊಕ್ಯೂರ್‌ಮೆಂಟ್ ಮಾಡಿದ್ದೇವೆ ಎಂಬುದನ್ನು ಕೂಡ ಹೇಳಿದ್ದೇನೆ. ಆದರೆ ಅದು ಸಾಲದು, ಏನು ಮಾಡಬೇಕು. ನನ್ನ ಕಿಸೆಯಲ್ಲಿ ಹಣ ಇದ್ದರೆ ಕೇಳಿದವರಿಗೆ ಕೊಡಬಹುದು. ಅಥವಾ ಹಣದ ತೊಂದರೆ ಏನಾದರೂ ಇದ್ದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ೫ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಬಹುದು. How is it possible ?

ನನ್ನ ಜಾಗದಲ್ಲಿ ನೀವೂ ಇದ್ದರೂ ಏನು ಮಾಡುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಕಳೆದ ೬–೭ ತಿಂಗಳಲ್ಲಿ ನನ್ನ ಮಟ್ಟದಲ್ಲಿ ಅನೇಕ ಸಲ ರಿವ್ಯೂ ಮಾಡಿದ್ದೇನೆ. ಈ ಒಂದು ಸಮಸ್ಯೆಯನ್ನು ಬಗೆಹರಿಸುತ್ತೇನೆಂಬ ವಿಶ್ವಾಸ ನನಗಿದೆ. ಅದೇ ಪ್ರಕಾರ ರಾಸಾಯನಿಕ ಗೊಬ್ಬರ ಬಗ್ಗೆ ಹೆಚ್ಚು ಸೇಲ ಪಾಯಿಂಟ್ಸ್ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ನಾವು ಈಗಾಗಲೇ ಆ ಬಗ್ಗೆ ಗಮನಹರಿಸಿ ೩೬೦ ಹೆಚ್ಚು ಸೇಲ್ ಪಾಯಿಂಟ್‌ಗಳನ್ನು ಮಾಡಿದ್ದೇವೆ ರಾಜ್ಯವಲ್ಲಿ ಈಗ ಒಟ್ಟು ೯೪೦೭೧ ಸೇಲ್ ರಾಸಾಯನಿಕ ಗೊಬ್ಬರ ಪಾಯಿಂಟ್‌ಗಳು ಇವೆ. ಅದೇ ರೀತಿ ಮಾನ್ಯ ಸದಸ್ಯರು ತರಬೇತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ; ಈಗಾಗಲೇ ಆ ಬಗ್ಗೆ ಡೆಮಾನ್‌ಸ್ಟ್ರೇಷನ್ ಪ್ರಾರಂಭವಾಗಿದೆ. ರೈತರಿಗೆ ತರಬೇತಿಯನ್ನು ನಮ್ಮಲ್ಲಿ ಹೊಸದಾಗಿ ಪ್ರಾರಂಭವಾಗಿರತಕ್ಕ ರೀಸರ್ಚ್ ಸೆಂಟರ್‌ನಲ್ಲಿ ಕೊಡುತ್ತಿದ್ದೇವೆ. ಅದೇ ಪ್ರಕಾರ ಶ್ರೀಮಾನ್ ಬಚ್ಚೇಗೌಡರು ಸೂರ್ಯಕಾಂತಿಯ ಬಗ್ಗೆ ಹೇಳಿದರು. ಕಳೆದ ವರ್ಷ ಈ ಸೂರ್ಯ ಕಾಂತಿಯನ್ನು ೧೧ ಲಕ್ಷ ೪೯ ಸಾವಿರ ಎಕರೆ ಭೂಮಿಯಲ್ಲಿ ರೈತರು ಬೆಳೆದಿದ್ದಾರೆ, ಇದು ಒಂದು ರೀತಿಯಲ್ಲಿ ಎಲ್ಲೋ ಒಂದು ರೆವಲ್ಯೂಷನ್. ಆದ ಹಾಗೆ ಇದೆ. ಖರೀದಿಯಲ್ಲಿ ಸ್ವಲ್ಪ ತೊಂದರೆಯಾಗಿದೆ, ಮತ್ತೆ ಕಳೆದ ವರ್ಷ ಹೆಚ್ಚು ಮಳೆಯಾದ್ದರಿಂದ ಹೆಚ್ಚು ಮಾಯಿಶ್ಚರ್ ಆಗಿ ಈ ಬೆಳೆ ಹಾಳಾಗಿದೆ. ಆ ಬಗ್ಗೆ ನಮ್ಮ ಸರ್ಕಾರ ಏನು ಮಾಡುವುದಕ್ಕೂ ಸಾಧ್ಯ ಇಲ್ಲ. ಈ ಒಂದು ಸಮಸ್ಯೆಯನ್ನು ರೈತರು ಎದುರಿಸುತ್ತಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂಡ್ರೈಫ್ ರಾಗಿಯ ಬಗ್ಗೆ ಹೇಳಿದ್ದಾರೆ. ನಿಜ. ಅದರ ಬಗ್ಗೆ ನಾನೂ ಚೌಕಾಸಿ ಮಾಡಿದ್ದೇನೆ. ನಮ್ಮ ಕಡೆಯಿಂದ ಸಮಸ್ಯೆ ನಿವಾರಣವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ರಾಷ್ಟ್ರೀಯ ಎಣ್ಣೆ ಕಾಳು ಅಭಿವೃದ್ಧಿ ಮಂಡಲಿಯ ಯೋಜನೆ, ಪ್ರಕಾರ ಕೇವಲ ೯ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆ ಜಾರಿಯಲ್ಲಿದೆ. ಇದನ್ನು ಇಡೀ ರಾಜ್ಯದಲ್ಲಿ ಮಾಡಬೇಕೆಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ಸಂತೋಷವಾಗಿ ಒಂದು ಘೋಷಣೆಯನ್ನು ಮಾಡುತ್ತಿದ್ದೇನೆ. ಅದೇನೆಂದರೆ ಕೊಡಗು ಮತ್ತು ಬೆಂಗಳೂರು ಅರ್ಬನ್ ಜಿಲ್ಲೆಗಳನ್ನು ಬಿಟ್ಟು ಇನ್ನುಳಿದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿ ಇದೆ ಎಂಬುದಾಗಿ ತಿಳಿಸುತ್ತಿದ್ದೇನೆ. ಅದೇ ರೀತಿ ಜಲಾನಯನ ಯೋಜನೆ ಬಗ್ಗೆ ಹೇಳಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಒಳ್ಳೆಯ ಸೂಚನೆ. ಆದರೆ ಹಣಕಾಸಿನ ಮುಗ್ಗಟ್ಟಿನಿಂದ ಎಲ್ಲಾ ತಾಲ್ಲೂಕುಗಳಲ್ಲೂ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ' ಆದರೆ ಪ್ರತಿಯೊಂದು ಜಿಲ್ಲೆಯಲ್ಲೂ ವಾಟರ್‌ಷೆಡ್ ಯೋಜನೆ ಇದೆ. ಅದನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಂತರ ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ೧೫೦೦ ಕೃಷಿ ಸಹಾಯಕರನ್ನು ಈಗಾಗಲೇ ನೇಮಕ ಮಾಡಿಕೊಂಡಿದ್ದು ಅವರನ್ನು ತರಬೇತಿಗಾಗಿ ಈಗಾಗಲೇ ಕಳುಹಿಸಲಾಗಿದ್ದು, ಮೊದಲನೇ ಸೆಪ್ಟೆಂಬರ್ ತಿಂಗಳಲ್ಲಿ ಅದು ಮುಗಿಯುತ್ತದೆ. ನಂತರ ಅವರನ್ನು ಪೋಸ್ಟ್ ಮಾಡಲಾಗುತ್ತದೆ. ನಂತರ ಕ್ರಾಪ್ ಇನ್ಸೂರೆನ್ಸ್ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ವೆಂಕಟರಾಮಯ್ಯನವರು ಕೃಷಿ ಇಲಾಖೆಗೆ ೬–೭ ಲಕ್ಷ ರೂಪಾಯಿಗಳು ಮಾತ್ರ ಅಲೋಕೇಷನ್ ಮಾಡಲಾಗಿದ್ದು ಇದು ಸಾಲದು ಎಂಬುದಾಗಿ ಹೇಳಿದ್ದಾರೆ. ಇದಲ್ಲದೆ. ಇರಿಗೇಷನ್ ಹಾಗೂ ಪವರ್ ಸೆಕ್ಟರ್‌ನಲ್ಲಿ ತೊಡಗಿಸಿರತಕ್ಕಂಥ ಹಣವೂ ಕೂಡ ರೈತರ ಹಿತದೃಷ್ಟಿಯಿಂದ ಮಾಡಿರುವಂಥದ್ದೇ ಆಗಿದೆ. ಆದ್ದರಿಂದ ಅದನ್ನೂ ಕೂಡ ಇದರ ಜೊತೆಗೆ ಸೇರಿಸಿಕೊಳ್ಳಬೇಕೆಂದು ತಿಳಿಸುತ್ತಿದ್ದೇನೆ. ನಂತರ ಲೀಫ್ ಡಿಸೀಸ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವರ್ಷ ಆ ಸಮಸ್ಯೆ ಬರುವುದಿಲ್ಲ. ಆಯಿಲ್ ಸೀಡ್ಸ್ ಟ್ರಸ್ಟ್ ಪ್ರೋಗ್ರಾಂ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ರೈತರಿಗೆ ಅನುಕೂಲವಾಗುವ ಹಾಗೆ ಗೊಬ್ಬರ ಹಾಗೂ ಔಷಧಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಈಗಾಗಲೇ ಆ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಭೂಪತಿಯವರು ಮಾತನಾಡುತ್ತಾ ಸೀಡ್ ಆಕ್ಟ್ ಬಗ್ಗೆ ಹೇಳಿದರು. ಸೀಡ್ ಆಕ್ಟ್ ಇದು ಸೆಂಟ್ರಲ್ ಆಕ್ಟ್ ಇರುತ್ತದೆ. ಕೇಂದ್ರ ಸರ್ಕಾರದವರು ಪ್ರಾಮಾಣಿಕವಾಗಿ ಒಳ್ಳೆಯ ಗುಣಮಟ್ಟದ ಬೀಜಗಳನ್ನು ಒದಗಿಸುವ ಪ್ರಯತ್ನ ಮಾಡಬೇಕು. ಕಳಪೆ ಬೀಜದ ವ್ಯವಹಾರವನ್ನು ಯಾರು ಮಾಡುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಸದಾ

ಸಿದ್ಧವಾಗಿರುತ್ತದೆ. ವಿಶೇಷ ಸೀಡ್ಸ್ ಎಂದು ನೋಟಿಫೈ ಮಾಡಿದರೆ ದುರ್ದೈವ ಅದರ ಬಗ್ಗೆ ಪಿಟಿಷನ್ ಹಾಕಿ ಸ್ಟೇ ತಂದಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಹಾಗೂ ಕೇಂದ್ರದ ಮಾನ್ಯ ಸಚಿವರೊಡನೆ ಮಾತನಾಡಿದ್ದೇವೆ. ಆದಷ್ಟು ಬೇಗ ಸ್ಟೇ ವೆಕೇಟ್ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಕಳಪೆ ಬೀಜ ಮತ್ತು ಕಲಬೆರಕೆ ಬೀಜಗಳನ್ನು ಮಾರಾಟ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ ಅದನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿ ಈಗಿರುವ ಶಿಕ್ಷೆಗಿಂತ ಇನ್ನೂ ಹೆಚ್ಚಿನ ಶಿಕ್ಷೆಯನ್ನು ವಿಧಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಮಾನ್ಯ ಭೂಪತಿಯವರು ತೊಗರಿ ಬೆಳೆ ಅಭಿವೃದ್ಧಿ ನಿಗಮ ಮಾಡಬೇಕೆಂದು ಹೇಳಿರುತ್ತಾರೆ ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

ಜಿಲ್ಲಾವಾರು ಭತ್ತ ಮತ್ತು ರಾಗಿ ಬೆಳೆ ಕಡಿಮೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬೆಳೆ ಕಡಿಮೆಯಾಗಲು ಏನು ಕಾರಣವೆಂಬುದು ತಮಗೆ ಗೊತ್ತಿದೆ. ರಾಜ್ಯದಲ್ಲಿ ೫ ವರ್ಷಗಳಿಂದ ಭೀಕರ ಬರಗಾಲ ಇದ್ದುದರಿಂದ ಬೆಳೆ ಕಡಿಮೆಯಾಗಿದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಬೆಳೆ ಕಡಿಮೆಯಾಗುವುದಕ್ಕೆ ಯಾವತ್ತು ನಮ್ಮ ಇಲಾಖೆ ಕಾರಣವಲ್ಲ. ನೈಸರ್ಗಿಕ ವಿಕೋಪವೇ ಇದಕ್ಕೆ ಕಾರಣ.

ಶ್ರೀ ವಿನಯಕುಮಾರ್ ಸೊರಕೆ.—ಬೇರೆ ಬೇರೆ ಜಿಲ್ಲೆಗಳನ್ನು ಸ್ಕೇರ್‌ಸಿಟಿಯಲ್ಲಿ ಸೇರಿಸಿದ್ದೀರಿ, ಆದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸೇರಿಸಿಲ್ಲ. ದಯವಿಟ್ಟು ದಕ್ಷಿಣ ಕನ್ನಡ ಜಿಲ್ಲೆಯನ್ನು ಸ್ಕೇರ್‌ಸಿಟಿಯಲಿ ಸೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಎಲ್ಲಾ ಜಿಲ್ಲೆಗಳಿಗೂ ಕೊಟ್ಟಿರುವಂತೆ ದಕ್ಷಿಣ ಕನ್ನಡ ಜಿಲ್ಲೆಗೂ ಸ್ಕೇರ್‌ಸಿಟಿ ಕಿಟ್ಸ್‌ಗಳನ್ನು ಕೊಟ್ಟಿದ್ದೇವೆ. ಮಾನ್ಯ ವೀರಪ್ಪಮೊಯಿಲಿಯವರೂ ಕೂಡ ಇದೇ ಪ್ರಶ್ನೆಯನ್ನು ಕೇಳಿದ್ದರು.

ಉಪಾಧ್ಯಕ್ಷರು.—ಮಾನ್ಯ ವಿನಯಕುಮಾರ್‌ರವರೇ ತಾವು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಮೇಲೆ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ವಿನಯಕುಮಾರ್ ಸೊರಕೆ.—ಭತ್ತ ಒಂದು ಬೆಳೆ ಬೆಳೆಯುವವರಿಗೆ ಬಹಳ ತೊಂದರೆಯಾಗಿದೆ. ಮುಂಗಾರು ಮಳೆ ಇಲ್ಲದಕಾರಣದಿಂದಾಗಿ ಒಂದು ಬೆಳೆಯನ್ನು ಮಾತ್ರ ಬೆಳೆಯಲು ಸಾಧ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಯಾವರೀತಿಯಾದ ಸಹಾಯವನ್ನು ಈ ಇಲಾಖೆಯವರು ಮಾಡಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ದಕ್ಷಿಣ ಕನ್ನಡ ಜಿಲ್ಲೆಗೆ ಯಾವ ರೀತಿ ಸಹಾಯವನ್ನು ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ನಮ್ಮ ಇಲಾಖೆಯಿಂದ ಎಷ್ಟು ಸಹಾಯ ಮಾಡಲು ಸಾಧ್ಯವೋ ಅಷ್ಟು ಸಹಾಯ ಮಾಡಿದ್ದೇವೆ. ಅದು ಸಾಲದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಎಷ್ಟು ಕೊಟ್ಟರೂ ಸಾಲುವುದಿಲ್ಲ. ಆದರೆ ಸರ್ಕಾರದವರು ಎಷ್ಟು ಕೊಡಲು ಸಾಧ್ಯವೋ ಅಷ್ಟನ್ನು ಕೊಡಲು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಇನ್ನು ಮಾನ್ಯ ರೇವಣ್ಣಸಿದ್ದಪ್ಪನವರು ಮಾತನಾಡುತ್ತಾ ರೈತರು ಬೆಳೆದ ಬೆಳೆಗೆ ನ್ಯಾಯಬೆಲೆ ದೊರೆಯದಿರುವ ಬಗ್ಗೆ ಹೇಳಿದ್ದಾರೆ. ಅದನ್ನು ಕೂಡ ಪರಿಶೀಲನೆ ಮಾಡುತ್ತೇನೆ. ಭೂ ಸುಧಾರಣೆ ಬಗ್ಗೆ ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರೊಡನೆ ಪ್ರಸ್ತಾಪ ಮಾಡುತ್ತೇನೆ. ಭೂ ಸುಧಾರಣೆ ಕಾನೂನು ಬಂದು ೧೫ ವರ್ಷಗಳೇ ಕಳೆದಿರುತ್ತದೆ. ಇವೊತ್ತಿನದಿವಸ ಹಳ್ಳಿಗಳಿಂದ ಶಹರಿಗೆ ಜನರು ವಲಸೆ ಬರುವುದು ಜಾಸ್ತಿಯಾಗಿದೆ ಇದನ್ನು ತಡೆಗಟ್ಟಬೇಕಾದರೆ ಕೃಷಿ ಅಭಿವೃದ್ಧಿ ನಿಗಮವನ್ನು ತೆರೆಯಬೇಕೆಂಬ ಅಭಿಪ್ರಾಯವಿರುತ್ತದೆ. ಇದರ ಬಗ್ಗೆಯೂ ಕೂಡ ಮಾನ್ಯ ಕಂದಾಯ ಸಚಿವರೊಡನೆ ಮಾತನಾಡುತ್ತೇನೆ. ಕಂಟ್ರೋಲ್ ಆಫ್ ಪೆಸ್ಟ್ಸ್ ಅಂಡ್ ಡಿಸೀಸ್ ಬಗ್ಗೆ ಹೇಳಿದ್ದಾರೆ. ಇದೆಲ್ಲಾ ಸರ್ಕಾರದಿಂದಲೇ ಎಲ್ಲಾ ಕಡೆಗಳಲ್ಲೂ ಆಗಬೇಕೆಂದರೆ ಸಾಧ್ಯವಾಗುವುದಿಲ್ಲ. ಇಡೀ ರಾಜ್ಯದಲ್ಲಿ ಕೊಡಗು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಇಂಪ್ಲಿಮೆಂಟ್ ಮಾಡುವುದರಿಂದ ಎಷ್ಟೋ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. We have spent about 42 lakhs in giving subsidy to the farmers in this regard. ಅದರ ಪ್ರಕಾರ, ಮಾನ್ಯ ಸದಸ್ಯರಾದ ಚಿನ್ನಪ್ಪನವರು ಮಾರ್ಕೆಟಿಂಗ್ ಬಗ್ಗೆ ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ, ರೈತರಿಗೆ ಸರಿಯಾದ ಮಾರ್ಕೆಟಿಂಗ್

ಫೆಸಿಲಿಟೀಸ್‌ನ್ನು ಒದಗಿಸಿ ಕೊಡಬೇಕೆನ್ನುವ ಸಲಹೆ ಸೂಕ್ತವಾಗಿರುತ್ತದೆ. ಮಾರ್ಕೆಟಿಂಗ್ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ.

೧೧-೩೦ ಎ ಎಂ.

ಸಲಕರಣೆ ಬಗ್ಗೆ ಹೇಳಿದ್ದಾರೆ. ಈಗಾಗಲೇ ಅಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಕ್ವೊಟೇಷನ್ ಕಡೆದು ಜಿಲ್ಲೆಗೆ ಏನೇನು ಸಲಕರಣೆ ಬೇಕಾಗುತ್ತದೆ ಅದನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ. ಮಾನ್ಯ ಮಲ್ಲಪ್ಪನವರು ಮತ್ತು ಮಾನ್ಯ ನಂಜಯ್ಯನ ಮಠ್ ಅವರು ಭೂಮಿ ಜವುಳಾಗಿದೆ, ಸವುಳಾಗಿದೆ ಎಂದು ಹೇಳಿದ್ದಾರೆ. ಅದನ್ನು ಸರಿ ಮಾಡಬೇಕಾದರೆ ಒಂದು ಹೆಕ್ಟೇರ್‌ಗೆ ೧೦ ಸಾವಿರ ರೂಪಾಯಿಗಳು ಬೇಕಾಗುತ್ತದೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಪ್ರಸ್ತಾಪ ಮಾಡಿದ್ದೇನೆ ಇದರ ಬಗ್ಗೆ ಒಂದು ಯೋಜನೆ ಮಾಡಿ ಕಳುಹಿಸಿ, ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಆ ಪ್ರಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಮಾಡುತ್ತಿರತಕ್ಕ ಕೆಲಸ ಸಾಲದು. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಪಾಠಶಾಲೆ ಆಗಬೇಕು, ಕೃಷಿ ವಿಶ್ವವಿದ್ಯಾನಿಲಯ ಆಗಬೇಕು ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ, ಮಾನ್ಯ ಉಸ್ತಾದ್‌ರವರು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಎನ್. ಹೆಚ್. ಗೌಡರು ಯಾವ ಪ್ರಕಾರ ಭಾರತ ಸರ್ಕಾರ ಕೃಷಿ ಪಂಡಿತ ಎಂದು ರೈತರಿಗೆ ಗೌರವ ಕೊಟ್ಟು ಮನ್ನಿಸುತ್ತದೆ ಆ ಪ್ರಕಾರ ರಾಜ್ಯ ಸರ್ಕಾರವೂ ಮಾಡಬೇಕೆಂದು ಹೇಳಿದ್ದಾರೆ. ಅದು ಒಳ್ಳೆಯ ಸೂಚನೆ ಇದೆ. ಅದನ್ನು ಜಾರಿಯಲ್ಲಿ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಭರವಸೆ ಕೊಡುತ್ತೇನೆ. ಮಾನ್ಯ ಶಿವನಂಜಪ್ಪನವರು ಸರ್ಟಿಫೈಡ್ ಸೀಡ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸೀಡ್ ಸರ್ಟಿಫೈ ಏಜೆನ್ಸಿ ಸರ್ಟಿಫೈ ಮಾಡಬೇಕಾಗುತ್ತದೆ. ಆದಷ್ಟು ಮಟ್ಟಿಗೆ ರೈತರಿಗೆ ಅನುಕೂಲವಾಗುವ ಹಾಗೆ ಒಳ್ಳೆಯ ಗುಣಮಟ್ಟದ ಬೀಜಗಳನ್ನು ಕೊಡಲು ಪ್ರಯತ್ನ ಮಾಡುತ್ತೇವೆ. ಲೋಪದೋಷ ಇದ್ದರೆ ಸುಧಾರಿಸುತ್ತೇವೆ. ಮಾನ್ಯ ಕುಮಾರಗೌಡ ಪಾಟೀಲರು ಒಳ್ಳೆಯ ಸೂಚನೆ ಮಾಡಿದ್ದಾರೆ. ಮಾನ್ಯ ಇದಿನಬ್ಬರವರು ಚೆನ್ನಾಗಿ ಮಾತನಾಡಿ ರೈತರ ಕಳಕಳಿಯನ್ನು ಮಾರ್ಮಿಕವಾಗಿ ಹೇಳಿದ್ದಾರೆ, ನಾವು ಅವರ ಜೊತೆಗೆ ಇದ್ದೇವೆ ಒಳ್ಳೆಯ ಗುಣಮಟ್ಟದ ಬೀಜ, ರಸಗೊಬ್ಬರ, ಸಾಲ ಕ್ರಿಮಿನಾಶಕಗಳೆಲ್ಲ ರೈತರ ಮನೆ ಬಾಗಿಲಿಗೆ ಹೋಗಬೇಕೆಂದು ಹೇಳಿದ್ದಾರೆ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಇದು ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯ. ಹಾಗೂ ಸಿಂಗಲ್ ವಿಂಡೋ ಆಗಿ ಸರ್ಕಾರ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಆ ಪ್ರಕಾರ ಸರ್ಕಾರ ಕೆಲಸ ಮಾಡುತ್ತದೆಂದು ಭರವಸೆ ಕೊಡುತ್ತೇನೆ. ಜವಳು ಮತ್ತು ಸವಳು ಭೂಮಿ ಬಗ್ಗೆ ಈಗಾಗಲೇ ಹೇಳಿದ್ದೇನೆ. ರಾಜ್ಯದಲ್ಲಿ ೧೦೩ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಕೃಷಿ ಉತ್ಪಾದನೆ ಮಾಡುತ್ತಿದ್ದೇವೆ ಭೂಮಿಗೆ ಒಂದು ಲಿಮಿಟ್ ಇದೆ. ಮಾನ್ಯ ಲಕ್ಕಪ್ಪನವರು ಹೇಳಿದ ಹಾಗೆ ಇನ್ನೂ ೧೦-೧೨ ಸಾವಿರ ಹೆಕ್ಟೇರ್ ಭೂಮಿಯನ್ನು ಸಾಗುವಳಿಗೆ ತರಬಹುದು. ಹೆಚ್ಚಿನ ಉತ್ಪಾದನೆಯನ್ನು ಹೊಂದಬೇಕಾದರೆ ಇಂಟರ್‌ಕ್ರಾಪಿಂಗ್‌ಗೆ ಹೆಚ್ಚಿನ ಮಹತ್ವ ಕೊಡಬೇಕಾಗುತ್ತದೆ. ಇಂಟರ್‌ಕ್ರಾಪಿಂಗ್ ಎಷ್ಟೋ ಕಡೆ ಆಗುತ್ತಿದೆ. ಈ ಬಗ್ಗೆ ವಿಶ್ವವಿದ್ಯಾನಿಲಯದವರು ಕೂಡ ರೀಸರ್ಚ್ ಮಾಡುತ್ತಿದ್ದಾರೆ. ಹೆಚ್ಚಿನ ಬೆಳೆಯನ್ನು ಒಳ್ಳೆಯ ಭೂಮಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆಗಬಹುದು. ಆ ಬಗ್ಗೆ ಒಂದು ರೀಸರ್ಚ್ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಧಾರವಾಡ ವಿಶ್ವವಿದ್ಯಾನಿಲಯದವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಕೃಷಿ ಸಲಕರಣೆ ಬಗ್ಗೆ ಈಗಾಗಲೇ ಹೇಳಿದ್ದೇನೆ. ಫರ್ಟಿಲೈಸರ್ಸ್ ಆಗಲಿ, ಸೀಡ್ಸ್ ಆಗಲಿ ಮಾರಾಟ ಮಾಡುವಾಗ ಅಡಲ್ಟ್ರೇಷನ್ ಆಗುತ್ತದೆ, ಇಲ್ಲವೆಂದು ಹೇಳುವುದಿಲ್ಲ. ಇದಕ್ಕೆ ಸ್ಟ್ರಿಕ್ಟ್ ವಿಜಿಲೆನ್ಸ್ ಇಟ್ಟು ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ಕೆಲವು ಸಮಸ್ಯೆಗಳನ್ನು ನಾನು ಆಗಲೇ ಪ್ರಸ್ತಾಪ ಮಾಡಿದೆ ಆ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡುತ್ತಿದ್ದೇವೆ. ನ್ಯಾಯ ಬೆಲೆ ಕೊಡುವುದು, ಕೃಷಿ ಸಲಕರಣೆಗಳನ್ನು ಒದಗಿಸುವುದು ಇತ್ಯಾದಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಪ್ರೊಕ್ಯೂರ್‌ಮೆಂಟ್ ಬಗ್ಗೆಯೂ ಹೇಳಿದ್ದೇನೆ.

(ಕೆಲವು ಸದಸ್ಯರು ಗುಂಪಾಗಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಚಟುವಟಿಕೆಗಳನ್ನು ಸಭೆಯ ನಂತರ ಮಾಡುವುದು ಒಳ್ಳೆಯದು.

ಶ್ರೀ ಗೋಪಾಲ ಮುಕುಂದ ಕಾನಡೆ.—ನಿನ್ನೆ ಮೀಟಿಂಗ್ ಕರೆದಿದ್ದರು. ಆ ಮೀಟಿಂಗಿಗೆ ಹೋದರೆ ಇದ್ದವರು ಇವತ್ತು ಇಲ್ಲಿ ಚರ್ಚೆ ನಡೆಸುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಹೊರ ರಾಷ್ಟ್ರದ ಧನ ಸಹಾಯದಿಂದ ಕೆಲವು ಯೋಜನೆಗಳನ್ನು ಮಾಡುತ್ತಿದ್ದೇವೆ. ಉತ್ತರ ಕನ್ನಡ ಜಿಲ್ಲೆ, ಬೆಳಗಾಂ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯಲ್ಲಿ ಡ್ಯಾನಿಡಾ ಸಹಾಯದಿಂದ ಈ ವರ್ಷದಿಂದ ಜಲಾನಯನ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ.

ಐದು ನ್ಯಾಷನಲ್ ವಾಟರ್ ಷೆಡ್ಸ್ ಪ್ರೋಗ್ರಾಂ ತೆಗೆದುಕೊಳ್ಳುತ್ತಿದ್ದೇವೆ. ಆರು ಬೆಳಗಾಂ ಜಿಲ್ಲೆಯಲ್ಲಿ. ಆರು ಧಾರವಾಡ ಜಿಲ್ಲೆಯಲ್ಲಿ ಮತ್ತು ೩ ಉತ್ತರ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಳ್ಳುತ್ತಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾದವರು ಡಚ್ ಅಸಿಸ್ಟೆನ್ಸ್‌ನಿಂದ ಅಪ್ರೈಸಲ್ ಮೆಷಿನ್ ಹಾಕುತ್ತಿದ್ದಾರೆ ಅದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಅದೇ ಪ್ರಕಾರ ಕರ್ನಾಟಕದಲ್ಲಿ ಒಣ ಬೇಸಾಯ ಕೆಲಸಕ್ಕೆ ಪ್ರೋತ್ಸಾಹ ನೀಡುತ್ತಿದ್ದೇವೆ. ವಿಶ್ವ ಬ್ಯಾಂಕಿನವರು ನಮಗೆ ಸಾಕಷ್ಟು ಸಾಲ ನೀಡಿ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅದರ ಲಾಭ ತೆಗೆದುಕೊಂಡು ರಾಯಚೂರು ಜಿಲ್ಲೆಯಲ್ಲಿ ಐದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಡಿವಾಳ ವಾಟರ್ ಷೆಡ್ ಯೋಜನೆ ಮಾಡಬೇಕೆಂದಿದ್ದು ಅದು ಅವರ ಕನ್‌ಸಿಡರೇಷನ್‌ನಲ್ಲಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಮಾನ್ಯ ಸದಸ್ಯರಾದ ಬಚ್ಚೇಗೌಡರು ಪ್ರತಿಯೊಂದು ಜಿಲ್ಲೆಯಲ್ಲಿ ಒಣ ಬೇಸಾಯ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈ ದಿಸೆಯಲ್ಲಿ ವಿಶ್ವ ಬ್ಯಾಂಕ್ ಕೂಡ ಮುಂದೆ ಬಂದಿದೆ, ದೇಶದ ೬ ರಾಜ್ಯಗಳಲ್ಲಿ ಒಣ ಬೇಸಾಯಕ್ಕೆ ಸಹಾಯ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರ ಕೂಡ ಒಪ್ಪಿಗೆ ಕೊಟ್ಟಿದ್ದು ೧೫೦ ಕೋಟಿ ರೂಪಾಯಿಗಳ ಯೋಜನೆ ಮಾಡುತ್ತಿದೆ. ಪ್ರತಿ ಜಿಲ್ಲೆಯಲ್ಲಿ ೨೫ ರಿಂದ ೩೦ ಸಾವಿರ ಹೆಕ್ಟೇರ್ ಭೂಮಿಯನ್ನು ಈ ಯೋಜನೆಗೆ ತರಬೇಕೆಂದು ಮಾಡಿದ್ದೇವೆ ಇವೊತ್ತು ನನ್ನ ಇಲಾಖೆಯಿಂದ ಕೆಲವು ಸ್ಕೀಮ್‌ಗಳನ್ನು ಈ ವರ್ಷ ಘೋಷಣೆ ಮಾಡುತ್ತಿದ್ದೇನೆ. ಇದರಲ್ಲಿ ಒಂದು ವಿಚಾರ ತಮಗೆ ಗೊತ್ತು ಈಗಾಗಲೇ ನಮ್ಮ ಸರ್ಕಾರ ರೈತರ ಸಮಸ್ಯೆಯನ್ನು ತಿಳಿದುಕೊಂಡು. ಭೀಕರವಾದ ಬರಗಾಲದ ಪರಿಣಾಮವನ್ನು ತಿಳಿದುಕೊಂಡು ರೈತರಿಗೆ ದಂಡದ ಬಡ್ಡಿ ರಿಯಾಯಿತಿ ಕೊಟ್ಟಿದೆ. ಹಿಂದೆ ಕೃಷಿ ಇಲಾಖೆ ಮತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವತಿಯಿಂದ ಹೈಪಾತಿಕೇಷನ್ ಮೇಲೆ ಟ್ರಾಕ್ಟರ್‌ಗಳು, ಪವರ್ ಟಿಲ್ಲರ್‌ಗಳು ಮತ್ತು ಪಂಪ್‌ಸೆಟ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಸಹಾಯ ಮಾಡಿ ಸಾಲ ಕೊಟ್ಟಿತ್ತು. ಕಳೆದ ಎಷ್ಟೋ ವರ್ಷಗಳಿಂದ ರೈತರಿಂದ ಒಂದು ಕೂಗಿದೆ. ಸಹಕಾರ ಸಂಘದ ಸಾಲಕ್ಕೆ ರಿಯಾಯಿತಿ ಕೊಟ್ಟರಿ, ಅಲ್ಲಿ ಅಸಲನ್ನು ಕೊಟ್ಟರೆ ಬಡ್ಡಿ ರಿಯಾಯಿತಿ ಮಾಡಿದ್ದೀರಿ. ಅದೇ ಪ್ರಕಾರ ನಮಗೂ ಮಾಡಬೇಕೆಂದು ಒತ್ತಾಯ ಬಂದಾಗ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಸರ್ಕಾರ ಮತ್ತೊಂದು ನಿರ್ಣಯ ತೆಗೆದುಕೊಂಡಿದೆ. ಯಾರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಕೃಷಿ ಇಲಾಖೆಯಿಂದ ಹೈಪಾತಿಕೇಷನ್ ಮೇಲೆ ಸಾಲ ತೆಗೆದುಕೊಂಡಿದ್ದಾರೆ ಅವರಿಗೆ ದಂಡದ ಬಡ್ಡಿ ರಿಯಾಯಿತಿ ಕೊಡುವ ಘೋಷಣೆ ಮಾಡುತ್ತಿದ್ದೇನೆ. ಇದರಿಂದ ೧೨ ಕೋಟಿ ೭೫ ಲಕ್ಷ ರೂಪಾಯಿಗಳು ರೈತರಿಗೆ ರಿಯಾಯಿತಿ ಸಿಗುತ್ತಿದೆ,

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೊಂದು ಸಾರಿ ಹೇಳಿ. ಅವರಿಗೆ ಕೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಮ್ಮೆ ಹೇಳು ಎಂದು ಹೇಳುತ್ತಿದ್ದಾರೆ. ಲೌಡ್ ಸ್ಪೀಕರ್ ಹಚ್ಚಿ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ಇವತ್ತು ರೈತರು ತೊಂದರೆಯಲ್ಲಿದ್ದಾರೆ. ಸಮಸ್ಯೆಯನ್ನು ತಿಳಿದುಕೊಂಡು ಸಹಾಯ ಮಾಡುತ್ತಿದ್ದೇವೆ. ಈ ಸದನದ ಸದಸ್ಯರಾದ ರೆಡ್ಡಿಯವರು ಮತ್ತು ಕೆಲವು ಸದಸ್ಯರು ಬಹಳ ಒತ್ತಾಯ ತಂದಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಕೂಡ ನನಗೆ ಆದೇಶವನ್ನು ಕೊಟ್ಟು ಆದಷ್ಟು ಜಾಗ್ರತೆಯಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿದ್ದರು. ಆ ಪ್ರಕಾರ ನಿರ್ಣಯ ತೆಗೆದುಕೊಂಡಿದ್ದೇವೆ. ೩೦-೧೧-೧೯೮೭ ರೊಳಗೆ ಅವರು ಅಸಲನ್ನು ಮರುಪಾವತಿ ಮಾಡಿದರೆ ದಂಡದ ಬಡ್ಡಿ ರಿಯಾಯಿತಿ ಕೊಡುತ್ತಿದ್ದೇವೆ. ೧೨ ಕೋಟಿ ೭೫ ಲಕ್ಷ ರೈತರಿಗೆ ಇದನ್ನು

ಕೊಡುತ್ತಿದ್ದೇವೆ ಜನತಾ ಸರ್ಕಾರದ ರೈತರಿಗೆ ಈ ರಿಯಾಯಿತಿಯನ್ನು ಕೊಡುತ್ತಿದೆ. ಅದೇ ಪ್ರಕಾರ ಜಿ. ವಿ. ಕೆ. ರಾವ್ ಕಮಿಟಿಯವರು ಕೃಷಿ ಪಾಠ ಶಾಲೆಗಳೇನಿವೆ ಅವನ್ನು ಪಾಲಿಟೆಕ್ನಿಕ್‌ಗಳನ್ನಾಗಿ ಮಾಡಿ ಎಂದು ಸೂಚನೆ ಕೊಟ್ಟಿದ್ದಾರೆ. ಈ ವರ್ಷ ನಾಲ್ಕು ಪಾಲಿಟೆಕ್ನಿಕ್‌ಗಳನ್ನು ನಾಲ್ಕು ವಿಭಾಗಗಳಲ್ಲಿ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ನಮ್ಮ ಇಲಾಖೆಯಿಂದ ಮಾನಿಟರಿಂಗ್ ಮತ್ತು ಇವ್ಯಾಲ್ಯುಯೇಷನ್ ಸೈಡಿನಿಂದ Identification of low prodnctivitytaluk in Karnataka ಎಂದು ಪುಸ್ತಕ ಪ್ರಕಟ ಮಾಡಿದ್ದಾರೆ, ಕೃಷಿ ಉತ್ಪಾದನೆ ಹೆಚ್ಚು ಆಗಬೇಕೆಂಬ ಗುರಿ ಇದ್ದಾಗ ಕೆಲವು ತಾಲ್ಲೂಕುಗಳಲ್ಲಿ ಸ್ಟಾಫ್ ತೊಂದರೆಯಿಂದ, ಫರ್ಟಿಲೈಸರ್ಸ್ ವಿತರಣೆಯ ತೊಂದರೆಯಿಂದ ಮತ್ತು ಬೀಜಗಳ ತೊಂದರೆಯಿಂದ ಸಮಸ್ಯೆಯಾಗಿದೆ. ಮಳೆ ಅಭಾವದಿಂದ ಕೂಡ ಯಾವ ಪ್ರಮಾಣದಲ್ಲಿ ಉತ್ಪಾದನೆ ಆಗಬೇಕೋ ಅದು ಆಗುತ್ತಿಲ್ಲ. ಈ ಸೆಲ್‌ನವರು ಲೋ ಪ್ರೊಡಕ್ಟಿವಿಟಿ ತಾಲ್ಲೂಕುಗಳೆಂದು ೨೦ ಜಿಲ್ಲೆಯಲ್ಲಿ ೨೦ ತಾಲ್ಲೂಕುಗಳನ್ನು ಐಡೆಂಟಿಫೈ ಮಾಡಿದ್ದಾರೆ. ಆ ತಾಲ್ಲೂಕುಗಳಲ್ಲಿ ಹೆಚ್ಚಿನ ಉತ್ಪಾದನೆ ಮಾಡಲಿಕ್ಕೆ ಹೊಸ ಯೋಜನೆ "ಹಸಿರು ಕಿರಣ" ಎಂದು ಜಾರಿಗೆ ತರುತ್ತಿದ್ದಾರೆ. ೨೦ ತಾಲ್ಲೂಕುಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ನೋಡಿಕೊಂಡು ಯೋಜನೆಯನ್ನು ಜಾರಿಗೆ ತರುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ತಾಲ್ಲೂಕುಗಳು ಯಾವುದೆಂದರೆ ಬೆಂಗಳೂರಿನಲ್ಲಿ ಆನೇಕಲ್, ಬೆಂಗಳೂರಿನ ರೂರಲ್‌ನಲ್ಲಿ ಮಾಗಡಿ ಕೋಲಾರದಲ್ಲಿ ಗುಡಿಬಂಡೆ. ತುಮಕೂರಿನಲ್ಲಿ ಶಿರಾ, ಶಿವಮೊಗ್ಗದಲ್ಲಿ ಸೊರಬ. ಚಿತ್ರದುರ್ಗದಲ್ಲಿ ಚಳ್ಳಕೆರೆ. ಮೈಸೂರಿನಲ್ಲಿ ಚಾಮರಾಜನಗರ, ಮಂಡ್ಯದಲ್ಲಿ ನಾಗಮಂಗಲ, ಕೊಡಗು ಜಿಲ್ಲೆಯಲ್ಲಿ ಮಡಕೇರಿ, ಹಾಸನದಲ್ಲಿ ಅರಸೀಕೆರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು ದಕ್ಷಿಣ ಜಿಲ್ಲೆಯಲ್ಲಿ ಬೆಳ್ತಂಗಡಿ, ಧಾರವಾಡ ಜಿಲ್ಲೆಯಲ್ಲಿ ಮುಂಡರಗಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸೂಪ. ಬೆಳಗಾಂ ಜಿಲ್ಲೆಯಲ್ಲಿ ಅಥಣಿ, ಬಿಜಾಪುರ ಜಿಲ್ಲೆಯಲ್ಲಿ ಬಸವನ ಬಾಗೇವಾಡಿ, ರಾಯಚೂರು ಜಿಲ್ಲೆಯಲ್ಲಿ ದೇವದುರ್ಗ, ಬಳ್ಳಾರಿ ಜಿಲ್ಲೆಯಲ್ಲಿ ಹೆಚ್. ಬಿ. ಹಳ್ಳಿ, ಗುಲ್ಬರ್ಗಾ ಜಿಲ್ಲೆಯಲ್ಲಿ ಅಫ್‌ಜಲ್‌ಪುರ ಬೀದರ್ ಜಿಲ್ಲೆಯಲ್ಲಿ ಬಸವ ಕಲ್ಯಾಣ ಈ ತಾಲೂಕುಗಳಲ್ಲಿ ಈ ವರ್ಷದಿಂದ ಹಸಿರು ಕಿರಣ ಯೋಜನೆಯನ್ನು ಜಾರಿಗೆ ತರುತ್ತೇವೆ. ಮತ್ತು ಹೆಚ್ಚಿನ ಉತ್ಪಾದನೆಯನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಭೀಕರ ಬರಗಾಲದಿಂದಾಗಿ ಇಡೀ ದೇಶದಲ್ಲಿ ಕೃಷಿಯ ಉತ್ಪಾದನೆ ಕಡಿಮೆಯಾಗಿದೆ, ಮಾನ್ಯ ಪ್ರಧಾನಿಯವರ ನೇತೃತ್ವದಲ್ಲಿ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಮತ್ತು ಕೃಷಿ ಸಚಿವರುಗಳ ಸಭೆ ನಡೆದಾಗ ನಮ್ಮ ದೇಶದಲ್ಲಿ ಯಾವ ರೀತಿ ಕೃಷಿಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದು ಮಾನ್ಯ ವೀರಪ್ಪಮೊಯಿಲಿಯವರಿಗೂ ಗೊತ್ತು. ಅವರು ನಮಗೆ ಸಾಕಷ್ಟು ಸಹಾಯ ಮಾಡಿದ್ದಾರೆ, ಈ ದಿಸೆಯಲ್ಲಿ ಕೇಂದ್ರ ಸರ್ಕಾರದವರು ಒಂದು ಹೊಸ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಮಲೆನಾಡು ಕೋಸ್ಟಲ್‌ನಲ್ಲಿ ೮ ಜಿಲ್ಲೆಗಳನ್ನು ಆ ಜಿಲ್ಲೆಗಳು ಯಾವುವೆಂದರೆ. ಬೆಳಗಾಂ, ಚಿಕ್ಕಮಗಳೂರು ದಕ್ಷಿಣ ಕನ್ನಡ ಜಿಲ್ಲೆ. ಧಾರವಾಡ. ಹಾಸನ, ಶಿವಮೊಗ್ಗ, ಕೊಡಗು, ಉತ್ತರ ಕನ್ನಡ ಈ ಜಿಲ್ಲೆಗಳಲ್ಲಿ ೩೯ ತಾಲೂಕುಗಳನ್ನು ಐಡೆಂಟಿಫೈ ಮಾಡಿದ್ದೇವೆ. ಇಲ್ಲಿ ಹೆಚ್ಚಿನ ರೈಸನ್ನು ಪ್ರೊಡಕ್ಷನ್ ಮಾಡುವುದಕ್ಕೆ ೩೦೬ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇದರಿಂದಾಗಿ ಈ ತಾಲೂಕುಗಳಲ್ಲಿ ಹೆಚ್ಚಿನ ರೈಸ್‌ನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಬಹುದು. ಇದೇ ಪ್ರಕಾರ ಫರ್ಟಿಲೈಸರ್ ಕನ್‌ಸಂಪ್ಷನ್‌ನ್ನು ಇಂಪ್ರೂವ್ ಮಾಡಲಿಕ್ಕೆ ೧೦.೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದೇ ರೀತಿ ಕೋ ಆಪರೇಟಿವ್ ಫೀಲ್ಡ್‌ಗೆ ೫೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ೨ ಕೋಟಿ ರೂಪಾಯಿಗಳನ್ನು ಬೋರ್‌ವೆಲ್ ಮತ್ತು ಓಪನ್ ವೆಲ್‌ಗಳಿಗೋಸ್ಕರ ಸರ್ಕಾರ ಮಂಜೂರು ಮಾಡಿದೆ. ಈ ಎಲ್ಲಾ ಕಾರ್ಯಕ್ರಮಗಳೂ ಮುಂದಿನ ವರ್ಷದಿಂದ ಜಾರಿಗೆ ಬರುತ್ತವೆ. ಇದರಲ್ಲಿ ಎಸ್. ಸಿ. ಎಸ್. ಟಿ. ಮತ್ತು ಎಸ್. ಟಿ. ಫಾರ್ಮರ್ಸ್‌ಗೆ ೫೦ ಪರ್ಸೆಂಟ್ ಸಬ್ಸಿಡಿ, ಮಾರ್ಜಿನಲ್ ಫಾರ್ಮರ್ಸ್‌ಗೆ ೩೩ ಪರ್ಸೆಂಟ್ ಸ್ಮಾಲ್ ಫಾರ್ಮರ್ಸ್‌ಗೆ ೨೫ ಪರ್ಸೆಂಟ್ ಸಬ್ಸಿಡಿ ಸಿಕ್ಕುತ್ತದೆ. ಈ ರೀತಿ ಸರ್ಕಾರ ರೈತರಿಗೆ ಅನುಕೂಲ ಮಾಡಿಕೊಟ್ಟಿದೆ.

ಮತ್ತೊಂದು ಹೊಸ ಯೋಜನೆ ಈ ವರ್ಷದಿಂದಲೇ ಜಾರಿಗೆ ಬರುತ್ತದೆ. ಅದು ಎಂದರೆ ರಾಷ್ಟ್ರೀಯ ಗೊಬ್ಬರ ಅಭಿವೃದ್ಧಿ ಯೋಜನೆ ಈ ಯೋಜನೆಯ ಅಡಿಯಲ್ಲಿ ಧಾರವಾಡ, ಬಿಜಾಪುರ, ಗುಲ್ಬರ್ಗಾ, ತುಮಕೂರು ಮತ್ತು ಕೋಲಾರ, ಈ ೫ ಜಿಲ್ಲೆಗಳಿಗೆ ೪೧.೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಎಲ್ಲೆಲ್ಲಿ ಈ ಗೊಬ್ಬರದ ಕನ್‌ಸಂಪ್ಷನ್ ಕಡಿಮೆ ಇದೆ ಅಲ್ಲೆಲ್ಲಾ ಈ ಕನ್‌ಸಂಪ್ಷನ್‌ನು ಹೆಚ್ಚು ಮಾಡುವುದಕ್ಕೆ ಈ ಹೊಸ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಫರ್ಟಿಲೈಸರ್ಸ್

ಕನ್‌ಸಂಪ್ಷನ್ ರಾಜ್ಯದಲ್ಲಿ ಹೆಚ್ಚಿಗೆ ಇದ್ದರೂ ಸಹ ರೇನ್ ಫೆಡ್ ಏರಿಯಾದಲ್ಲಿ ಈ ಕನ್‌ಸಂಪ್ಷನ್ ಕೇವಲ ೨೦ ಪರ್ಸೆಂಟ್ ಮಾತ್ರ. ಆದ್ದರಿಂದ ಇದನ್ನು ಹೆಚ್ಚಿಗೆ ಮಾಡುವುದಕ್ಕೆ ನಮ್ಮ ಸರ್ಕಾರ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದಿದೆ. ಇದೇ ರೀತಿ ರಾಷ್ಟ್ರೀಯ ಬೀಜ ಯೋಜನೆಯ ೨ನೇ ಹಂತವೂ ಸಹ ಈ ವರ್ಷದಿಂದಲೇ ಜಾರಿಗೆ ಬರುತ್ತದೆ. ಇದು ೨ ಕೋಟಿ ರೂಪಾಯಿಗಳ ಯೋಜನೆ. ಇದರಿಂದ ಪ್ರೋಸೆಸಿಂಗ್ ಯೂನಿಟ್‌ಗಳು, ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಸಹಾಯ ಮಾಡುತ್ತಿದ್ದೇವೆ. ಇದೇ ರೀತಿ ಡ್ಯಾನಿಡಾ ಫಸ್ಟ್ ಫೇಸ್‌ನಲ್ಲಿ ಮಾಡಿದ ಕೆಲಸವು ಅವರಿಗೆ ತೃಪ್ತಿಕರವಾದ್ದರಿಂದ ಡ್ಯಾನಿಡಾದವರು ಮತ್ತೆ ೨ನೇ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟು ಹೋಗಿದ್ದಾರೆ. ಈ ಯೋಜನೆಯೂ ಕೂಡ ಇದೇ ವರ್ಷದಿಂದಲೇ ಜಾರಿಗೆ ಬರುತ್ತದೆ. ಮೊದಲು ನಾವು ಕೇವಲ ೧೧ ತಾಲ್ಲೂಕಿಗೆ ಮಾತ್ರ ಈ ಯೋಜನೆಯನ್ನು ಅಳವಡಿಸಿದ್ದೆವು. ಆದರೆ ಈ ವರ್ಷದಿಂದ ಬೀದರ್ ಮತ್ತು ಬೆಂಗಳೂರಿನ ಅರ್ಬನ್ ಇವೆರಡನ್ನೂ ಬಿಟ್ಟರೆ ಉಳಿದೆಲ್ಲ ಜಿಲ್ಲೆಗಳನ್ನೂ ನಾವು ಈ ಯೋಜನೆಯ ಅಡಿಯಲ್ಲಿ ತರುತ್ತಿದ್ದೇವೆ. ಇದು ೬ ವರ್ಷದ ಕಾರ್ಯಕ್ರಮ.

ಇದರ ಔಟ್‌ಲೇ ೧೦ ಕೋಟಿ ರೂಪಾಯಿಗಳಾಗುತ್ತದೆ. ಇದರಿಂದ ಕಟ್ಟಡಗಳನ್ನು ಕಟ್ಟುವುದು, ರೈತರಿಗೆ ತರಬೇತಿ ಕೊಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು, ಮತ್ತು ಡೆಮಾನ್‌ಸ್ಟ್ರೇಷನ್ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ನನ್ನ ಇಲಾಖೆಯ ಮೇಲೆ ಏನೇನು ಪ್ರಶ್ನೆಗಳನ್ನು ಕೇಳಿದ್ದಾರೆ ಅವೆಲ್ಲಕ್ಕೂ ಉತ್ತರ ಕೊಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. ಇಷ್ಟು ಹೇಳಿ ನನ್ನ ಇಲಾಖೆಯ ಬೇಡಿಕೆಗಳಿಗೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ನೀಡುವ ಸಮಯದಲ್ಲಿ ಕೇಂದ್ರ ಸರ್ಕಾರ ಬರಗಾಲದ ಸಮಯದಲ್ಲಿ ಈ ರಾಜ್ಯಕ್ಕೆ ಸಹಾಯ ಮಾಡಿಲ್ಲ, ಬೇರೆ ರಾಜ್ಯಗಳಿಗೆ ಕೊಟ್ಟ ಹಣದ ಸೌಕರ್ಯವನ್ನೂ ನಮಗೆ ನೀಡಿಲ್ಲ ಎಂದು ಹೇಳಿದ್ದಾರೆ. ಆದರೆ ಬೇರೆ ರಾಜ್ಯಗಳಿಗೆ ಯಾವ ರೀತಿ ಕೇಂದ್ರ ಸಹಾಯವನ್ನು ಮಾಡಿತ್ತೋ ಅದೇ ರೀತಿ ಈ ಸರ್ಕಾರಕ್ಕೂ ಕೂಡಾ, ಇವರ ಕೈಯಲ್ಲಿ ಬೈಯಿಸಿಕೊಂಡರೂ ಜನರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಹಾಯವನ್ನು ಮಾಡಿದೆ. ಯಾವ ಆಧಾರವನ್ನು ಇಟ್ಟುಕೊಂಡು ಕೇಂದ್ರ ಬರಗಾಲದ ಬಗ್ಗೆ ಸಹಾಯ ಮಾಡಿಲ್ಲ ಎಂದು ಹೇಳಿದ್ದಾರೆಂಬುದನ್ನು ಹೇಳಬೇಕು. ಮತ್ತೆ ಕೃಷಿ ಭೂಸಾರ ಸಂರಕ್ಷಣೆ ಇಲಾಖೆ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ, ಆದರೆ ಕೇಂದ್ರ ಸರ್ಕಾರ ಏನು ೫೦ ಪರ್ಸೆಂಟ್ ಹಣವನ್ನು ಸೆಂಟ್ರಲ್ ವಾಟರ್ ಷೆಡ್ ಪ್ರೋಗ್ರಾಮ್ಸ್‌ಗೆ ಕೊಡುತ್ತದೆಯೋ ಅದಕ್ಕೆ ರಾಜ್ಯ ಸರ್ಕಾರ ೫೦ ಭಾಗವನ್ನು ಸೇರಿಸಿ ಕೊಡದೇ ಇರುವುದರಿಂದ ಈಗ ಸೆಂಟ್ರಲ್ ವಾಟರ್ ಷೆಡ್ ಯೋಜನೆಗಳು ಈ ರಾಜ್ಯದಲ್ಲಿ ಕುಂಠಿತವಾಗಿದೆ. ಇವುಗಳಿಗೆ ಸಕಾಲದಲ್ಲಿ ಹಣ ಒದಗಿಸದ್ದಕ್ಕೆ ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದಿರುವುದೇ ಕಾರಣವಾಗಿದೆ. ಈಗ ೪೨ ಲಕ್ಷ ಜನರನ್ನು, ಸಣ್ಣ ಹಾಗೂ ಅತಿ ಸಣ್ಣ ರೈತರನ್ನು ಕೃಷಿ ಇಲಾಖೆ ವತಿಯಿಂದ ಗುರ್ತಿಸಿ ಅವರಿಗೆ ಮಿನಿಕಿಟ್ಸ್ ಕೊಡುವ ಕಾರ್ಯಕ್ರಮ ಇದೆ ಎಂದು ಹೇಳಿದರು. ಇವರಲ್ಲಿ ೧ ಲಕ್ಷ ೪೦ ಸಾವಿರ ಜನರಿಗೆ ಮಿನಿ ಕಿಟ್ಸ್‌ನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಉಳಿದ ಸುಮಾರು ೪೦ ಲಕ್ಷ ಜನರಿಗೆ ನೀವು ಯಾವ ರೀತಿ ಸಹಾಯವನ್ನು ಮಾಡುತ್ತೀರಿ ? ಇವತ್ತು ಅತಿ ಸಣ್ಣ ರೈತರಿಗೆ ತಾವು ಕೊಟ್ಟಿರತಕ್ಕ ಸೌಕರ್ಯ ಬಹಳ ಕಡಿಮೆ. ಉಳಿದಿರುವ ಈ ರೈತರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ? ಏಕೆ ಇವರಿಗೆ ತಾವು ಸಹಾಯ ಮಾಡಿಲ್ಲ ?

ಶ್ರೀ ಆರ್. ವಿ. ದೇಶಪಾಂಡೆ.—ಮಿನಿ ಕಿಟ್ಸ್ ಕೊಟ್ಟಿದ್ದುದು ೧ ಲಕ್ಷ ಜನಕ್ಕೆ ಅಲ್ಲ. ೭೪,೮೯೦ ಜನರಿಗೆ ಈ ಮಿನಿ ಕಿಟ್ಸ್‌ನ್ನು ಪೆರೈಟಿಯದು ಇದೆ. ಇವುಗಳನ್ನು ರೈತರಿಗೆ ಆಕರ್ಷಣೆ ಮಾಡುವುದಕ್ಕೆ ಕೊಡಲಾಗುತ್ತಿದೆ. ಬರಗಾಲಕ್ಕೆ ಹೆಚ್ಚು ಹಣ ಕೊಡುವ ಬಗ್ಗೆ ಕೇಳಿದ್ದೀರಿ, ಇದು ವಿವಾದದ ಪ್ರಶ್ನೆ ನಾವು ಎಷ್ಟೇ ಕನ್ವಿನ್ಸ್ ಮಾಡಿದರೂ ನೀವು ಕನ್ವಿನ್ಸ್ ಆಗುವುದಿಲ್ಲ. ನೀವು ಏನು ಕೇಳಿದ್ದೀರಿ, ಅಷ್ಟು ಪ್ರಮಾಣದಲ್ಲಿ ಕೊಡಲಿಕ್ಕಾಗಿಲ್ಲ ಸಾಯಿಲ್ ಕನ್ಸರ್ವೇಷನ್ ಬಗ್ಗೆ ಕೇಂದ್ರ ಸರ್ಕಾರದಿಂದ ಏನು ಅನುದಾನ ಬಂದಿದೆ ಅಷ್ಟು ಅನುದಾನವನ್ನು ನಮ್ಮ ಸರ್ಕಾರ ಕೊಟ್ಟಿದೆ. ಯಾವುದೇ ತರಹದ ತೊಂದರೆ ಆಗಿಲ್ಲ. ಇಷ್ಟನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಇನ್ನು ರಸಗೊಬ್ಬರದ ಬಗ್ಗೆ ಹೇಳುತ್ತಾ ಇವರಲ್ಲಿ ಎಷ್ಟು ಪರ್ಸೆಂಟ ಲೋಪದೋಷ ಇದೆ ಎಂದು ಹೇಳಿದ್ದೀರಿ. ಹಾಗೂ ಈ ಲೋಪದೋಷದ ಬಗ್ಗೆ ಯಾವುದೇ ಕಾರ್ಯ

ಕ್ರಮ ತೆಗೆದುಕೊಂಡಿಲ್ಲ. ತಮ್ಮ ವರದಿಯಲ್ಲಿ ಕಳಪೆ ಬೀಜದ ಬಗ್ಗೆ ವಿವರಣೆ ಕೊಟ್ಟಿದ್ದು ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೆಂದು ಹೇಳಿಲ್ಲ. ಮತ್ತೊಂದು ವಿಚಾರವೆಂದರೆ, ಧಾರವಾಡ ವಿಶ್ವವಿದ್ಯಾನಿಲಯದವರು ಶುಗರ್ ಟೆಕ್ನಾಲಜಿ ಬಗ್ಗೆ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುವ ಉದ್ದೇಶಕ್ಕೆ ೧ ಟನ್‌ಗೆ ೧ ರೂಪಾಯಿಯಂತೆ ರೈತರಿಂದ ಮೂಲಬಂಡವಾಳಕ್ಕಾಗಿ ಹಣ ಸಂಗ್ರಹ ಮಾಡುವ ಬಗ್ಗೆ ಸರ್ಕಾರಿ ಆದೇಶ ಮಾಡಿದ್ದು ಆ ಪ್ರಕಾರ ವಸೂಲಿಯನ್ನು ಮಾಡಲಾಗುತ್ತಿದೆ. ಇದರಿಂದ ಎಷ್ಟು ಹಣ ಸಂಗ್ರಹಣೆಯಾಗಿದೆ ? ಈ ಸಂಸ್ಥೆ ಪ್ರಾರಂಭವಾಗಿದೆಯೇ ? ಅಥವಾ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳಿದ್ದಕ್ಕೆ ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಬಗ್ಗೆ ತಾವು ದಯಮಾಡಿ ಮಾಹಿತಿಯನ್ನು ಒದಗಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈಗಾಗಲೇ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಟನ್‌ಗೆ ಒಂದು ರೂಪಾಯಿ ಎಂದು ಸರ್ಕಾರದ ಆದೇಶವಿದೆಯೆಂದು ಹೇಳಿದ್ದಾರೆ, ನನ್ನ ಇಲಾಖೆಯಿಂದ ಯಾವ ಆದೇಶವನ್ನು ಹೊರಡಿಸಿಲ್ಲ ತಾವು ಆ ಆದೇಶವನ್ನು ನನ್ನ ಗಮನಕ್ಕೆ ತಂದರೆ ಅದು ಯಾವ ಇಲಾಖೆಯ ಆದೇಶವೆಂಬುದನ್ನು ನೋಡಿ ಉತ್ತರ ಕೊಡಬಹುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದಮೇಲೆ ಅವರು ಆದೇಶ ಕೊಟ್ಟಿದ್ದಾರೆ. ಈಗಾಗಲೇ ನನ್ನ ತಾಲ್ಲೂಕಿನಲ್ಲಿ ನಮ್ಮ ಬಿಲ್‌ಗಳಲ್ಲಿ ಆ ಪ್ರಕಾರ ಕಟ್ ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಈ ವಿಚಾರದಲ್ಲಿ ವಿಚಾರಮಾಡಿ ಹೇಳುತ್ತೇನೆಂದು ಹೇಳಿದ್ದೇನೆ. ನಮ್ಮ ಇಲಾಖೆಯಿಂದ ಯಾವ ಆದೇಶವೂ ಹೋಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಒಂದು ಕಷ್ಟದ ಕೆಲಸ ಏನಾಗಿದೆ ಎಂದರೆ ಇವರ ಕೈಯಲ್ಲಿ ಇಲಿ ಹಿಡಿಯುವ ಕೆಲಸ ಕೂಡ ಆಗಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಜೋಳದ ಬೆಳೆ ಬಹಳ ಮುಖ್ಯವಾದ ಬೆಳೆ. ಅಲ್ಲಿ ಇಲಿಗಳ ಕಾಟದಿಂದ ಮುಕ್ಕಾಲು ಪಾಲು ಬೆಳೆ ನಷ್ಟವಾಗಿದೆಯೆಂದು ರೈತರು ದೂರು ಕೊಟ್ಟಿದ್ದಾರೆ. ಇದುವರೆಗೆ ಆ ಬಗ್ಗೆ ಅಧಿಕಾರಿಗಳು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಸಕಾಲದಲ್ಲಿ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಇಲಿಗಳ ಹಾವಳಿಯನ್ನು ತಪ್ಪಿಸಿದ್ದರೆ ಬೆಳೆ ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತಿತ್ತು. ಈ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಇಲಿ ಹಿಡಿಯುವ ಬಗ್ಗೆ ತಮ್ಮ ಸಲಹೆ ಏನು ?

ಶ್ರೀ ಬಿ. ಲಕ್ಕಪ್ಪ.—ನಿಮಗೆ ಇಲಿ ಹಿಡಿಯುವುದಕ್ಕೆ ಬರದಿದ್ದರೆ ಹುಲಿ ಹಿಡಿಯುವುದಕ್ಕೆ ಆಗುತ್ತದೆಯೆ ?

ಶ್ರೀ ಜೆ. ಹೆಚ್. ಪಟೇಲ್.—ಇಲಿ ಹಿಡಿಯುವುದು ಹೇಗೆ ?

ಶ್ರೀ ಬಿ. ಲಕ್ಕಪ್ಪ.—ಇಲಿಗಳನ್ನು ಕೊಲ್ಲಬೇಕು. ಇಲಿಗಳ ಹಾವಳಿಯನ್ನು ತಪ್ಪಿಸಬೇಕು, ಇಲಿಗಳನ್ನು ಕೊಲ್ಲತಕ್ಕ ಕೆಲಸವನ್ನು ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲಿಗಳ ಕಾಟದಿಂದ ರೈತರಿಗೆ ನಿಜವಾಗಿಯೂ ತೊಂದರೆಯಾಗಿದೆ. ೫ ವರ್ಷಗಳಿಂದ ಇಲಿಗಳ ಕಾಟ ಜಾಸ್ತಿಯಾದಾಗ ರಾಜ್ಯದಲ್ಲಿ ಲ್ಯಾಂಡಮ್ ಟೈಪ್ ಔಷಧಿಯನ್ನು ಹುಡುಕಿದ್ದರು. ವ್ಯವಸಾಯ ಇಲಾಖೆಯವರು ಇಂಟೆನ್ಸೀವ್ ಕೇರ್ ತೆಗೆದುಕೊಳ್ಳಬೇಕು. ಪರ್ಟಿಕ್ಯುಲರ್ಲಿ ಗುಲ್ಬರ್ಗ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಜೋಳ ಬೆಳೆಯುತ್ತಾರೆ. ಈ ಪ್ರದೇಶಗಳಲ್ಲಿ ಇಲಿಗಳ ಹಾವಳಿ ಹೆಚ್ಚಿನ ರೀತಿಯಲ್ಲಿದೆ ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಡಿ. ೧೦೦ ಚೀಲ ಜೋಳ ಆಗುವ ಕಡೆಗಳಲ್ಲಿ ೧೫–೨೦ ಚೀಲ ಜೋಳ ಆಗಿದೆ. ನಿಜವಾಗಿಯೂ ಇಲಿಗಳ ಕಾಟದಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅದಕ್ಕೆ ಏನು ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ನಿಮ್ಮ ಕೈಯಲ್ಲಿ ಇಲಿಗಳನ್ನು ಹಿಡಿಯುವುದಕ್ಕೆ ಆಗುವುದಿಲ್ಲ, ಮೈಸೂರಿನಲ್ಲಿ ಆನೆ ಹಿಡಿಯುವುದಕ್ಕೆ ಸಾಧ್ಯವೆ ? ದಯವಿಟ್ಟು ಇಲಿಗಳನ್ನು ಹಿಡಿಸಿ.

ಶ್ರೀ ಜೆ. ಹೆಚ್. ಪಟೇಲ್.—ನಾನು ಲಘುವಾಗಿ ಹೇಳಲಿಲ್ಲ. ನಮಗೂ ಇಲಿಗಳ ತೊಂದರೆಯಿದೆ. ಆ ತೊಂದರೆ ಏತಕ್ಕೆ ಬಂದಿದೆ ಎಂದರೆ ನಮ್ಮ ಗದ್ದೆ ಪ್ರದೇಶಗಳಲ್ಲಿ ಕ್ರಿಮಿನಾಶಕಗಳನ್ನು ಉಪಯೋಗಿಸು

ವುದರಿಂದ ಆ ವಿಷ ನೀರಿನಲ್ಲಿ ಸೇರಿಕೊಳ್ಳುತ್ತದೆ. ನೀರಿನಲ್ಲಿರತಕ್ಕ ವಿಷಜಂತುಗಳು ಅಂದರೆ ಹಾವುಗಳು ನಾಶವಾಗಿವೆ. ಇಲಿಗಳನ್ನು ತಿನ್ನತಕ್ಕ ಹಾವುಗಳು ಸತ್ತುಹೋಗಿವೆ. ಇಲಿಗಳು ದೊಡ್ಡಪ್ರಮಾಣದಲ್ಲಿವೆ. ಅವುಗಳಿಗೆ ವಿಷ ಹಾಕುವುದಕ್ಕೆ ಬರುವುದಿಲ್ಲ. ಇಲಿಗಳ ಮೇಲೆ ವಿಷ ಆಪರೇಟ್ ಮಾಡಿದರೆ ಅದರ ಪರಿಣಾಮ ಫುಡ್‌ಗ್ರೈನ್ಸ್‌ನ ಮೇಲೆ ಆಗುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿರತಕ್ಕ ಇಲಿಗಳ ಮೇಲೆ ವಿಷವನ್ನು ಹಾಕುವುದಕ್ಕೆ ಆಗುವುದಿಲ್ಲ. ಇಲಿ ಹಿಡಿಯುವುದು ನನಗೆ ಗೊತ್ತಿದೆ. ಹುಲಿ, ಆನೆ ಎಲ್ಲವನ್ನು ಹಿಡಿಯುತ್ತೇವೆ. ವಾಸ್ತವವಾಗಿರತಕ್ಕ ಕಷ್ಟ ಇದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಪಟೇಲ್‌ರು ಇಲಿಗಳನ್ನು ಹಿಡಿಯುವುದಕ್ಕೆ ಆಗುವುದಿಲ್ಲವೆಂದು ಹೇಳಿದರು, ನಮ್ಮ ದೇಶಕ್ಕೆ ಚೈನಾದೇಶದವರು ಒಬ್ಬರು ಬಂದಿದ್ದರು, ಅವರಿಗೆ ನಿಮ್ಮ ದೇಶದಲ್ಲಿ ಬೆಳೆಗೆ ಯಾವುದೇ ತೊಂದರೆಯಿಲ್ಲ ಅಂದರೆ, ಅವರು ಏನು ಹೇಳಿದರು ಅಂದರೆ ಬೆಳೆಗಳನ್ನು ನಾಶಮಾಡುವ ಸಾಮಗ್ರಿಗಳನ್ನು ನಾವು ತಿಂದುಹಾಕುತ್ತೇವೆಂದು ಹೇಳಿದರು. ಅಂದರೆ ನಮ್ಮಲ್ಲಿಯೂ ಇಲಿಗಳನ್ನು ತಿನ್ನುವುದನ್ನು ಪ್ರಾಕ್ಟೀಸ್ ಮಾಡಿಸಿದರೆ.....

† **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಡ್ರಾಟ್ ರಿಲೀಫ್ ಆಗಲಿ ಅಥವಾ ಸ್ಕೇರ್‌ಸಿಟಿ ಫಂಡ್ ರಿಲೀಸ್ ಮಾಡುವಾಗ ತಾರತಮ್ಯ ಮಾಡಿದೆ. ಎಷ್ಟರಮಟ್ಟಿಗೆ ಕೊಡಬೇಕಿತ್ತೋ ಅದನ್ನು ಕೊಡಲಿಲ್ಲ ಎನ್ನುವ ಮಾತನ್ನು ಹೇಳಿದರು. ಬಹುಶಃ ಅವರು ಅಂಕಿ ಸಂಖ್ಯೆಗಳನ್ನು ನೋಡುವುದಿಲ್ಲವೆಂದು ನನಗೆ ಗೊತ್ತಾಗಿದೆ. ಏಕೆಂದರೆ ಸುಮ್ಮನೆ ಏನೋ ಹೇಳಬೇಕು ಎಂದು ಹೇಳಿದರೆ ತಪ್ಪಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ೧೯೭೮ ರಿಂದ ೧೯೮೩ ರವರೆಗೆ ಅಂದರೆ ಆಗ ಇಲ್ಲಿ ಕೇಂದ್ರ ಸರ್ಕಾರ ಇದ್ದಾಗ ಕೇಂದ್ರದಿಂದ ಹಣ ಸಿಕ್ಕಿದ್ದು ೭.೭೯ ಪರ್ಸೆಂಟ್ ನಷ್ಟು. ಈಗ ೧೯೮೩ ರಿಂದ ೧೯೮೮ ರವರೆಗೆ ಈ ಬರಗಾಲದಲ್ಲಿ ಕೇಂದ್ರ ಸರ್ಕಾರದಿಂದ ಸಹಾಯ ಸಿಕ್ಕಿದ್ದು ೧೯.೨೦ ಪರ್ಸೆಂಟ್, ಅಂದರೆ ಎಷ್ಟು ಆಯಿತು ? ಹೀಗೆ ಇರುವಾಗ ಅವರು ತಾರತಮ್ಯ ಮಾಡುತ್ತಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ಎರಡನೆಯದಾಗಿ ತಾವು ಕೇಳಿದಂಥ ಹಣ ೧೨೫೪ ಕೋಟಿ ಎಲ್ಲಾ ಮೆಮೊರೆಂಡಮ್ ಸೇರಿಸಿ ೧೯೧ ಕೋಟಿ ಕೊಟ್ಟಿದ್ದಾರೆ. ಆಗ ಕಾಂಗ್ರೆಸ್ ಸರ್ಕಾರ ಇಲ್ಲಿದ್ದಾಗ ಕೇಳಿದ್ದು ೩೭೫ ಕೋಟಿ ರೂಪಾಯಿಗಳು. ಕೊಟ್ಟಿದ್ದು ೪೩ ಕೋಟಿ. ಎಂದರೆ ೭.೭೯ ಪರ್ಸೆಂಟ್ ಆಯಿತು. ಈಗ ಪರ್ಸೆಂಟೇಜ್ ಎಷ್ಟಿದೆ ಎಂದರೆ ೧೯. ಆದ್ದರಿಂದ ಹೆಚ್ಚಿಗೆ ಹಣ ಕೊಟ್ಟಿದ್ದಾರೆಯೇ ಹೊರತಾಗಿ ಕಡಿಮೆ ಇಲ್ಲ. ಹೀಗಿರುವಾಗ ಕೇಂದ್ರ ಸರ್ಕಾರವನ್ನು ಯಾವ ಆಧಾರದ ಮೇಲೆ ದೂರುತ್ತೀರಿ ? ಆಲ್ ಇಂಡಿಯಾ ಆವರೇಜ್ ಇರುವುದು ೧೩.೯ ಪರ್ಸೆಂಟ್. ಇದನ್ನು ತೆಗೆದುಕೊಂಡರೆ ಅದಕ್ಕಿಂತಲೂ ೫ ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದಾರೆ. ಹೀಗಿರುವಾಗ ಕೇಂದ್ರ ಸರ್ಕಾರ ತಾರತಮ್ಯ ತೋರಿಸುತ್ತಿದೆ ಎಂದು ಪಾದಕ್ಕೋಸ್ಕರ ಏಕೆ ಹೇಳುತ್ತೀರಿ ? ಮೂರನೆಯದಾಗಿ ಹೇಳಿದರು, ಏನೆಂದರೆ ನಮ್ಮ ಸರ್ಕಾರ ರೈತರ ಸರ್ಕಾರ, ರೈತರಿಗಾಗಿ ಬಹಳ ಮಾಡಿದ್ದೇವೆ. ಇರಿಗೇಶನ್‌ಗಾಗಿ ಹೆಚ್ಚು ಹಣ ಇಟ್ಟಿದ್ದೇವೆ ಎಂದು ಹೇಳಿ ಜಂಬಕೊಚ್ಚಿಕೊಂಡಿರಿ. ಇದರಲ್ಲಿ ನಾವು ಹಿಂದೆ ನಮ್ಮ ಸರ್ಕಾರ ಇದ್ದಾಗ ೧೯೭೮ ರಿಂದ ೧೯೮೩ ರವರೆಗೆ ೫೮೦ ಕೋಟಿ ಖರ್ಚು ಮಾಡಿ ಸುಮಾರು ೫.೬೧ ಲಕ್ಷ ಹೆಕ್ಟೇರ್ ಪೊಟೆನ್ಶಿಯಾಲಿಟಿ ಕ್ರಿಯೇಟ್ ಮಾಡಿದ್ದೆವು. ನಿಮ್ಮ ಸರ್ಕಾರ ಬಂದಮೇಲೆ ಮೇಜರ್, ಮೀಡಿಯಂ, ಮೈನರ್ ಎಲ್ಲಾ ಸೇರಿಸಿ ೧೯೮೩ ರಿಂದ ೧೯೮೮ ರವರೆಗೆ ೧೦೩೫ ಕೋಟಿ ಖರ್ಚು ಮಾಡಿ ೨.೯೮ ಲಕ್ಷ ಹೆಕ್ಟೇರ್ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಮಾಡಿದ್ದೀರಿ. ನಾವು ಐನೂರು ಕೋಟಿ ಖರ್ಚು ಮಾಡಿ ಸುಮಾರು ಹತ್ತಿರ ಹತ್ತಿರ ೧೨ ಲಕ್ಷ ಎಕರೆಯಷ್ಟು ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಮಾಡಿ ರೈತರಿಗೆ ಅನುಕೂಲತೆಯನ್ನು ಮಾಡಿಕೊಟ್ಟಿದ್ದೇವೆ, ನೀವು ಒಂದು ಸಾವಿರ ಕೋಟಿ ಖರ್ಚು ಮಾಡಿ ೨.೯೮ ಲಕ್ಷ ಹೆಕ್ಟೇರ್ ಎಂದರೆ ಆರು ಲಕ್ಷ ಎಕರೆ ಆಯಿತು. ಅಂದರೆ ನೀವು ೫೦ ಪರ್ಸೆಂಟ್‌ನಷ್ಟು ಅಚೀವ್ ಮಾಡಿದಂತೆ ಆಯಿತು. ಹೀಗಿರುವಾಗ ಹೆಚ್ಚು ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ? ಇದನ್ನು ಸ್ಪಷ್ಟಪಡಿಸಬೇಕು. ಸುಮ್ಮನೆ ಭಾಷಣ ಮಾಡಿದರೆ ಸಾಲದು. ಚೀಪ್ ಪಾಪ್ಯುಲಾರಿಟಿ ಬೇಡ. ನೀವೇನೋ ಯುವಕರು ಇದ್ದೀರಿ. ಸ್ವಲ್ಪ ತಿಳಿದುಕೊಂಡು ಹೇಳುತ್ತೀರಿ ಎನ್ನುವ ಭಾವನೆ ಇತ್ತು. ಆದರೆ ನೀವು ಸಹ ಜನರಲ್ ಸ್ಟೇಟ್‌ಮೆಂಟ್ ಮಾಡಿ ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತೆ ಮಾತನಾಡಿದರೆ ಹೇಗೆ ? ಇದರ ಬಗ್ಗೆ ಸ್ಪಷ್ಟವಾಗಿ ತಾವು ಹೇಳಬೇಕು.

ಆಮೇಲೆ ಇದೇ ಸದನದಲ್ಲಿ ನಾನು ಈಗಾಗಲೇ ಹೇಳಿದೆ. ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಅಮೆಂಟ್‌ಮೆಂಟ್ ನಾವು ತಂದದ್ದನ್ನು ವಿತ್‌ಡ್ರಾ ಮಾಡಿಸಿದಿರಿ. ಒಂದು ವರ್ಷ ಆಯಿತು ಇಲ್ಲಿಯವರೆಗೆ ನೀವು ಇದನ್ನು ತಂದಿಲ್ಲ. ಇದನ್ನು ಯಾವಾಗ ತರುತ್ತೀರಿ ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಬೋರ್ಡ್ ಆಫ್ ರಿಜೆಂಟ್ಸ್‌ನಲ್ಲಿ ಯಾವರೀತಿ ಎಕ್ಸ್‌ಪರ್ಟ್ಸ್ ಮತ್ತು ಬೇರೆಬೇರೆಯವರನ್ನು ನಾಮಿನೇಟ್ ಮಾಡುವುದಕ್ಕೆ ಪ್ರಾವಿಶನ್ ಇದೆಯೋ ಇದು ಅದರಂತೆ, ಷೆಡ್ಯೂಲ್ ಕ್ಯಾಸ್ಟ್‌ನವರನ್ನು ಕೂಡ ಮಾಡಬೇಕು. ಏಕೆಂದರೆ ಜನರಲ್ ಯೂನಿವರ್ಸಿಟಿ ಆ್ಯಕ್ಟ್‌ನಲ್ಲಿ ಈ ಪ್ರಾವಿಶನ್ ಇದೆ. ಒಂದು ವರ್ಷ ಆಯಿತು, ಇನ್ನೂ ತಾವು ತಿದ್ದುಪಡಿಯನ್ನು ತಂದಿಲ್ಲ. ಇದನ್ನು ಯಾವಾಗ ತರುತ್ತೀರಿ. ಇದಕ್ಕೆ ಏನು ತೊಂದರೆ ಇದೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಖರ್ಗೆಯವರು ನಾವು ಚೀಫ್ ಪಬ್ಲಿಸಿಟಿ ಮಾಡುತ್ತೇವೆ ಎಂದು ಹೇಳಿದರು, ಇದು ಸರಿಯಲ್ಲ. ತಾವು ಹೇಳಿದಿರಿ ಡ್ರಾಟ್ ರಿಲೀಫ್‌ಗೆ ಏನು ಹಣ ಕೊಟ್ಟಿದ್ದೇವೆ ಅದು ಪರ್ಸೆಂಟೇಜ್ ಮೇಲೆ ನೋಡಿ ಎಂದು. This amount cannot be released or percentage. It depends upon gravity of the droughts

12–00 ಮಧ್ಯಾಹ್ನ

ಇವತ್ತು ರಾಜ್ಯ ಸರ್ಕಾರ ೫ ವರ್ಷಗಳಿಂದ ಸತತವಾಗಿ ಬರಗಾಲದಲ್ಲಿದ್ದಾಗ, ಕೇಂದ್ರ ಸರ್ಕಾರ ಯಾವರೀತಿ ಸಹಾಯ ಮಾಡಿದೆ ಎಂಬುದು ಮುಖ್ಯ. ನೀವು ಆಗ ೩೦೦ ಕೋಟಿ ಕೇಳಿದ್ದಿರಿ, ೪೮ ಕೋಟಿ ಕೊಟ್ಟರು, ನಾನು ಅದನ್ನು ಒಪ್ಪುತ್ತೇನೆ. Drought may be not that severe.

SRI M. MALLIKARJUNA KHARGE.— Hou can it be discriminated when the All-India percentage is 13.5 ?

SRI R. V. DESHPANDE.—The amount cannot be allocated on the percentage basis. It depends on the severity of the drought. Ours is the only State which is facing drought continuously for the last 5 years.

(Interruption)

ಶ್ರೀ ಜಿ. ಎಸ್. ಶಿವನಂಜಪ್ಪ.—ಅವರ ಪಾರ್ಟಿಯಲ್ಲಿ ಬರಗಾಲ ಇರಬಹುದು, ಈ ರಾಜ್ಯದಲ್ಲಿ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಹೋದ ವರ್ಷ ಬರಗಾಲ ಬಂತು. ಇಡೀ ದೇಶದ ಇತಿಹಾಸದಲ್ಲಿ ಇಷ್ಟೊಂದು ಭೀಕರ ಬರಗಾಲ ಇಲ್ಲವೆಂದು ಕೇಂದ್ರ ಸರ್ಕಾರದವರು ಹೇಳಿದರು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಯು. ಪಿ.ಯಲ್ಲಿ ಬರಗಾಲ ಬಂತು, ಬಿಹಾರದಲ್ಲಿ ಬರಗಾಲ ಬಂತು, ಹಾಗೆಯೇ ನಮ್ಮ ಕರ್ನಾಟಕ ರಾಜ್ಯದಲ್ಲೂ ಬರಗಾಲ ಇತ್ತು. ಅದಕ್ಕೋಸ್ಕರ ನಾನು ಹೇಳಿದೆ, they approached the World Bank and they approached various other countries for aid when the states like U.P. Bihar etc. were facing drought. Why have they not approached when the Karnataka was facing severe drought ? ಇರಿಗೇಷನ್‌ಗೆ ನಾವು ಅಲೋಕೇಷನ್ ಇಷ್ಟು ಕೊಟ್ಟಿದ್ದೇವೆ ಎನ್ನುವುದನ್ನು ಹೇಳಿದ್ದೇವೆಯೇ ಹೊರತು, ಪೊಟೆನ್‌ಷಿಯಾಲಿಟಿ ಬಗ್ಗೆ ಹೇಳಿಲ್ಲ, ಇನ್ನು ಬೋರ್ಡ್ ಆಫ್ ರೀಜೆಂಟ್ಸ್ ಬಗ್ಗೆ ಹೇಳಿದ್ದಾರೆ, ಸ್ವಲ್ಪ ತಡವಾಗಿದೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದಷ್ಟು ಬೇಗ ಇದರ ಬಗ್ಗೆ ಒಂದು ಅಮೆಂಡ್‌ಮೆಂಡ್ ತರುತ್ತೇನೆ, ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಪ್ರತಿನಿಧಿಗೆ ಅವಕಾಶ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಪಾಯಿಂಟ್...

ಉಪಾಧ್ಯಕ್ಷರು.— ನೀವು ಈಗಾಗಲೇ ಕೇಳಿದ್ದೀರಿ, ಬೇರೆಯವರಿಗೆ ಅವಕಾಶ ಮಾಡಿ ಕೊಡಬೇಡವೇ ?

ಶ್ರೀ ಬಿ. ಲಕ್ಕಪ್ಪ.—ಆಗ್ರೋ ಇಂಡಸ್ಟ್ರೀಸ್, ಕೈಗಾರಿಕಾ ನಿಗಮಂದ ಬಗ್ಗೆ ಗವರ್ನರ್ ಅವರಿಂದ ರೆಫರ್ ಆಗಿ ಒಂದು ತನಿಖೆ ನಡೆದಿದೆ, ತನಿಖಾ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಇದು ರೆಸಲ್ಯೂಷನ್ ಆಗಿದೆ. ಇದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕಂತಾದ್ದು, ಇದಕ್ಕೆ ಕಾರಣರಾದ ಸುಮಾರು ೧೩ ಜನರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ೧೯೮೬ರಲ್ಲಿಯೇ ಸರ್ಕಾರಕ್ಕೆ ಅವರು ಕಳುಹಿಸಿದ್ದಾರೆ, ಇದುವರೆಗೆ ಅವರ ಮೇಲೆ ಈ ರಿಪೋರ್ಟ್ ಮೇಲೆ ಯಾವ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ಎನ್ನತಕ್ಕಂತಾದ್ದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಮತ್ತೆ ಎರಡು ವರ್ಷಗಳಿಂದ ಫುಡ್ ಪ್ರೊಡಕ್ಷನ್‌ನಲ್ಲಿ ಎಷ್ಟು ಫಾಲ್ ಆಗಿದೆ ಎನ್ನುವುದನ್ನೂ ಹೇಳಬೇಕು ಕಡಿಮೆ ಆಗಿರತಕ್ಕಂತಾದ್ದನ್ನು ದಯಮಾಡಿ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಆಗಿರುವುದು. ನಿಜ. ಗವರ್ನರ್ ಆದೇಶದ ಬಗ್ಗೆ ಸಂಜೀವ ಕಮೀಷನ್ ಅಪಾಯಿಂಟ್ ಆಯಿತು. ಅವರು ಕೊಟ್ಟ ಫೈಂಡಿಂಗ್ ಮೇಲೆ Retired District Judge ಅಪಾಯಿಂಟ್ ಮಾಡಿದ್ದೇವೆ, ಇವರ ಕೆಲವು ಶಿಫಾರಸ್ಸಿನ ಮೇಲೆ ಬೋರ್ಡ್ ಏನು ತೀರ್ಮಾನ ತೆಗೆದುಕೊಂಡಿದೆ. ಇದರ ಬಗ್ಗೆ ಸರ್ಕಾರವು ಸಮಾಧಾನ ಆಗಿಲ್ಲ. ಇದರ ಸಲುವಾಗಿ ಸರ್ಕಾರ ಆಗ್ರೋ ಇಂಡಸ್ಟ್ರೀಸ್‌ಗೆ ತಿಳಿಸಿದೆ, ನೀವು ಏನು ಬೋರ್ಡ್‌ನಲ್ಲಿ ಡಿಸೈಡ್ ಮಾಡಿದ್ದೀರಿ ಅದನ್ನು ಪುನಃ ನೀವು ರೀ ಕನ್‌ಸಿಡರ್ ಮಾಡಬೇಕು. ಯಾವ ಅಧಿಕಾರಿ ತಪ್ಪು ತಸ್ಥರು ಇದ್ದಾರೆ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಸರ್ಕಾರದಿಂದ ಆಗ್ರೋ ಇಂಡಸ್ಟ್ರೀಸ್‌ಗೆ ತಪ್ರ ಕಳುಹಿಸಿದ್ದೇವೆ.

ಶ್ರೀ ಬಿ. ಲಕ್ಕಪ್ಪ. - ೧೯೮೬ರಲ್ಲಿಯೇ ತಮ್ಮ ಗಮನಕ್ಕೆ ಬಂದಿದೆ. ಅವರು ರಿಪೋರ್ಟ್ ಕೊಟ್ಟಿದ್ದಾರೆ......

ಶ್ರೀ ಆರ್. ವಿ. ದೇಶಪಾಂಡೆ.—ರಿಪೋರ್ಟ್ ಬಂದರೆ ಏನು ಮಾಡುವುದಕ್ಕಾಗುತ್ತದೆ. They have taken action; we are not satisfied with it; we have written them to re-consider the decision. The target fixed and the achievement for the foodgrains for the year 1986-87 is as follows.

	TARGET	ACHIEVEMENT
	(in lakh tonnes)	
Cereals	79.39	69.33
Pulses	8.61	6.17
Sugarcane	149.00	119.17
Cotton	8.82	4.31
	(in lakh bales)	
Tobacco	0.51	0.25

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಈ ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್. ಒಳ್ಳೆಯ ಉದ್ದೇಶದಿಂದ ಪ್ರಾರಂಭವಾಗಿದೆ. ಅಲ್ಲಿ ಸಾಕಷ್ಟು ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂಬ ಬಗ್ಗೆ ತಮಗೆ ಸಾಕಷ್ಟು ಮಾಹಿತಿ ಇರಬಹುದು. ಎಲ್ಲಾ ಅಧಿಕಾರಿಗಳು ಅದೇ ಇಲಾಖೆ ಬೇಕೆಂದು ದುಂಬಾಲು ಬೀಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದು ಕಾಣುತ್ತದೆ. ಈ ದೃಷ್ಟಿಯಿಂದ ಈ ಇಲಾಖೆ ಏನು ಸೆಪರೇಟ್ ಆಗಿದೆ ಅದನ್ನು ತೆಗೆದು ಕೃಷಿ ಇಲಾಖೆಯ ಜೊತೆಗೆ ಸೇರಿಸಿದರೆ ಸರಿಯಾಗಿ ಸೂಪರ್‌ವಿಷನ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಇದರಲ್ಲಿ ದುರುಪಯೋಗ ಆಗುತ್ತಿರುವ ದೃಷ್ಟಿಯಿಂದ ಹಾಗೂ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಆಫ್ ಸರ್ಸ್ ಡೆವೆಲಪ್‌ಮೆಂಟ್ ಬೋರ್ಡ್ ಆಗುತ್ತಿರುವ ದೃಷ್ಟಿಯಿಂದ ಅಧಿಕಾರಿಗಳು ತಮ್ಮ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಅನುಕೂಲಮಾಡಿಕೊಳ್ಳುತ್ತಿರುವ ದೃಷ್ಟಿಯಿಂದ ಇವರ ಬಗ್ಗೆ ಆಲೋಚನೆ ಮಾಡಿ ಅದನ್ನು ಕೃಷಿ ಇಲಾಖೆಯ ಒಳಗೆ ಸೇರಿಸಿಕೊಳ್ಳುತ್ತೀರಾ ? ಇನ್ನು

ಡಿ.ಸಿ.ಹೆಚ್. ಹತ್ತಿಬೀಜದ ಕೊರತೆಯ ಬಗ್ಗೆ ಶಿವಮೊಗ್ಗ ಜಿಲ್ಲೆಯಲ್ಲಿ ಜನರು ಸಾಕಷ್ಟು ಆಗ್ರಹ, ಮಾಡಿದ್ದಾರೆ. ಇದರ ಬಗ್ಗೆ ಬೇರೆ ಬೇರೆ ಕಡೆಗಳಲ್ಲೂ ಸಮಸ್ಯೆ ಇರಬಹುದು. ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹತ್ತಿ ಬೆಳೆಯನ್ನು ಬೆಳೆಯುತ್ತಿರುವುದರಿಂದ ರೈತರ ಅಭಿವೃದ್ಧಿ ದೃಷ್ಟಿಯಿಂದ ಶಿವಮೊಗ್ಗ ಜಿಲ್ಲೆಗೆ ಡಿಸಿಹೆಚ್. ಹತ್ತಿಬೀಜವನ್ನು ಹೆಚ್ಚಾಗಿ ತಕ್ಷಣ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್ ವಿ. ದೇಶಪಾಂಡೆ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಹತ್ತಿಬೀಜದ ಬಗ್ಗೆ ರೈತರಿಗೆ ಎಷ್ಟು ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟೂ ಮಾಡುತ್ತೇವೆ. ಕೇವಲ ಶಿವಮೊಗ್ಗ ಜಿಲ್ಲೆ ಒಂದೇ ಕಡೆಗೆ ಅಲ್ಲ, ಧಾರವಾಡ ಹಾಗೂ ಇತರ ಯಾವುದೇ ಜಿಲ್ಲೆಯಾಗಲೀ ನಾವು ಹತ್ತಿ ಬೀಜವನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೇನೆ. ಇನ್ನು ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್ ಬಗ್ಗೆ ನೀವು ಆ ಡಿಮ್ಯಾಂಡ್ ಬಂದಾಗ ಮಾತನಾಡುವುದು ಒಳ್ಳೆಯದು. ಅದು ಬೇರೆ ಇಲಾಖೆಗೆ ಬರುತ್ತದೆ. ನನ್ನ ಇಲಾಖೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಡಿಪಾರ್ಟ್‌ಮೆಂಟ್ ಇದೆ. ಅಧಿಕಾರಿಗಳು ಅಲ್ಲಿಗೆ ಹೋಗುವುದಕ್ಕೆ ಸಾಕಷ್ಟು ರಷ್ ಇದೆ. ನನ್ನ ಕಡೆಗೆ ಮನವಿ ಬರಲಿ, ಪಿಟಿಷನ್ ಬರಲಿ, ಎಲ್ಲಾ ಅಧಿಕಾರಿಗಳು ಸಾಯಿಲ್ ಕನ್‌ಸರ್ವೇಷನ್‌ಗೆ ಹಾಕಿಕೊಡ ಬೇಕೆಂದು ಕೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಹೇಳಬೇಕೆಂದಿದ್ದುದು ಸಾಯಿಲ್ ಕನ್‌ಸರ್ವೇಷನ್ ಬಗ್ಗೆಯೇ, ಆದರೆ ಮಿಸ್ಟೇಕ್ ಆಗಿ ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್ ಎಂದು ಹೇಳಿಬಿಟ್ಟೆ.

ಶ್ರೀ ಆರ್.ವಿ. ದೇಶಪಾಂಡೆ.—ಇದರ ಬಗ್ಗೆ ಸ್ಟಡಿ ಮಾಡಿರುತ್ತೇನೆ, ರಿಪೋರ್ಟ್ ತೆಗೆದುಕೊಂಡಿ ರುತ್ತೇನೆ, ಅಭ್ಯಾಸ ಮಾಡಿರುತ್ತೇನೆ. ಇದಕ್ಕೆ ಫೈನಾನ್‌ಷಿಯಲ್ ಇಂಪ್ಲಿಕೇಷನ್ ಬರುತ್ತದೆ. ಈ ಫೈನಾನ್‌ಷಿಯಲ್ ಇಂಪ್ಲಿಕೇಷನ್‌ಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಪ್ಪಿಕೊಂಡರೆ, ಈ ಸಾಯಿಲ್ ಕನ್‌ಸರ್ವೇಷನ್ ಡಿಪಾರ್ಟ್‌ಮೆಂಟನ್ನು ಅಬಾಲಿಷ್ ಮಾಡಿ, ನನ್ನ ಇಲಾಖೆಗೆ ಅಂದರೆ ಕೃಷಿ ಇಲಾಖೆಗೇ ಸೇರಿಸಿ, ಪ್ರತಿಯೊಂದು ತಾಲ್ಲೂಕಿನ ಎಲ್ಲಾ ಅಧಿಕಾರಿಗಳಿಗೆ ಆ ಕೆಲಸ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯರು).—ಅಧ್ಯಕ್ಷರೇ, ಬರಗಾಲದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಮಾತನಾಡಿದರು. ಬರಗಾಲ ಬಂದಾಗ, ನಾನು ಅವರನ್ನು ಕೇಳಿದ್ದೆ, ಅವರಿಗೆ ಕಾಗದ ಬರೆದಿದ್ದೆ. ನನ್ನ ಕಾಗದಕ್ಕೆಲ್ಲಾ ಅವರು ಜವಾಬು ಕೊಟ್ಟರು, ಆದಷ್ಟೂ ಕೆಲಸ ಮಾಡಿದರು, ಇದಕ್ಕಾಗಿ ನಾನು ಅವರನ್ನು ಅಪ್ರಿಷಿಯೇಟ್ ಮಾಡುತ್ತೇನೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಇನ್ನು ಒಂದೆರಡು ವಿಚಾರ ಏನೆಂದರೆ, ನಾನು ಬರಗಾಲದಲ್ಲಿ ಒಂದು ವಿಚಾರದ ಬಗ್ಗೆ ಇವರಿಗೆ ಪತ್ರ ಬರೆದೆ. ನಾನು ಶಿವಮೊಗ್ಗ ಜಿಲ್ಲೆಯ ಕಡೆ ಟೂರ್ ಮಾಡಿದೆ. ಅಲ್ಲಿ ಸೆಮಿಡ್ರೈಲ್ಯಾಂಡ್ ಏನಿದೆ ಅಲ್ಲಿ ಮಳೆಗಾಲದಲ್ಲಿ ಭತ್ತ ಬೆಳೆಯುತ್ತಾರೆ. ಅದಕ್ಕೆ ಅವರು ನೀರು ಹಾಯಿಸುವ ಪದ್ಧತಿ ಇಲ್ಲ, ಮಳೆಯ ನೀರಿನ ಆಶ್ರಯದಲ್ಲೇ ಭತ್ತ ಬೆಳೆಯುತ್ತಾರೆ. ನಾನು ಆ ಕಡೆ ಪ್ರವಾಸ ಮಾಡಿದಾಗ ಈ ರೀತಿ ಬೆಳೆದ ಭತ್ತ ಅಷ್ಟಿಷ್ಟು ಇತ್ತು, ಒಣಗಿ ಹೋಗುತ್ತಾ ಬರುತ್ತಿತ್ತು. ಅಲ್ಲಿಂದ ಒಂದು ನಾನು ಯೂನಿವರ್ಸಿಟಿಯ ಪ್ರೊಫೆಸರ್ ಒಬ್ಬರನ್ನು ಕರೆಯಿಸಿ ಹೀಗೆ ಆಗಿದೆಯಲ್ಲಾ ಇದಕ್ಕೆ ಏನು ಮಾಡಬೇಕು, ಏನು ಮಾಡಿದರೆ ಬೆಳೆಯನ್ನು ರಕ್ಷಿಸಬಹುದು ಎಂದು ಕೇಳಿದಾಗ ಅವರು ಪರಿಹಾರ ಸೂಚಿಸಿದರು. ನಾನು ಅವರನ್ನು ಕರೆಯಿಸಿ ಕೇಳಿದ ಉದ್ದೇಶ ಏನಿತ್ತು ಎಂದರೆ, ಅವರು ಇಲ್ಲಿ ಭತ್ತವನ್ನು ರಟೂನ್ ಕ್ರಾಪ್ (ಕೂಳೆಬೆಳೆ) ಆಗಿ ಬೆಳೆದು ಅದರಲ್ಲಿ ಫಸಲು ತೆಗೆದುಕೊಂಡಿರುತ್ತಾರೆ. ಅದನ್ನು ನಾನು ನೋಡಿದ್ದೆ. ಅದಕ್ಕೆ ಅವರನ್ನು ಕರೆಯಿಸಿದೆ ಹೀಗೆ ಆಗಿದೆ, ರಟೂನ್ ಕ್ರಾಪ್ ಏನಾದರೂ ಆಗುತ್ತದೆಯೇ ಎಂದು ಕೇಳಿದೆ. ಅದಕ್ಕೆ ಅವರು ನಾನು ಹೋಗಿ ನೋಡಿಕೊಂಡು ಬಂದೆ ಇದು ಸಾಧ್ಯ, ಅದನ್ನು ಸ್ವಲ್ಪ ಕಟ್ ಮಾಡಿದರೆ ರಟೂನ್ ಕ್ರಾಪ್‌ನಲ್ಲಿ ೬೦ ಪರ್ಸೆಂಟ್ ಕ್ರಾಪ್ ಬರುತ್ತದೆ ಎಂದರು. ಅದನ್ನು ತಿಳಿಸಿ ನಾನು ತಮಗೆ ಪತ್ರ ಬರೆದೆ. ತಮ್ಮ ಇಲಾಖೆಗೆ ಬರೆದೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದೆ, ಸೆಕ್ರೆಟರಿಯವರಿಗೆ ಬರೆದೆ. ಆದರೆ ಅದಕ್ಕೆ ಒಂದು ಜವಾಬು ಸಹಿತ ಬರಲಿಲ್ಲ. ಬರಗಾಲದಲ್ಲಿ ಇದರಿಂದ ೬೦ ಪರ್ಸೆಂಟ್ ಕ್ರಾಪ್ ಬಂದಿದ್ದರೆ ಅದೇನೂ ಸಾಧಾರಣವಾದ ವಿಚಾರ ಅಲ್ಲ. ಈ ವಿಚಾರದಲ್ಲಿ ಯಾರೂ ಗಮನ ಕೊಡದಿರುವುದರಿಂದ ನಾನು ಬಹಳ ಸೀರಿಯಸ್

ಆಗಿ ಅಬ್ಜೆಕ್ಟ್ ಮಾಡುತ್ತೇನೆ, ಇಷ್ಟೊಂದು ಜನಗಳು ಇದ್ದುಕೊಂಡೂ ಕೂಡಾ ಒಂದು ಕಾಗದ ಬರೆದರೆ ಅದರ ವಿಚಾರ ಏನು ಎಂದು ನೋಡಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಭತ್ತದ ಕೂಳೆಬೆಳೆ ಬಗ್ಗೆ ಹೇಳುತ್ತಿದ್ದೀರಾ ? ಎಲ್ಲಿ ಬೆಳೆದಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೆಬ್ಬಾಳ್‌ನಲ್ಲಿ ಅವರು ಬೆಳೆದು ಫಸಲು ತೆಗೆದು ಕೊಂಡಿದ್ದಾರೆ, ತಾವು ಯಾರಾದರೂ ಹೋಗಿ ನೋಡಬಹುದು. ಇನ್ನು ಅಗ್ರಿಕಲ್ಚರ್ ಯೂನಿವರ್ಸಿಟಿ ಯಲ್ಲಿರುವ ಸೈಂಟಿಸ್ಟ್ ವಿಚಾರದಲ್ಲಿ ಹೇಳಬೇಕಾದರೆ ಅವರು ಒಬ್ಬರಿಗೊಬ್ಬರು ಕೋಳಿ ಜಗಳ ಆಡುತ್ತಿ ದ್ದಾರೆ. ಕಾಗೆ ಜಗಳ ಆಡುತ್ತಿದ್ದಾರೆ, ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಒಬ್ಬರಾದರೂ ಅವರಿಗೆ ಸರಿಯಾದ ಎನ್‌ಕರೇಜ್‌ಮೆಂಟ್ ಕೊಡುವುದಿಲ್ಲ. ಆದುದರಿಂದಲೇ ನಾನು ಹೇಳಿದ್ದುದು, ಬೋರ್ಡ್ ಆಫ್ ರೀಜೆಂಟ್ಸ್‌ನಲ್ಲಿ ನಮ್ಮ ಬಸವನಗೌಡರು ನಾವು ಎಲ್ಲಾ ಇದ್ದೆವು. ನಾವು ಅಲ್ಲಿ ಹೋಗಿ ಎಷ್ಟು ಸರಿ ಮಾಡಿದ್ದೇವೆ ಎಂಬುದು ನಮಗೆ ಗೊತ್ತು, ಆ ದೇವರಿಗೆ ಗೊತ್ತು. ಈಗ ಅಲ್ಲಿದ್ದ ಬೋರ್ಡ್ ಅಫ್ ರೀಜೆಂಟ್ಸ್ ಕಿತ್ತುಹಾಕಿದ್ದಾರೆ. ಒಬ್ಬ ಸೆಕ್ರೆಟರಿಯೂ ಅಲ್ಲಿನ ಸೆಷನ್ಸ್ ಅಟೆಂಡ್ ಮಾಡುವುದಿಲ್ಲ. ಇದರ ಬಗ್ಗೆ ಕೇಳಿದಾಗ ಹೋದಸಲ ನೀವು ನಮಗೆ ಅಲ್ಲಿಂದ ದುಡ್ಡು ಬರಬೇಕು ಇಲ್ಲಿಂದ ದುಡ್ಡು ಬರಬೇಕು ಎಂದು ಹೇಳಿದಿರಿ. ದೇಶದಲ್ಲಿ ಏನೇ ಅನಾಹುತವಾದರೂ ನಿಮಗೆ ದುಡ್ಡು ಬರುವುದು ಮುಖ್ಯ.

ಹೋದ ಸಲ ನಾನು ಕೇಳಿದಾಗ ದುಡ್ಡು ಬರಬೇಕಾಗಿದೆ ಎಂದು ಹೇಳಿದಿರಿ, ದುಡ್ಡು ಬರುವುದನ್ನು ಮಾತ್ರ ನೋಡುತ್ತಿದ್ದೀರಿ. ದೇಶದಲ್ಲಿ ಏನೇ ಅನಾಹುತವಾದರೂ ನೀವು ನೋಡುವುದಿಲ್ಲ. ನಿಮ್ಮಲ್ಲಿ ಅಧಿಕಾರಿಗಳ ದೊಡ್ಡ ಗುಂಪು ಇಟ್ಟುಕೊಂಡು ಒಂದು ಪತ್ರಕ್ಕೆ ಉತ್ತರ ಬರೆಯಲಿಲ್ಲವೆಂದರೆ ಹೇಗೆ? ನಾವು ಕೆಲಸ ಮಾಡುತ್ತೇವೆಂದು ದೊಡ್ಡ ದೊಡ್ಡ ಭಾಷಣ ಮಾಡುತ್ತೀರಿ ಅಷ್ಟೆ. ನೀವು ಮಾಡುವ ಕೆಲಸ ಯಾರಿಗೂ ಗೊತ್ತಾಗುವುದಿಲ್ಲವೇ? ಭತ್ತದ ಕೂಳೆ ಬೆಳೆಯ ಬಗ್ಗೆ ನಾನು ಕಾಗದ ಬರೆದಿದ್ದೆ. ಅದನ್ನು ಯಾರೂ ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಈ ಭತ್ತದ ಕೂಳೆ ಬೆಳೆಯಲ್ಲಿ ಶೇಕಡ ೫೦ ರಿಂದ ೬೦ ಪರ್ಸೆಂಟ್ ಕ್ರಾಪ್ ಬರುತ್ತದೆಂದು ನನಗೆ ಸೈಂಟಿಸ್ಟ್ ಬರೆದ ಕಾಗದವೂ ಸಹ ಇದೆ. ಯಾರೂ ಈ ಕಡೆ ಗಮನವನ್ನೇ ಹರಿಸಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಗದ ಬರೆದರೆ ಅವರು ಉತ್ತರ ಬರೆಯುತ್ತಾರೆ. ಬಾಕಿಯವರು ಉತ್ತರ ಕೊಡುವ ಪದ್ಧತಿಯನ್ನೇ ಇಟ್ಟುಕೊಂಡಿಲ್ಲವೆಂದು ಕಾಣುತ್ತದೆ. ಇನ್ನು ಅಗ್ರಿಕಲ್ಚರ್ ಸೀಡ್ಸ್ ನಮ್ಮ ಏರಿಯಾದಲ್ಲಿ ಬೆಳೆದುಕೊಳ್ಳುತ್ತೇವೆ, ಅದಕ್ಕೆ ಬೇಕಾದ ಲ್ಯಾಂಡ್ ಸಹ ಕೊಡುತ್ತೇವೆ. ನಮ್ಮ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಒಂದು ಸೀಡ್ಸ್ ಫಾರಮ್ ಮಾಡಿ ಎಂದು ಹೇಳಿದೆ ಅದು ಆಗಲಿಲ್ಲ. ನಮ್ಮಲ್ಲಿ ಯುಗಾದಿ ಕಳೆದ ತಕ್ಷಣ ಜೋಳದ ಬೆಳೆಯನ್ನು ಬಿತ್ತನೆ ಮಾಡು ತ್ತೇವೆ. ಆದ್ದರಿಂದ ನಮಗೆ ಬೇರೆ ಸೀಡ್ಸ್ ಬೇಕಾಗುತ್ತದೆ. ಗುಲ್ಬರ್ಗದಲ್ಲಿ ಬಿತ್ತುವ ಸೀಡ್ಸನ್ನು ನಮಗೆ ಕೊಟ್ಟರೆ ಅವು ನಮಗೆ ಆಗುವುದಿಲ್ಲ. ನಾನು ಹೇಳಿದೆ ನಾವೇ ಲ್ಯಾಂಡ್ ಕೊಡುತ್ತೇವೆ, ಬೀಜ ವನ್ನು ತಯಾರಿಸಿಕೊಡಿ ಎಂದು ಇದಕ್ಕೆ ಕೃಷಿ ಇಲಾಖೆಯವರು ಮತ್ತು ಯೂನಿವರ್ಸಿಟಿಯವರು ಎಲ್ಲರೂ ಒಪ್ಪಿಕೊಂಡರು ಆದರೆ ಆಷ್ಟರಲ್ಲಿ ಅಲ್ಲಿ ರಾಜಕೀಯ ಶುರು ಮಾಡಿದರು. ಯೂನಿವರ್ಸಿಟಿ ಯವರು ನಮ್ಮ ಭಾಗಕ್ಕೆ ಬೇಕಾದ ಬೀಜಗಳನ್ನು ಕೊಡುವುದಿಲ್ಲ. ಅವರು ಬೇರೆ ಬೀಜಗಳನ್ನು ಕೊಡು ತ್ತಾರೆ ಅವು ಆಗುವುದಿಲ್ಲ ಅದಕ್ಕೆ ನಮ್ಮ ಏರಿಯಾದಲ್ಲಿ ಒಂದು ಫಾರಮ್ ಮಾಡಿಕೊಡಿ ನಮಗೆ ಬೇಕಾದ ಬೀಜವನ್ನು ನಾವೇ ಬೆಳೆದುಕೊಳ್ಳುತ್ತೇವೆ. ಇನ್ನು ಬೋರ್ಡ್ ಆಫ್ ರೀಜೆಂಟ್ಸ್ ವಿಚಾರದಲ್ಲಿ ಉತ್ತರ ಹೇಳಿದ್ದಾರೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಅಲ್ಲಿ ಏನೇನೂ ಇಲ್ಲ, ಏನೂ ಮಾಡುವುದಕ್ಕೆ ಆಗುತ್ತಿಲ್ಲ. ರೂಲ್ಸನ್ನು ಅಮೆಂಡ್ ಮಾಡಿ ನೀವು ಯಾರನ್ನು ಬೇಕಾದರೂ ಹಾಕಿ ಒಳ್ಳೆಯ ಕೆಲಸ ಮಾಡುವಂತಾಗಬೇಕು. ನಮ್ಮ ಮಾನ್ಯ ಬಸವನಗೌಡರೂ ಸಹ ಇದ್ದರು ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಈಗ ಇಂತಹ ಬೋರ್ಡ್ ಆಫ್ ರಿಜೆಂಟ್ಸ್‌ನಲ್ಲಿ ಜವಾಬ್ದಾರಿ ಯನ್ನು ಯಾರೂ ತೆಗೆದುಕೊಳ್ಳುತ್ತಿಲ್ಲ. ಕಾಲೇಜು ವಿದ್ಯಾರ್ಥಿಗಳು ಓದಿಕೊಂಡು ಹೋಗಿ ಮಾತ ನಾಡುತ್ತಾರಲ್ಲ ಹಾಗೆ ಒಂದು ದಿವಸ ಮಾತನಾಡಿ ಬಂದುಬಿಡುತ್ತಿದ್ದಾರೆ. ಸೆಕ್ರೆಟರಿಯವರನ್ನು ತಾವು ಬೋರ್ಡ್ ಆಫ್ ರೀಜೆಂಟ್ ಮಾಡಿದ್ದೀರಿ, ಅವರಿಗೆ ನೂರೆಂಟು ಕೆಲಸಗಳು ಇರುತ್ತವೆ. ಅವರು ಅಲ್ಲಿ ಮಾಡುತ್ತಾರೆ? ಈ ಎರಡು ಹೋಗಿ ಏನು ಕೆಲಸ ಮಾಡಿರುವ ಪ್ರಶ್ನೆಗಳಿಗೆ ತಾವು ಉತ್ತರ ಕೊಡಿ,

ಶ್ರೀ ಆರ್.ವಿ. ದೇಶಪಾಂಡೆ.—ಈಗ ಮಾನ್ಯ ವಿರೋಧಪಕ್ಷದ ನಾಯಕರು ಏನು ಒಂದು ಸೂಚನೆ ಕೊಟ್ಟಿದ್ದಾರೆ ಅದು ಒಳ್ಳೆಯದು. ಆಯಾಯ ಜಿಲ್ಲೆಯಲ್ಲಿಯೇ ಅವರಿಗೆ ಬೇಕಾದ ಬೀಜ ಉತ್ಪಾದನೆ

ಮಾಡಿಕೊಳ್ಳುವಂತಿರಬೇಕು. ಈಗ ನಾವು ಬಳ್ಳಾರಿ ಜಿಲ್ಲೆಯಲ್ಲಿ ಮಾಡಿದ್ದೇವೆ. ಆದರೆ ಆ ರೀತಿ ಮಾಡಬೇಕಾದರೆ ಅವರು ಸೀಡ್ಸ್ ಕಾರ್ಪೊರೇಷನ್‌ನಲ್ಲಿ ಸದಸ್ಯರಾಗಿರಬೇಕು. ಆದ್ದರಿಂದ ತಾವು ಸೀಡ್ಸ್ ಕಾರ್ಪೊರೇಷನ್‌ನಲ್ಲಿ ಸದಸ್ಯರನ್ನಾಗಿ ಮಾಡಿಸಿದರೆ ಆಗ ಮಾಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹೇಳಿದ್ದುದು ಆ ವಿಚಾರವಲ್ಲ. ನಮ್ಮ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಜೋಳ ಬಿತ್ತನೆ ಮಾಡುತ್ತೇವೆ, ನಮಗೆ ಬೇಕಾದ ಸೀಡ್ಸ್ ಆಗ ದೊರೆಯುವುದಿಲ್ಲ. ಬೇರೆ ಸೀಡ್ಸ್ ಕೊಟ್ಟರೆ ಬೆಳೆ ನಾಶವಾಗುತ್ತದೆ. ಆದ್ದರಿಂದ ನಮಗೆ ಬೇಕಾದ ಸೀಡ್ಸನ್ನೇ ತಾವು ತಯಾರು ಮಾಡಿ ಕೊಡಬೇಕು. ಅದು ಬಿಟ್ಟು ಬೇರೆ ಸೀಡ್ಸ್ ಕೊಟ್ಟರೆ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ.—ತಾವು ಹೇಳಿದ್ದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಸೀಡ್ಸನ್ನು ತೆಗೆದುಕೊಳ್ಳುತ್ತಾರೆ. ಆದರೂ ಸಹ ತಾವು ಹೇಳಿದ ವಿಷಯವನ್ನು ಪರಿಶೀಲನೆ ಮಾಡುತ್ತೇನೆ, ಇನ್ನು ಎರಡನೆಯದಾಗಿ ತಾವು ಹೇಳಿದಿರಿ ಪ್ಯಾಡಿ ಬಗ್ಗೆ ಇವತ್ತಿನವರೆಗೂ ಅದು ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಬಂದಿದ್ದರೆ ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತಿದ್ದೆ. ಮತ್ತೆ ರೀಸರ್ಚ್ ಬಗ್ಗೆಯೂ ಹೇಳಿದ್ದೇನೆ.

ಶಿವಮೊಗ್ಗ ಮತ್ತು ಕೋಸ್ಟಲ್ ಏರಿಯಾಗಳಲ್ಲಿ ಚೆನ್ನಾಗಿ ಬೆಳೆಯುವಂಥ ಬತ್ತದ ಬೀಜವನ್ನು ಕಂಡು ಹಿಡಿಯಲಾಗಿದೆ. ಆಮೇಲೆ ಬೋರ್ಡ್ ಆಫ್ ರೀಜೆಂಟ್ಸ್ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಇದು ಯೂನಿವರ್ಸಿಟಿಯಲ್ಲಿರುವ ಸಮಸ್ಯೆಯಾಗಿದೆ. ನಾನು ಕೃಷಿ ಮಂತ್ರಿಯಾಗಿ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ಇದರಲ್ಲಿ ನಿಮ್ಮ ಸಹಕಾರವೂ ಇರಲಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮ್ಮ ಸಹಕಾರ ಯಾವತ್ತೂ ಇದೆ.

ಅಧ್ಯಕ್ಷರು.—ಮಾನ್ಯ ವೇದಾಂತ ಹೆಮ್ಮಿಗೆಯವರು ಕೇಳಿ,

ಶ್ರೀ ವೇದಾಂತ ಹೆಮ್ಮಿಗೆ.-ಕೃಷಿ ಸಹಾಯಕರ ಹುದ್ದೆಗಳು ಸುಮಾರು ೨೫೦೦ ಖಾಲಿ ಇದ್ದು ಅದರ ಜಾಗದಲ್ಲಿ ೧,೫೦೦ ಜನರನ್ನು ಟ್ರೈನಿಂಗ್ ಕೊಡುವುದಕ್ಕೋಸ್ಕರ ಸೆಲೆಕ್ಟ್ ಮಾಡಿದ್ದಾರೆ. ಈ ೧೫೦೦ ಟ್ರೈನಿಂಗ್ ಪೀರಿಯಡ್‌ನಲ್ಲಿ ಮೊದಲನೆಯ ವರ್ಷ ೨೦೦ ರೂಪಾಯಿಗಳನ್ನೂ ಎರಡನೇ ವರ್ಷ ೫೪೦ ಜನಕ್ಕೆ ರೂಪಾಯಿಗಳನ್ನೂ ಗೌರವ ಧನವಾಗಿ ಗೊತ್ತು ಮಾಡಿದ್ದಾರೆ. ಈ ೧೫೦೦ ಜನರು ಸುಮಾರು ೧೦ ಅಥವಾ ೧೨ ವರ್ಷಗಳಿಂದ ಇದೇ ಇಲಾಖೆಯಲ್ಲಿ ಹಂಗಾಮಿಯಾಗಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ಇವರುಗಳೆಲ್ಲಾ ಸ್ಟೈಪೆಂಡರಿ ಪದವೀಧರರು ಇವರುಗಳನ್ನು ತರಬೇತಿಗೆಂದು ತೆಗೆದುಕೊಂಡು ತಿಂಗಳಿಗೆ ೨೦೦ ರೂಪಾಯಿಗಳನ್ನು ಮಾತ್ರ ವೇತನವಾಗಿ ಕೊಡುವುದಾದರೆ ಅವರು ಮತ್ತು ಅವರ ಮನೆ ಮಕ್ಕಳು ಉಪವಾಸ ಇರಬೇಕೆ? ಅಥವಾ ಅವರ ಮನೆಯಲ್ಲಿರುವ ಸಾಮಾನು ಸರಂಜಾಮುಗಳನ್ನು ಮಾರಬೇಕೇ? ಆಮೇಲೆ, ಎರಡನೆಯದಾಗಿ ಶಿಕ್ಷಣ ತರಬೇತಿ ಅವಧಿಯು ಕೇವಲ ಒಂದು ವರ್ಷ ಮಾತ್ರ ಎಂದು ದಿನಾಂಕ ೫-೧೧-೮೭ರಂದು ಸರ್ಕಾರ ಆದೇಶ ಹೊರಡಿಸಿದ್ದರೂ ಇದುವರೆಗೆ ಏಕೆ ಅದನ್ನು ಜಾರಿ ಮಾಡಿಲ್ಲ, ಕೊನೆಯದಾಗಿ When once these people are selected for training. from that day onwards. automatically they will become servants of the Govt. and not after two years Here, they are selected and sent for training. From that onwards, automatically, they will be absorbed by the Govt. ಈ ಎರಡು ವರ್ಷದ ಟ್ರೈನಿಂಗ್ ಪೀರಿಯಡ್ ಏನು ಇದೆಯೋ ಅದನ್ನು ಸರ್ವೀಸಸ್‌ಗೆ ಕೌಂಟ್ ಮಾಡಿಕೊಳ್ಳುವ ಹಾಗೆ ಮಾಡಬೇಕು. ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಮಾನ್ಯ ಸದಸ್ಯರಾದ ಭೂಪತಿಯವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು ಅದಕ್ಕೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಸ್ಟೈಪೆಂಡರಿ ಪದವೀಧರರಿಗೆ ೫೦ ಪರ್ಸೆಂಟ್‌ನಷ್ಟು ರಿಸರ್ವೇಷನ್ ಇಟ್ಟಿದ್ದೇವೆ. ನಾವು ಟ್ರೈನಿಂಗ್‌ಗೆ ಸೆಲೆಕ್ಟ್ ಮಾಡಿರುವುದರಿಂದ ಆ ಅಭ್ಯರ್ಥಿಗಳು ಸಂತೋಷಪಡಬೇಕು. ಟ್ರೈನಿಂಗ್ ಮುಗಿದ ಮೇಲೆ ಅವರುಗಳನ್ನು ಅಬ್‌ಸಾರ್ಬ್ ಮಾಡಿಕೊಳ್ಳಲಾಗುತ್ತದೆ. ಈಗಲೇ ಅವರುಗಳಿಗೆ ಪೂರ್ತಿ ಸಂಬಳ ಕೊಡುವುದಕ್ಕಾಗುವುದಿಲ್ಲ.

This is the first time that they have recruited and sent to training. Second year, we will send them to fields for field training. Afterwards, they will be absorbed regularly. This is preservice appointment.

ಅಧ್ಯಕ್ಷರು.—ಮಾನ್ಯ ಗೋಪಾಲ ಮುಕುಂದ ಕಾನಡೆಯವರೇ, ನೀವು ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ಕೃಷಿ ಇಲಾಖೆಯಲ್ಲಿ ಭ್ರಷ್ಟಾಚಾರ ಅಧಿಕಾರಿಗಳ ಇವರು ಮೇಲೆ ಭ್ರಷ್ಟಾಚಾರಿಗಳು ಎಂದು ತಿಳಿದರೂ ಅವರುಗಳಿಗೆ ನಿಮ್ಮ ಸರ್ಕಾರ ಎಷ್ಟು ಪ್ರಮೋಷನ್ ಕೊಟ್ಟಿದೆ? ಏರಪನೆಯದು ಭ್ರಷ್ಟಾಚಾರದ ಅಧಿಕಾರಿಗಳು ಎಂದರೆ ಅವರುಗಳ ಬಗ್ಗೆ ನೀವು ಲೋಕಾಯುಕ್ತಕ್ಕೆ ಏಕೆ ಹಾಕುವುದಿಲ್ಲ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಕಾನಡೆಯವರು ಯಾವಾಗಲೂ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿರುತ್ತಾರೆ ಯಾರ ಮೇಲೆ ಭ್ರಷ್ಟಾಚಾರದ ಆಪಾದನೆ ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ಅವರು ನೇರವಾಗಿ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ನೇರವಾಗಿ ಯಾವ ಇಲಾಖೆಯಲ್ಲಿ ಯಾವ ಅಧಿಕಾರಿ ಹಣ ತೆಗೆದುಕೊಂಡಿದ್ದಾನೆ ಎಂದು ಹೇಳಿದರೆ. We will take immediate action. ನಾನು ಕೃಷಿ ಇಲಾಖೆಯ ಮಂತ್ರಿ ಆದಮೇಲೆ ೩೦-೩೫ ಜನ ತಪ್ಪಿತಸ್ಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಆದುದರಿಂದ ದಯವಿಟ್ಟು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ವೇಗ್ ಆಗಿ ಆಪಾದನೆ ಮಾಡಿದರೆ ಅದಕ್ಕೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಭ್ರಷ್ಟಾಚಾರದ ಬಗ್ಗೆ ಮೂರು ಜನ ಅಧಿಕಾರಿಗಳನ್ನು ವಜಾ ಮಾಡಬೇಕೆಂದು ರಾಜ್ಯಪಾಲರು ಒಂದು ಆಜ್ಞೆಯನ್ನು ಮಾಡಿದ್ದಾರೆ. ೧೯೮೭ರಲ್ಲಿ ಅದು ಹೊರಬಿದ್ದಿದೆ. ಆದರೆ ಇದುವರೆವಿಗೂ ಅವರ ಮೇಲೆ ಏನೂ ಕ್ರಮವನ್ನು ತಾವು ತೆಗೆದುಕೊಂಡಿಲ್ಲ. ಆ ಅಧಿಕಾರಿಗಳು ಹಾಗೆಯೇ ಮುಂದುವರಿದಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳಿರುವ ವಿಚಾರವು ಮಾನ್ಯ ಸದಸ್ಯರಾದ ಲಕ್ಕಪ್ಪನವರು ಹಿಂದೆ ಪ್ರಸ್ತಾಪ ಮಾಡಿದ ವಿಚಾರವಾಗಿದೆ. ಅದು ಆಗ್ರೋ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ವಿಚಾರವಾಗಿದೆ. ಅದನ್ನು ಈಗ ಇವರು ಹೇಳುತ್ತಾ ಇದ್ದಾರೆ. ಸದಸ್ಯರು ಆ ವಿಚಾರವನ್ನು ಓದಿ ತಿಳಿದುಕೊಳ್ಳಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ತಾವುಗಳು ಸರಿಯಾದ ಪ್ರೂಫ್ ಇಲ್ಲ ಎಂದು ಹೇಳಿದ್ದೀರಿ. ನಾನು ಈಗ ಪ್ರೂಫ್‌ನ್ನು ಕೊಡುತ್ತಾ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಕೃಷಿ ಇಲಾಖಾ ಮಂತ್ರಿಗಳಿಗೆ ಈ ಆಗ್ರೋ ಇಂಡಸ್ಟ್ರೀಸ್ ಸೇರುತ್ತದೆ. ಆದಕ್ಕಾಗಿ ಮಾನ್ಯ ಸದಸ್ಯರು ಸಹಜವಾಗಿಯೇ ಪ್ರಶ್ನೆಯನ್ನು ಹಾಕಿದ್ದಾರೆ. ಡಿಮ್ಯಾಂಡ್ ಮೇಲೆ ಮಾತನಾಡುವಾಗ ಕೇಳಿಯೇ ಕೇಳುತ್ತಾರೆ. ಅಂತಹ ಸಂದರ್ಭದಲ್ಲಿ ಅದು ನನಗೆ ಸಂಬಂಧಪಟ್ಟದ್ದುದು ಅಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಲಕ್ಕಪ್ಪನವರು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಾನು ಅವರಿಗೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಆ ಬಗ್ಗೆ ಪ್ರೂಫ್ ಕೇಳಿದ್ದೀರಿ. ಈಗ ಅದನ್ನು ಕೊಡುತ್ತೇನೆ. ಇಲ್ಲದಿದ್ದರೆ ನನ್ನ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ಈಗ ಮಾನ್ಯ ಮಲ್ಲಪ್ಪನವರು ಮಾತನಾಡಬಹುದು.

ಶ್ರೀ ಕೆ. ಮಲ್ಲಪ್ಪ.—ನಮ್ಮ ರಾಜ್ಯದಲ್ಲಿ ಹತ್ತಿ ಬೀಜ ಮತ್ತು ಎಣ್ಣೆಕಾಳು ಬೀಜಗಳು ಇಲ್ಲದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದುದರಿಂದ ಖಾಸಗಿಯವರು ಬೀಜವನ್ನು ಪೇಟೆಯಲ್ಲಿ ಮಾರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಲು ಅವಕಾಶ ಮಾಡಿಕೊಡುತ್ತೀರಾ? ಆ ಮೂಲಕ ಬೀಜವನ್ನು ಬೆಳೆಸುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಾರೆಯೇ ಎನ್ನುವುದು ಮತ್ತೊಂದು ಪ್ರಶ್ನೆ. ದಾವಣಗೆರೆಯಲ್ಲಿ ಬೀಜ ನಿಗಮದವರ ವತಿಯಿಂದ ೨೦-೩೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ

ಕಟ್ಟಡವನ್ನು ಕಟ್ಟಿ ಬೀಜವನ್ನು ಬಿಡಿಸತಕ್ಕಂಥ ಮತ್ತು ರಾಟೆಗಳನ್ನು ಹಾಕತಕ್ಕಂಥ ವ್ಯವಸ್ಥೆಯು ಇದ್ದರೂ ಸಹ ಇದುವರೆಗೆ ಹತ್ತಿ ಬೀಜ ಬಿಡಿಸತಕ್ಕಂಥ ವ್ಯವಸ್ಥೆ ಇಲ್ಲವಾಗಿದೆ. ಆದರೆ ಖಾಸಗಿ ಜಿನ್‌ಗಳಲ್ಲಿ ಆ ಒಂದು ವ್ಯವಸ್ಥೆಯು ಇದೆ. ಹಾಗೆಯೇ ಶೇಂಗಾ ಬೀಜ ಬಿಡಿಸತಕ್ಕಂಥ ವ್ಯವಸ್ಥೆಯೂ ಇಲ್ಲ. ಆದರೆ ಅದೇ ವ್ಯವಸ್ಥೆಯನ್ನು ಖಾಸಗಿಯವರು ಮಾಡುತ್ತಿದ್ದಾರೆ. ಹೀಗೆ ಶೇಂಗಾ ಬೀಜ ಬಿಡಿಸುವಾಗ ಖಾಸಗೀ ರಾಟೆಯಲ್ಲಿ ಹೊಡೆತಕ್ಕೆ ಸಿಕ್ಕು ಅದರಿಂದ ನಷ್ಟವನ್ನು ರೈತರು ಅನುಭವಿಸುತ್ತಾ ಇದ್ದಾರೆ. ಆದುದರಿಂದ ಬೀಜ ನಿಗಮದವರು ಕಟ್ಟಿರತಕ್ಕಂಥ ಕಟ್ಟಡದಲ್ಲಿ ಹತ್ತಿ ಬೀಜವನ್ನು ಬಿಡಿಸತಕ್ಕಂಥ ಮತ್ತು ಶೇಂಗಾ ರಾಟೆಯನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು. ಇನ್ನೊಂದು ವಿಚಾರ ಏನೆಂದರೆ, ಮಣ್ಣಿನ ಪರೀಕ್ಷೆಯನ್ನು ಸ್ಥಳದಲ್ಲಿಯೇ ಮಾಡತಕ್ಕಂಥ ವಿಚಾರವನ್ನು ಹಿಂದೆಯೂ ಹೇಳಿದ್ದರು. ಅದರಂತೆ ಸ್ಥಳದಲ್ಲಿಯೇ ಮಣ್ಣು ಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಮಾಡಿ ರೈತರಿಗೆ ಅನುಕೂಲವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ರೈತರಿಗೆ ನೇರವಾಗಿ ಹತ್ತಿ ಬೀಜವನ್ನು ಉತ್ಪಾದನೆ ಮಾಡುವ ಕಾರ್ಯಕ್ರಮ ಇದುವರೆಗೆ ಸರಕಾರದ ಮುಂದೆ ಇಲ್ಲ. ಆ ಬಗ್ಗೆ ಪರಿಶೀಲನೆ ಮಾಡಿಲ್ಲ. ಎರಡನೆಯದಾಗಿ ಪ್ರೊಸೆಸಿಂಗ್ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಆದಷ್ಟು ಬೇಗ ಮಾಡಲಿಕ್ಕೆ ಹೇಳುತ್ತೇನೆ. ಮೂರನೆಯದಾಗಿ ಮಣ್ಣು ಪರೀಕ್ಷೆ ಬಗ್ಗೆ ಮಾನ್ಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ವಸಂತ ಸಾಲಿಯಾನ್.—ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಇನ್ನೂ ಒಂದು ಗಂಟೆ ಬೇಕಾದರೆ ಆಗಲಿ. ಈಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಬಹುದು.

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸಚಿವರು ರೈತರ ಬಗ್ಗೆ ವಿವರವಾಗಿ ಅವರ ಏಳಿಗೆಯ ಬಗ್ಗೆ ಭಾಷಣವನ್ನು ಮಾಡಿದ್ದಾರೆ, ರೈತರ ಉದ್ಧಾರವಾಗಬೇಕೆನ್ನುವ ಬಗ್ಗೆ ಎಲ್ಲರಲ್ಲಿಯೂ ಬೇರೆ ಬೇರೆ ವಿಚಾರಗಳು ಇವೆ. ದೊಡ್ಡ ರೈತರನ್ನು ಹೇಗೆ ಉದ್ಧಾರ ಮಾಡಬೇಕು, ಸಣ್ಣ ರೈತರನ್ನು ಹೇಗೆ ಉದ್ಧಾರ ಮಾಡಬೇಕು. ಕೂಲಿಕಸಬನ್ನು ಮಾಡಿಕೊಂಡಿರತಕ್ಕಂಥವರನ್ನು ಹೇಗೆ ಉದ್ಧಾರ ಮಾಡಬೇಕು ಎಂಬ ಬಗ್ಗೆ ಅವರನ್ನು ಉದ್ಧಾರ ಮಾಡಲಿಕ್ಕೆ ಬೇರೆ ಬೇರೆ ಯೋಜನೆಗಳು ಆಗಬೇಕು. ಅದಕ್ಕೆ ಸಾಧಾರಣವಾದ ಯೋಜನೆಗಳು ಆಗುವುದಿಲ್ಲ. ಎಲ್ಲರನ್ನು ಉದ್ಧಾರ ಮಾಡಲಿಕ್ಕೆ ತಾವು ಪಂಜಾಬ್‌ನಲ್ಲಿ ಯಾವ ರೀತಿಯಲ್ಲಿ ಕೃಷಿ ಇಲಾಖೆಯವರು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬುದನ್ನು ಹೋಗಿ ನೋಡಿಕೊಂಡು ಬಂದು, ಆ ರೀತಿಯಲ್ಲಿ ಪ್ರತಿಯೊಬ್ಬರನ್ನು ಉದ್ಧಾರ ಮಾಡುವುದಕ್ಕೆ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕು. ಅದನ್ನು ಅಲ್ಲಿಗೆ ಹೋಗಿ ಅಭ್ಯಾಸ ಮಾಡಿ ಕರ್ನಾಟಕ ರಾಜ್ಯದಲ್ಲಿಯೂ ಆ ಯೋಜನೆಗಳನ್ನು ಜಾರಿಗೆ ತರುತ್ತೀರಾ ಎಂದು ದಯಮಾಡಿ ಹೇಳಬೇಕು.

ಎರಡನೆಯದು, ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಈ ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟು ಹಣವನ್ನು ನಿಮ್ಮ ವರ್ಗದವರಿಗೆ ಮಾತ್ರ ಖರ್ಚು ಮಾಡಬೇಕೆಂದು ಒದಗಿಸಿದ್ದೀರಿ? ೮೭-೮೮ರಲ್ಲಿ ಎಷ್ಟು ಒದಗಿಸಿದ್ದೀರಿ ? ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ? ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊಬಲಗು, ತಾರೀಖು ಮತ್ತು ಅದನ್ನು ನಿಮ್ಮ ಇಲಾಖೆಯಲ್ಲಿ ಯಾವರೀತಿ ಬಿಡುಗಡೆ ಮಾಡಿದ್ದೀರಿ, ಎಷ್ಟು ಉಳಿಸಿದ್ದೀರಿ ?

ಶ್ರೀ ಆರ್. ದೇಶಪಾಂಡೆ.—ಮಾನ್ಯ ಬಸವಲಿಂಗಪ್ಪನವರು ಏನು ಸೂಚನೆ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಸಣ್ಣ ರೈತರ ಸ್ಥಿತಿಗತಿಯನ್ನು ಕೃಷಿಯೊಂದರಿಂದಲೇ ಸುಧಾರಿಸಲು ಸಾಧ್ಯವಾಗುತ್ತಿಲ್ಲ. ಸಬ್ಸಿಡಿಯರಿ ಆಕ್ಯುಪೇಷನ್ ಮಾಡಬೇಕಾಗುತ್ತದೆ, ಪಂಜಾಬಿನಲ್ಲಿ ಅದನ್ನು ಮಾಡಿದ್ದಾರೆ, ಒಪ್ಪಿಕೊಳ್ಳುತ್ತೇನೆ. ಎರಡನೆಯದು ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನ ವಿವರಗಳನ್ನು ತಮಗೆ ತರಿಸಿಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ಎ. ತುಂಗಳ್ —ನಾನು ಮೂರು ಕ್ಲಾರಿಫಿಕೇಷನ್ ಕೇಳುತ್ತೇನೆ. ಹೋದ ವರ್ಷ ಬಿತ್ತನೆ ಬೀಜಗಳಲ್ಲಿ ವಿಶೇಷವಾಗಿ ಸನ್‌ಫ್ಲವರ್ ಬೀಜಗಳ ಅಭಾವ ಇದ್ದುದರ ಹಿನ್ನೆಲೆಯಿಂದ ೧೨೦ ರೂಪಾಯಿ ಇದ್ದ ದರ ೩೫೦ ರೂಪಾಯಿಗಳಿಗೆ ಕಾಳಸಂತೆಯಲ್ಲಿ ಮಾರಾಟವಾಗಿರುವುದು ತಮ್ಮ

ಗಮನಕ್ಕೂ ಬಂದಿರಬಹುದು. ಆದ್ದರಿಂದ ಈ ಸಲ ಮಳೆಗಾಲ ಆರಂಭಿಸುವ ಮುಂಚೆ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಬೀಜಕ್ಕಾಗಿ ಪರದಾಡುವುದಕ್ಕಿಂತ ಜಿಲ್ಲೆಗೊಂದರಂತೆ ಬೀಜ ಸಂಗ್ರಹಣೆ ವ್ಯವಸ್ಥೆ ಮಾಡುತ್ತೀರಾ ? ಎರಡನೆಯದು, ನಮ್ಮ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಚಾಡಕೋಟೆಯಲ್ಲಿ ಒಣ ಬೇಸಾಯ ಮಂಡಲಿಯ ವಾಟರ್‌ಷೆಡ್ ಸ್ಕೀಮ್ ಅದು ಅತ್ಯಂತ ಯಶಸ್ವಿಯಾಗಿದ್ದು ಭಾರತದಲ್ಲೇ ಅತ್ಯಂತ ಪ್ರಗತಿದಾಯಕವಾದ ಕಾರ್ಯಕ್ರಮವಾಗಿದ್ದು ಆದಕ್ಕಾಗಿ ತಮಗೂ ಮಾನ್ಯ ಮುಖ್ಯಮಂತ್ರಿಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಒಂದು ಕಾರ್ಯಕ್ರಮವನ್ನು ಸಾವಳಗಿ ಹೋಬಳಿಯು ಶಾಶ್ವತ ಬರಗಾಲದ ಪ್ರದೇಶವೆಂದು ಹಣೆಪಟ್ಟಿ ಕಟ್ಟಿಕೊಂಡಿರುವುದರಿಂದ ಅಲ್ಲಿಗೆ ಮೇಲಿನ ಸ್ಕೀಮ್‌ನ್ನು ವಿಸ್ತರಿಸುತ್ತೀರಾ ? ಮೂರನೆಯದು ಕಳೆದ ೧೦ ವರ್ಷಗಳಲ್ಲಿ ಜಮಖಂಡಿಯಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕಚೇರಿ ಇತ್ತು, ಉಪಯುಕ್ತ ಕೆಲಸಗಳನ್ನು ಮಾಡುತ್ತಿತ್ತು ಅದನ್ನು ಇತ್ತೀಚೆಗೆ ಮುಧೋಳಕ್ಕೆ ವರ್ಗಾಯಿಸಲಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಆರ್. ವಿ. ದೇಶಪಾಂಡೆ.—ಸೂರ್ಯಕಾಂತಿ ಬೀಜದ ಬಗ್ಗೆ ಕಳೆದ ವರ್ಷ ಇದು ಬ್ಲಾಕ್ ಮಾರ್ಕೆಟ್ ಆಗಿದ್ದುದ್ದು ನಿಜ. ಈ ಸಲ ಜಿಲ್ಲಾಧಿಕಾರಿಗಳಿಗೆ, ಎಸ್‌ಪಿಗಳಿಗೆ ಮತ್ತು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳಿಗೆ ಮೆಸೇಜ್ ಕೊಟ್ಟು ಸ್ಟ್ರಿಕ್ಟ್ ವಿಜಿಲೆನ್ಸ್ ಇಡಬೇಕೆಂದು ಹೇಳಿದ್ದೇನೆ. ಅಲ್ಲದೆ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಅಲಾಟ್‌ಮೆಂಟ್ ಆಗಿದೆ ಎಂಬ ವಿವರವನ್ನು ಜಿಲ್ಲೆಯ ಆಡಳಿತ ವಹಿಸಿರುವ ವಿವಿಧ ಅಧಿಕಾರಿಗಳಿಗೆಲ್ಲ ಕಳಿಸಿ ವಿಜಿಲೆಂಟಾಗಿರುವಂತೆ ತಿಳಿಸಿದ್ದೇನೆ. ಇದರ ಬಗ್ಗೆ ಶಾಸಕರ ಸಹಕಾರವನ್ನು ಕೋರುತ್ತೇನೆ. ಸಾವಳಗಿಗೆ ಒಣಬೇಸಾಯ ಕಾರ್ಯಕ್ರಮವನ್ನು ವಿಸ್ತರಿಸುವ ಬಗ್ಗೆ ಇಲ್ಲಿ ನೇರವಾಗಿ ನಾನು ಹೇಳುವುದಕ್ಕಾಗುವುದಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇನೆ. ವಿಶ್ವಬ್ಯಾಂಕಿನ ಧನಸಹಾಯದೊಂದಿಗೆ ಹೊಸ ಯೋಜನೆಗಳನ್ನು ಶುರು ಮಾಡಬೇಕೆಂದಿದ್ದೇವೆ, ಆಗ ಪರಿಶೀಲಿಸುತ್ತೇನೆ. ಇನ್ನು ಜಮಖಂಡಿಯಿಂದ ಮುಧೋಳಕ್ಕೆ ಆಗ್ರೋ ಇಂಡಸ್ಟ್ರೀಸ್ ಕಚೇರಿ ವರ್ಗಾವಣೆಯಾಗಿರುವುದರ ಬಗ್ಗೆ ಪರಿಶೀಲನೆ ನಡೆಸಿ ತಮಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಉಡುಪಿ ತಾಲ್ಲೂಕಿನಲ್ಲಿ ೬೧ ಕೃಷಿ ಸಹಾಯಕರ ಹುದ್ದೆಗಳಿದ್ದು ಆ ಪೈಕಿ ಕೇವಲ ೧೯ ಮಾತ್ರ ಭರ್ತಿಯಾಗಿದ್ದು ಇದರಿಂದ ರೈತರಿಗೆ ತೊಂದರೆಯಾಗಿದೆ. ಅದನ್ನು ಭರ್ತಿ ಮಾಡಲು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೆನು. ಈಗ ತಕ್ಷಣ ಅದನ್ನು ಭರ್ತಿ ಮಾಡುತ್ತೀರಾ?

೧೨-೩೦ ಪಿ. ಎಂ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳುವುದು ನಿಜ. ನಾನು ಉತ್ತರ ಕೊಡುವಾಗ ಹೇಳಿದ್ದ ೨೫೦೦ ಅಗ್ರಿಕಲ್ಚರ್ ಅಸಿಸ್ಟೆಂಟ್ಸ್ ಪೋಸ್ಟ್ ಖಾಲಿ ಇದೆ ಈಗ ೧೫೦೦ ಜನರಿಗೆ ತರಬೇತಿ ಏನು ಕೊಡುತ್ತಿದ್ದೇವೆ ಅದು ಮುಗಿಯುತ್ತದೆ ನಂತರ ಅವರನ್ನು ಪೋಸ್ಟ್ ಮಾಡುತ್ತೇವೆ, ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಪೋಸ್ಟ್ ಅನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ನೋಡಿ ಮಾಡುತ್ತೇವೆ.

ಶ್ರೀ ಸಿ. ಎಂ. ರೇವಣ ಸಿದ್ದಯ್ಯ.—ಕೃಷಿಕರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನಿರ್ಧರಿಸುವುದು ಕೃಷಿಕರ ಪ್ರಮುಖ ಬೇಡಿಕೆಯಾಗಿದೆ. ಕೇಂದ್ರ ಸರಕಾರ ಹಿಂದಿನ ವರ್ಷದ ಬೆಂಬಲ ಬೆಲೆಗಿಂತಲೂ ೩-೪ ಪರ್ಸೆಂಟ್ ಬೆಲೆ ಹೆಚ್ಚು ಮಾಡಿದೆ ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅದೇ ರೀತಿ ಅಗತ್ಯವಸ್ತುಗಳ ಬೆಲೆಗಳು ಹೆಚ್ಚಾಗಿವೆ. ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗಿದೆ ಎಂದು ಸರಕಾರೀ ನೌಕರರ ಮೂರನೇ ಆಯೋಗ ಏನು ವರದಿಯನ್ನು ಕೊಟ್ಟಿತ್ತು ಅದರಲ್ಲಿ ೫೦ ಪರ್ಸೆಂಟ್‌ನಷ್ಟು ಸಂಬಳಗಳನ್ನು ಹೆಚ್ಚು ಮಾಡಬೇಕೆಂದು ಶಿಫಾರಸ್ಸು ಮಾಡಿತ್ತು. ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿದೆಯೆಂದು ೫೦ ಪರ್ಸೆಂಟ್‌ನಷ್ಟು ಸಂಬಳಗಳನ್ನು ಹೆಚ್ಚು ಮಾಡಬೇಕಾಯಿತು. ಆದರೆ ಅದೇ ಅಗತ್ಯ ವಸ್ತುಗಳನ್ನು ತೆಗೆದುಕೊಳ್ಳುವ ರೈತರಿಗೆ ಮಾತ್ರ ೩-೪ ಪರ್ಸೆಂಟ್‌ನಷ್ಟು ಬೆಲೆ ಹೆಚ್ಚು ಮಾಡಿದೆ. ಇದು ಎಷ್ಟು ಅನ್ಯಾಯ, ವಂಚನೆ ಆಗಿದೆ ಆದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲೀ ಅಥವಾ ನಮ್ಮ ಕೃಷಿ ಮಂತ್ರಿಗಳಾಗಲೀ ಚರ್ಚೆ ಮಾಡಿ ಈ ಒಂದು ಭೇದವನ್ನು ಸರಿ ಮಾಡಬೇಕು. ಯಾವ ಆಳತೆಗೋಲಿನಿಂದ ಈ ಬೆಲೆಗಳನ್ನು ನಿಗದಿ ಮಾಡಿದರು ಎಂಬ ಬಗ್ಗೆ ವಿಚಾರ ನಡೆಸಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. You have to apprise the Central Government. When in one case, they consider the price rise and enhance it by 50% in

respect of salaries to the Government servants, why not they consider price rise in another case i.e., in respect of essential commodities ?

ಶ್ರೀ ಆರ್. ವಿ. ದೇಶಪಾಂಡೆ.— ಈ ಸಮಸ್ಯೆ ಏನು ಇದೆ ಇದು ಎಲ್ಲರಿಗೂ ಗೊತ್ತಿದೆ. ರೈತರಿಗೆ ನ್ಯಾಯವಾದ ಬೆಲೆ ಸಿಗಬೇಕೆಂದು ನಾವೆಲ್ಲರೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಎಷ್ಟು ಕಾಸ್ಟ್ ಆಫ್ ಪ್ರೊಡಕ್ಷನ್ ಇದೆ ಅದರ ಮೇಲೆ ೧೫ ಪರ್ಸೆಂಟ್ ಹೆಚ್ಚು ಕೊಡಿ ಎಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೇವೆ ಅವರಿಂದ ಇನ್ನೂ ಸರಿಯಾದ ಉತ್ತರ ಬಂದಿಲ್ಲ. ಅದರ ಬಗ್ಗೆ ಇನ್ನೂ ಹೆಚ್ಚು ಪ್ರಯತ್ನ ಮಾಡುತ್ತಿದ್ದೇವೆ ಇನ್ನು ಮುಂದೆ ಸಹ ಪ್ರಯತ್ನ ಮಾಡುತ್ತೇವೆ.

SRI VEERKUMAR A. PATIL.--Mr. Speaker Sir, in Belgaum district many farmers in Chikodi, Gokak, Hukkeri and Saundatti talukas are growing Beedi Tobacco. The Hon. Minister has not noted anything in his speech about the Beedi Tobacco. We are compelled to bring seeds from Gujarath. Though there is a Tobacco Fedaration, it is not purchasing tobacco. I request the Hon. Minister to say some thing about the tobacco seeds and tobacco crop.

SRI R. V. DESHPANDE.--Sir, if the hon. Member had participated in the discussion, I would have definitely answered him. However with regard to the achievements, I do concede that because of the failure of rains, the tobacco crop has been affected. The area under tobacco has also gone down. There is seed as well as procurement problem. I will do my best and see, how best the problem could be solved.

ಶ್ರೀ ಹೆಚ್. ಮಹದೇವಪ್ಪ.—ಇವತ್ತು ಎಲ್ಲಾ ರಾಜಕೀಯ ಪಕ್ಷಗಳೂ ಮಾತನಾಡುತ್ತವೆ ನಮ್ಮದು ಕೃಷಿಪ್ರಧಾನವಾದ ದೇಶ ರಾಷ್ಟ್ರದ ಬೆನ್ನೆಲುಬು ರೈತ ಎಂದು, ನಾವು ಕೂಡ ಅದೇ ರೀತಿ ಹೇಳಿಕೊಂಡು ಹೋಗುತ್ತಿದ್ದೇವೆ. ಆದರೆ ರೈತ ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದ ಬೆಳೆ ಸಿಗದಿರ ತಕ್ಕಂಥಾದ್ದು ನಮ್ಮೆಲ್ಲರಿಗೂ ಕೂಡ ಗೊತ್ತಿದೆ. ಇದನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಕಾಫಿ ಬೋರ್ಡಿನ ಮಾದರಿಯಲ್ಲಿ ಪ್ಯಾಡಿ ಬೋರ್ಡ್ ಅನ್ನು ನಿರ್ಮಾಣ ಮಾಡಿ ಅದರ ಮೂಲಕ ರೈತರು ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದಂತಹ ಬೆಲೆಯನ್ನು ನಿಗದಿ ಮಾಡುವಂತಹ ಕ್ರಮವನ್ನು ಸರಕಾರ ಕೈಗೊಳ್ಳಬೇಕು. ಈಗಾಗಲೇ ಏನು ರೈತರು ದಳ್ಳಾಳಿಗಳಿಗೆ ತಮ್ಮ ವ್ಯವಸಾಯ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ ಆ ಮಾರಾಟದಿಂದ ಬರತಕ್ಕಂತಹ ಲಾಭದಲ್ಲಿ ಶೇಕಡ ೨೫ ರಷ್ಟು ಭಾಗವನ್ನು ಸಂಬಂಧಪಟ್ಟ ರೈತರಿಗೇ ಕೊಡತಕ್ಕಂತಹ ಕಾಯಿದೆಯನ್ನು ತರುವ ಬಗ್ಗೆ ತಾವು ತೀವ್ರವಾಗಿ ಗಮನಹರಿಸಬೇಕು. ದಲಿತ ವರ್ಗಕ್ಕೆ ಸೇರಿದವರಾದ ಶ್ರೀ ಲಕ್ಷ್ಮಣಯ್ಯನವರು ಏನು ಇಂಡಾಫ್ ರಾಗಿ ಬೆಳೆಯನ್ನು ಕಂಡು ಹಿಡಿದಿದ್ದಾರೆ ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡದೇ ಇರುವುದು ಬಹಳ ನೋವಿನ ಸಂಗತಿಯಾಗಿದೆ. ಇಂಡಾಫ್ ರಾಗಿ ತಳಿ ಸಂಶೋಧನೆಯಲ್ಲಿ ಅವರು ೧೫-೨೦ ವರ್ಷದಿಂದ ಸೇವೆಯನ್ನು ಸಲ್ಲಿಸಿದ್ದಾರೆ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡುವಂತೆ ಕೇಂದ್ರ ಸರಕಾರಕ್ಕೆ ಅವರ ಹೆಸರನ್ನು ಶಿಫಾರಸ್ಸು ಮಾಡಬೇಕು. ಈಗಾಗಲೇ ಹಲವಾರು ವರ್ಷಗಳಿಂದ ಮೈಸೂರು ಜಿಲ್ಲೆಗೆ ಕೃಷಿ ಕಾಲೇಜನ್ನು ಮಂಜೂರು ಮಾಡಬೇಕು ಎಂದು ನಮ್ಮ ಬೇಡಿಕೆ ಇದೆ. ಮೈಸೂರು ಜಿಲ್ಲೆಯು ಕಾವೇರಿ ಬೇಸಿನ್ ವ್ಯವಸ್ಥೆಗೆ ಒಳಪಡುವುದರಿಂದ ಅಲ್ಲಿ ಕೃಷಿ ಕಾಲೇಜಿನ ಅವಶ್ಯಕತೆ ಇದೆ. ಅದರ ಬಗ್ಗೆ ಸರಕಾರ ಹೆಚ್ಚು ಗಮನ ಹರಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಅವರಿಗೆ ಇನ್ನೂ ಹೆಚ್ಚು ಅನುಕೂಲವನ್ನು ಸಿಗಬೇಕು ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೂ ಕೂಡಾ ಇದರ ಬಗ್ಗೆ ಈಗಾಗಲೇ ಸಾಕಷ್ಟು ಬೋರ್ಡ್‌ಗಳು ಆಗಿವೆ. ಇನ್ನು ಬೋರ್ಡುಗಳನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರವು ಯಾವುದೇ ತರಹದ ಯೋಚನೆಯನ್ನು ಮಾಡುತ್ತಿಲ್ಲ. As an Advocate Iam telling you that it is

not possible ಆದ್ದರಿಂದ ಇದರ ಬಗ್ಗೆ ಇವತ್ತು ಯಾವುದೇ ಒಂದು ಭರವಸೆಯನ್ನು ಕೊಡಲಿಕ್ಕೆ ಸಾಧ್ಯ ಇಲ್ಲ. ವ್ಯವಸಾಯ ಸಾಮಗ್ರಿಗಳಿಂದ ಬರತಕ್ಕಂಥ ಶೇಕಡ ೨೫ ರಷ್ಟು ಲಾಭವನ್ನು ಸಂಬಂಧಪಟ್ಟ ರೈತರಿಗೆ ಕೊಡುವ ಬಗ್ಗೆ ಹೇಳಿದ್ದಾರೆ. ಬೆಲೆಯನ್ನು ನಿಗದಿ ಮಾಡುವುದು ರಾಜ್ಯಸರ್ಕಾರವಲ್ಲ. ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರ.

ಶ್ರೀ ಹೆಚ್. ಮಹದೇವಪ್ಪ.—ದಳ್ಳಾಳಿಗಳಿಂದ ಬರತಕ್ಕಂಥ ಹಣವನ್ನು ಏನು ಪಡೆಯುತ್ತೀರಿ, ಆ ರೀತಿ ಪಡೆದಂಥ ಲಾಭದ ಹಣವನ್ನು ಶೇಕಡ ೨೫ ರಷ್ಟು ಭಾಗವನ್ನು ಸಂಬಂಧಪಟ್ಟ ರೈತರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ಹೇಳಿದ್ದುದು. ಇದರ ಬಗ್ಗೆ ಒಂದು ಕಾಯ್ದೆಯನ್ನಾದರೂ ತರಬೇಕು ಎಂದು ಹೇಳುತ್ತೇನೆ.

ಶ್ರೀ ಆರ್ ವಿ. ದೇಶಪಾಂಡೆ.—ಇದರ ಬಗ್ಗೆ ಕಾಯ್ದೆ ಮಾಡಲಿಕ್ಕೆ ಅಸಾಧ್ಯ. ಮೂರನೆಯದು ಅವರು ಪದ್ಮಶ್ರೀ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ಪರಿಶೀಲಿಸುತ್ತೇನೆ. ನಾಲ್ಕನೆಯದ ಕೃಷಿ ಕಾಲೇಜಿನ ಬಗ್ಗೆ ಹೇಳಿದ್ದಾರೆ, ಕೃಷಿ ಕಾಲೇಜು ಎಲ್ಲಾ ಕಡೆ ಇದೆ. ಕೃಷಿ ಕಾಲೇಜನ್ನು ಮಾಡಬೇಕು ಎಂದು ಡಿಮ್ಯಾಂಡ್ ಇದೆ. ಆದರೆ ತಜ್ಞರು ಏನು ಹೇಳುತ್ತಾರೆ ಎಂದರೆ ಈ ರೀತಿ ಕಾಲೇಜುಗಳನ್ನು ತೆಗೆದು ಅನ್-ಎಂಪ್ಲಾಯ್‌ಮೆಂಟ್ ಸಮಸ್ಯೆ ಜಾಸ್ತಿ ಮಾಡುತ್ತೀರಿ ಈ ರೀತಿ ಮಾಡಿದರೆ ಅನ್-ಪ್ರೊಡಕ್ಟೀವ್ ಗ್ರಾಜುಯೇಟ್ಸ್ ಕೂಡಾ ಜಾಸ್ತಿಯಾಗುತ್ತಾರೆ. ಎಂದು ಹೇಳಿದ್ದಾರೆ ಈ ಒಂದು ಸಮಸ್ಯೆಯೂ ಕೂಡಾ ಇದೆ. ಆದರೂ ಇಲ್ಲಿ ಕೃಷಿ ಕಾಲೇಜನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡಾ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಂಪಾಪತಿ.—ನಮ್ಮ ಕೃಷಿ ಸಚಿವರು ಭೂಪತಿಯವರು ಮತ್ತು ವೇದಾಂತ ಹೆಮ್ಮಿಗೆಯವರು ಕೇಳಿದಂಥ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರ ಸಮಂಜಸವಾದುದು ಅಲ್ಲ ಎಂದು ನಾನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸ್ಟೈಪೆಂಡರಿ ಉದ್ಯೋಗದಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಸೇವೆಯನ್ನು ಮಾಡಿದಂಥವರಿಗೆ ಅವರ ಸೇವೆಯನ್ನು ಕಾನೂನುಬದ್ಧವಾಗಿ ಕ್ರಮಬದ್ಧಗೊಳಿಸುವುದಕ್ಕೆ ತಾವು ವ್ಯವಸ್ಥೆಯನ್ನು ಮಾಡಿಲ್ಲ. ಅವರಿಗೆ ಬರತಕ್ಕಂಥ ವೇತನದಲ್ಲಿ ಕಡಿಮೆ ಮಾಡಿ ಈಗ ಹೊಸದಾಗಿ ೨೦೦ ರೂಪಾಯಿ ಎಂದು ಹೇಳಿ ಕೊಡುತ್ತಾರೆ, ಅದು ಯಾವ ಆಧಾರದಮೇಲೆ ಇದನ್ನು ಗೊತ್ತು ಮಾಡಿದ್ದೀರೋ ನನಗಂತೂ ಗೊತ್ತಿಲ್ಲ. ಯಾವುದೇ ಸಂದರ್ಭದಲ್ಲಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗ ಆಗಿ ಕೆಲಸ ಗೊತ್ತಿಲ್ಲ ಎಂದು ಹೇಳಿದರೂ ಕೂಡಾ ಅವನಿಗೆ ಸಂಬಳವನ್ನು ಕಡಿಮೆ ಮಾಡುವುದಿಲ್ಲ. ಅವರಿಗೆ ಬರತಕ್ಕಂಥ ವೇತನ ಬರುತ್ತಿರುತ್ತದೆ. ಅವರ ಸರ್ವೀಸ್ ಕೂಡಾ ಖಾಯಂ ಆಗಿ ಉಳಿದಿರುತ್ತದೆ. ಆದರೆ ಈ ಬಡಪಾಯಿಗಳು ಹತ್ತು ವರ್ಷಗಳ ಕಾಲ ಕೆಲಸ ಮಾಡಿಕೊಂಡು ಬಂದು ಇವೊತ್ತು ಅವರ ಸೇವೆಯನ್ನು ಕ್ರಮಬದ್ಧಗೊಳಿಸಬೇಕಾಗಿತ್ತು. ಸರ್ಕಾರಿ ಆದೇಶದ ಪ್ರಕಾರ ಮತ್ತೆ ನೀವು ಅವರಿಗೆ ಟ್ರೈನಿಂಗನ್ನು ಕೊಡುತ್ತೀರಾ? ಟ್ರೈನಿಂಗ್ ಎಂದು ಕೊಟ್ಟು ಎರಡು ನೂರು ರೂಪಾಯಿಗಳ ಸಂಬಳ ಎಂದು ಕೊಟ್ಟರೆ ನೀವು ಅವರು ಯಾವ ರೀತಿಯಲ್ಲಿ ಜೀವನ ಮಾಡಬೇಕು. ನಿಜವಾಗಿಯೂ ಅವರ ಟ್ರೈನಿಂಗ್ ಮುಗಿಯುವುದರೊಳಗಾಗಿ ಅವರು ಸತ್ತು ಹೋಗುತ್ತಾರೆ. ಈ ಟ್ರೈನಿಂಗ್ ಯಾರಿಗೆ ಉಪಯೋಗ ಆಗುತ್ತದೆ? ಇವರುಗಳಿಗೆ ಸರ್ಕಾರಿ ವೇತನವನ್ನು ಕೊಡಬೇಕಾದದ್ದು ನ್ಯಾಯ ಇದೆ. ನಾವು ಹೇಳಿಬಿಟ್ಟಿದ್ದೇವೆ, ಮಾಡಿಬಿಟ್ಟಿದ್ದೇವೆ, ಇದೇ ಸರಿ ಎಂದು ಹೇಳತಕ್ಕಂಥ ವಾದ ಸರಿಯಾದುದಲ್ಲ. ದಯವಿಟ್ಟು ಆ ಜನರಿಗೆ ಕನಿಷ್ಟ ವೇತನ, ಸರ್ಕಾರದ ಕನಿಷ್ಟ ಸಂಬಳ ಅಷ್ಟನ್ನಾದರೂ ಅವರಿಗೆ ಕೊಟ್ಟರೆ ನಿಜವಾಗಿಯೂ ಸರ್ಕಾರ ಅವರಿಗೆ ಉಪಕಾರವನ್ನು ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಬೆಳೆ ಆಗಬೇಕು, ಆಹಾರಧಾನ್ಯ ಹೆಚ್ಚು ಬೆಳೆಯಬೇಕು ಎಂದು ಹೇಳತಕ್ಕಂಥದ್ದು ಸಹಜ. ಆದರೆ ಈ ಸರ್ಕಾರಿ ಜಮೀನನ್ನು ಇವತ್ತು ಬಗರ್‌ಹುಕುಂ ಸಾಗುವಳಿ ಮಾಡಿರತಕ್ಕಂಥ ಜನರಿಗೆ ಅವರನ್ನು ಅಲ್ಲಿಂದ ತೆರವು ಮಾಡಿಸತಕ್ಕಂಥ ಕಾರ್ಯಕ್ರಮ ನಡೆಯುತ್ತಿದೆ. ಇದರ ಬಗ್ಗೆ ನೀವು ರೆವಿನ್ಯೂ ಇಲಾಖೆಗೆ ಮನವಿ ಮಾಡಿ ಎಂದು ಹೇಳುತ್ತೇನೆ. ನಮ್ಮ ರೈತರಿಗೆ ಸಾಲ ಮನ್ನಾ ಮಾಡಿದ್ದೇವೆ ಎಂದು ಹೇಳಿದರು, ಆ ಜನರಿಗೂ ಕೂಡಾ ಸಹಾಯವಾಗುತ್ತದೆ. ಇವರೂ ರೈತರಲ್ಲವೆ ? ನೀವು ಅವರಿಗೆ ಜಮೀನನ್ನು ಕೊಟ್ಟರೆ ಜಮೀನನ್ನು ತೋರಿಸಿ ಸಾಲ ಕೊಡಿ ಎಂದು ಕೇಳಬಹುದು. ಜಮೀನೇ ಇಲ್ಲ ಎಂದರೆ ಸಾಲ ಯಾರು ಕೊಡುತ್ತಾರೆ? ಬಗರ್‌ಹುಕುಂ ರೈತರು ಎಂದು ಹೇಳಿದರೆ ತಾವೇನೋ ಪರಿಶಿಷ್ಟ ವರ್ಗದವರು ಎಂದು ಹೇಳುತ್ತೀರಿ ಅವರೇ ಹೆಚ್ಚು ಜನರು ಇರುವುದು, ಅವರಿಗೆ ಸಹಾಯ ಮಾಡ

ಬೇಕಾದರೆ ಹೆಚ್ಚು ಉತ್ಪಾದನೆ ಆಗಬೇಕಾದರೆ ತಾವು ದಯವಿಟ್ಟು ಇದರ ಬಗ್ಗೆ ಒಂದು ನಿರ್ಣಯವನ್ನು ಕೈಗೊಂಡು ಅವರಿಗೆ ಖಾಯಂ ಪಟ್ಟ ಕೊಡಿಸಿ ಎಂದು ನಾನು ಹೇಳುತ್ತೇನೆ. ಇವರಿಗೂ ಕೂಡಾ ಬೇರೆ ರೈತರಿಗೆ ಸಹಾಯ ಆಗುವ ರೀತಿಯಲ್ಲಿ ಆಗುವಂತೆ ತಾವು ಶಿಫಾರಸ್ಸು ಮಾಡಬೇಕು. ಅವರಿಗೆ ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಪಂಪಾಪತಿಯವರು ಸ್ಟೈಪೆಂಡರಿಯಲ್ಲಿ ಕೆಲಸ ಮಾಡುತ್ತಿರುವವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ಅವರಿಗೆ ಸಂಬಳವನ್ನು ಕೊಡುತ್ತಿಲ್ಲ. ನಾವು ಸ್ಟೈಪೆಂಡ್ ಮಾತ್ರ ಕೊಡುತ್ತಿದ್ದೇವೆ.

ಈ ಸ್ಟೈಫಂಡರಿ ಪೀರಿಯಡ್‌ನಲ್ಲಿ ಇವರನ್ನು ವಜಾ ಮಾಡಲಿಕ್ಕೆ ಸಾಧ್ಯ. ಆದರೆ ನೀವು ಸ್ಟೈಫಂಡರೀ ಪದವೀಧರರು ಹೆಚ್ಚು ಸಂಬಳ ಪಡೆಯುತ್ತಿದ್ದರು ಈಗ ಅವರ ಸ್ಟೈಫಂಡ್ ಕಡಿಮೆ ಮಾಡಿದ್ದೀರಿ ಎಂದು ಹೇಳಿದ್ದೀರಿ. ಶ್ರೀ ವೇದಾಂತ ಹೆಮ್ಮಿಗೆಯವರು ಶ್ರೀ ಭೂಪತಿಯವರು ಸಾಕಷ್ಟು ಜನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಮತ್ತು ಪ್ರಭಾವವನ್ನು ಬೀರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಇದಕ್ಕೆ ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದಿದ್ದೇನೆ. ರೆಗ್ಯುಲರೈಸೇಷನ್ ಆಫ್ ಲ್ಯಾಂಡ್ಸ್ ಬಗ್ಗೆ ನಾನೂ ನಿಮ್ಮ ಜೊತೆ ಇದ್ದೇನೆ. ನಾವು ನೀವು ಎಲ್ಲರೂ ಕೂಡಿ ಕಂದಾಯ ಮಂತ್ರಿಗಳನ್ನು ಒತ್ತಾಯ ಮಾಡಿ ಆದಷ್ಟು ಜಾಗ್ರತೆ ಅದನ್ನು ಜಾರಿಗೆ ತರುವ ಹಾಗೆ ಮಾಡೋಣ. ಇದು ನನ್ನ ಜಿಲ್ಲೆಯಲ್ಲಿಯೂ ಸಹ ಒಂದು ಜ್ವಲಂತ ಸಮಸ್ಯೆ ಆಗಿದೆ.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ ಭತ್ತದ ವಿಮೆ ಯೋಜನೆ ಬಗ್ಗೆ ಹೇಳುವುದಾದರೆ ಇದು ಬಹಳ ಒಳ್ಳೆಯ ಯೋಜನೆ, ಇದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದನ್ನು ಸರಿಯಾಗಿ ಬಳಸಿಕೊಳ್ಳಲು ವಿಮಾ ಯೋಜನೆಯನ್ನು ತಾಲ್ಲೂಕು ಘಟಕವನ್ನಾಗಿ ಮಾಡಿಕೊಂಡು ಶೇಕಡ ೮೦ ರಷ್ಟು ನಷ್ಟ ಅನುಭವಿಸುತ್ತಿರುವ ರೈತರಿಗೆ ಅನುಕೂಲ ಮಾಡಿಕೊಡಬೇಕು. ವಿಮೆಯ ಫಲ ರೈತರಿಗೆ ಸಿಗದೆ ಅವರಿಗೆ ಕಠಿಣ ಪರಿಸ್ಥಿತಿ ಉಂಟಾಗಿ ಅನ್ಯಾಯ ಆಗಿದೆ. ೪೦ ಪರ್ಸೆಂಟ್ ವಿಮಾ ಹಣವನ್ನು ಜಮೆ ಮಾಡಿದ್ದೀರಿ, ೬೦ ಪರ್ಸೆಂಟ್ ಫಸಲು ನಷ್ಟವಾಗಿದೆ. ರೈತರಿಗೆ ವಿಮೆ ಯೋಜನೆಯಿಂದ ಕೆಲವು ನಿಯಮಗಳನ್ನು ಸಡಿಲಗೊಳಿಸಿ ಫಲ ಸಿಗುವಂತೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಉತ್ತರ ಕೊಡುವಾಗಲೇ ಹೇಳಿದ್ದೇನೆ. ಇದರ ಬಗ್ಗೆ ಸಾಕಷ್ಟು ಕೇಂದ್ರ ಸರ್ಕಾರದ ಜೊತೆ ಪತ್ರ ವ್ಯವಹಾರ ನಡೆದಿದೆ. ಕಾಂಪ್ರೆಹೆನ್ಸೀವ್ ಕ್ರಾಪ್ ಇನ್‌ಶೂರೆನ್ಸ್ ಕೇಂದ್ರ ಸರ್ಕಾರದ ಯೋಜನೆ. ತಾಲ್ಲೂಕು ಒಂದು ಯೂನಿಟ್ ಮಾಡದೆ ಮಂಡಲ್ ಯೂನಿಟ್ ಮಾಡಿ ಎಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಇದನ್ನು ಮಾಡದಿರುವುದರಿಂದ ಎಷ್ಟೋ ಜನ ರೈತರಿಗೆ ತೊಂದರೆ ಆಗಿದೆ. ಲಾಭ ಸಿಗುತ್ತಿಲ್ಲ, ನಾವು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಕೇಳುತ್ತಾ ಇದ್ದೇವೆ. ಮಾನ್ಯ ಭಜನ್‌ಲಾಲ್‌ರವರು. He has gone a step furth r and has said that he would try to make village as a unit. ಅವರು ವಿಲೇಜ್ ಯೂನಿಟ್ ಮಾಡುತ್ತೇವೆಂದು ಹೇಳಿದ್ದಾರೆ. ಇದು ಆದರೆ, ಈ ಸಮಸ್ಯೆ ಬಗೆಹರಿಯಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಎಸ್. ನಂಜಪ್ಪ.—ಯಾರು ಇನ್‌ಶ್ಯೂರೆನ್ಸ್ ಮಾಡುತ್ತಾರೆ ಅವರಿಗೆ ಫಲ ಸಿಕ್ಕಬೇಕು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತರ ಸ್ಥಿತಿ ಬೇರೆ ಜಿಲ್ಲೆಯವರಿಗಿಂತ ಭಿನ್ನವಾಗಿದೆ. ಅಲ್ಲಿ ದೊಡ್ಡ ನೀರಾವರಿಗಳು ಇಲ್ಲ ಅಲ್ಲಿ ಲಿಫ್ಟ್ ಇರಿಗೇಷನ್ ಇಲ್ಲ. ರೈತರಿಗೆ ಅಲ್ಲಿ ಸಹಾಯ ಮಾಡುವುದು ಅವಶ್ಯ ಇದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಯನ್ನು ಅಳವಡಿಸಿಕೊಂಡು ರೈತರಿಗೆ ಅನುಕೂಲ ಮಾಡಿಕೊಡುವ ಪ್ಲಾನ್ ಅನ್ನು ಮಾನ್ಯ ದೇಶಪಾಂಡೆಯವರು ಏನಾದರೂ ಇಟ್ಟುಕೊಂಡಿದ್ದಾರೆಯೇ? ಅಥವಾ ಅವರಿಗೆ ಈ ವಿಚಾರದಲ್ಲಿ ಏನು ಅಭಿಪ್ರಾಯ ಇದೆ ಎನ್ನುವುದನ್ನು ಅವರು ಹೇಳಬೇಕು. ಏತ ನೀರಾವರಿಯನ್ನು ಅಲ್ಲಿಗೆ ಕೊಡುವ ಬಗ್ಗೆ ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದು ಹೇಳಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಳೆವವರಿಗೆ ಅಡಿಕೆಯಲ್ಲಿ ಸರಿಯಾದ ರೇಟ್ ಇಲ್ಲದೆ ಬಹಳ ಕಷ್ಟ ಪಡುತಿದ್ದಾರೆ. ಈ ಬಗ್ಗೆ ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ಎಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ,—ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ನಾಯಕ್‌ರವರು ಏನು ಸೂಚನೆ ಕೊಟ್ಟಿದ್ದಾರೆ ಆ ಪ್ರಕಾರ ನಾವು ಮಾಜಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಸಹಕಾರದಿಂದ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಆಶೀರ್ವಾದದಿಂದ ಎಷ್ಟೋ ಇರಿಗೇಷನ್ ಸ್ಕೀಮ್ ಅನ್ನು ಮಂಜೂರು ಮಾಡಲಾಗಿದೆ ದೊಡ್ಡ ದೊಡ್ಡ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಲು ಅಲ್ಲಿರುವ ಫಾರ್ಮರ್ಸ್ ಸಹ ಮುಂಚಿಯೇ ಕಾಂಟ್ರಿಬ್ಯೂಟ್ ಮಾಡಬೇಕಾಗಿಲ್ಲ. ಇದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ದೊಡ್ಡ ದೊಡ್ಡ ಪ್ರಾಜೆಕ್ಟ್ ಹಾಗೂ ಡ್ಯಾಮ್‌ಗಳನ್ನು ಮಾಡುವಾಗಲೇ ರೈತರುಗಳಿಂದ ಕಾಂಟ್ರಿಬ್ಯೂಶನ್ ತೆಗೆದುಕೊಳ್ಳದೇ ಇರುವಾಗ ಮಲೆನಾಡು ಪ್ರದೇಶದಲ್ಲಿ ಸಣ್ಣ ಸಣ್ಣ ನೀರಾವರಿಗಳನ್ನು ಏತ ನೀರಾವರಿಗಳನ್ನು ಮಾಡುವ ಮುಂಚೆ ಹಣ ತೆಗೆದುಕೊಂಡರೆ ಈ ಯೋಜನೆ ಜಾರಿಗೆ ಬರುವುದಿಲ್ಲ. ಇದರ ಬಗ್ಗೆ ಪುನಃ ಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿಮ್ಮ ಜೊತೆ ಸೇರಿಕೊಂಡು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಅಡಿಕೆ ಬೆಳೆಗಾರರ ಬಗ್ಗೆ ಕೇಳಿದ್ದಾರೆ. ಅದಕ್ಕೆ ಮಾನ್ಯ ತೋಟಗಾರಿಕಾ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ. ಶಿವರಾಮರೆಡ್ಡಿ.—ಈ ರಾಜ್ಯದಲ್ಲಿರುವ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ರೈತರು ಟ್ರಾಕ್ಟರ್ ಹಾಗೂ ಇನ್ನಿತರ ಮಿಷಿನರಿಗಳನ್ನು ಕೊಳ್ಳಲು ೧೯೬೮-೬೯ರಲ್ಲಿ ಪಡೆದ ಸಾಲದ ಮೇಲಿನ ಬಡ್ಡಿ ಬಹಳವಾಗಿ ಬೆಳೆದಿದ್ದ ಕಾರಣ ಇವನ್ನು ರದ್ದು ಮಾಡಬೇಕೆಂದು ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಕೃಷಿ ಮಂತ್ರಿಗಳನ್ನು ಕೇಳಿಕೊಂಡಾಗ ಅವರು ಸುಮಾರು ೭೫ ಲಕ್ಷ ರೂಪಾಯಿಗಳ ಬಾಕಿಯನ್ನು ಮನ್ನಾ ಮಾಡಿದ್ದಾರೆ. ಅದಕ್ಕಾಗಿ ನಾವು ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಈ ಬಡ್ಡಿ ಮನ್ನಾ ಮಾಡಿದ್ದು ಯಾವ ವರ್ಷದಿಂದ ಎಂಬುದನ್ನು ತಿಳಿಸಬೇಕು? ಮತ್ತೇ ನಮ್ಮಲ್ಲಿರುವ ಬೀಜ ನಿಗಮದಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯ ರೈತರು ಷೇರುಗಳನ್ನು ಕೊಳ್ಳುವ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ತೊಡಗಿಸಿದ್ದಾರೆ. ಈ ಬೀಜ ನಿಗಮಕ್ಕೆ ಕೇಂದ್ರ ಸರ್ಕಾರದಿಂದ ಬರುವಂತಹ ಸಬ್ಸಿಡಿ ಹಣವನ್ನು ರೈತರಿಗೆ ಕೊಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು? ೧೯೭೩ ರಿಂದ ೧೯೮೬ನೇ ಇಸವಿಯವರೆಗೆ ಕೇಂದ್ರ ಸರ್ಕಾರದವರು ಈ ನಿಗಮಕ್ಕೆ ಕೊಟ್ಟಿರುವ ಕೆಲವು ಔಷಧಗಳನ್ನು ಸಹ ಅವರು ರೈತರಿಗೆ ಹಂಚಿಕೆ ಮಾಡಿಲ್ಲ, ಆದ್ದರಿಂದ ಇದಕ್ಕೆ ಕಾರಣವೇನೆಂಬುದನ್ನು ಹೇಳಬೇಕು?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ರಿಯಾಯಿತಿ ಕೊಟ್ಟಿರುವುದು ೭೫ ಲಕ್ಷ ರೂಪಾಯಿಗಳಲ್ಲ. ಅದು ೧೨ ಕೋಟಿ ೭೫ ಲಕ್ಷದ ೮೪ ಸಾವಿರ ರೂಪಾಯಿಗಳು. ३१-३-೧೯೮೮ರವರೆಗೆ ಏನು ಬಾಕಿ ಇತ್ತು, ಅಷ್ಟಕ್ಕೆ ಮಾತ್ರ ಈ ರಿಯಾಯಿತಿ ಸಿಗುತ್ತದೆ. ಇದಕ್ಕೂ ಹಿಂದೆ ಯಾರಾದರೂ ಸಾಲದ ಮೇಲಿನ ಬಡ್ಡಿಯನ್ನು ಕಟ್ಟಿದ್ದರೆ, ಅವನ್ನು ಮತ್ತೆ ವಾಪಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಬೀಜ ನಿಗಮದವರಿಂದ ಕೇಂದ್ರದಿಂದ ಬರುವಂತಹ ಸಬ್ಸಿಡಿ ಹಣ ಮರುಪಾವತಿ ಆಗಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಟಿ. ಮೂಡಲಗಿರಿಯಪ್ಪ.—ಸರ್ಕಾರದವರು ರೈತರ ಜಮೀನಿನಲ್ಲಿರುವ ಭೂಸಾರ ಹೋಗದಂತೆ ತಡೆಗಟ್ಟುವ ಸಲುವಾಗಿ ಹಾಗೂ ಭೂಸಂರಕ್ಷಣೆ ಮಾಡುವ ಸಲುವಾಗಿ ರೈತರ ಜಮೀನಿನಲ್ಲಿ ಬದುಗಳನ್ನು ಹಾಕಿದ್ದಾರೆ. ಬದುಗಳನ್ನು ಹಾಕಲು ಎಷ್ಟು ಖರ್ಚಾಗುತ್ತದೆಂಬುದನ್ನು ಮೊದಲು ರೈತರಿಗೆ ಸರ್ಕಾರದವರು ತಿಳಿಸಲಿಲ್ಲ? There is no contract between the farmers and the Governmet in bunding the area. There is no consent between the Government & farmers. The farmers have not given consent to the Government to bund the area.

ನೀರಿನ ಸೌಲಭ್ಯವೇ ಇಲ್ಲದಿರುವ ಒಣ ಭೂಮಿಯಲ್ಲಿಯೂ ಸಹ ಒಂದು ಎಕರೆಗೆ ३ ಸಾವಿರದಿಂದ ४ ಸಾವಿರದವರೆಗೆ ಬದು ಕಟ್ಟಿದ ಚಾರ್ಜ್ ಎಂದು ಈಗ ರೈತರಿಂದ ವಸೂಲಿ ಮಾಡುತ್ತಿದ್ದಾರೆ. ರೈತರು ಕಷ್ಟದ ಪರಿಸ್ಥಿತಿಯಲ್ಲಿದ್ದರೂ ಸಹ. ಈ ಹಣ ಕೊಡದಿದ್ದರೆ ರೆವಿನ್ಯೂ ಇಲಾಖೆ ಮೂಲಕ ಹರಾಜು ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ರೈತರು ಕಷ್ಟದಲ್ಲಿರುವುದರಿಂದ ಇದರ ಖರ್ಚನ್ನು ಸಂಪೂರ್ಣವಾಗಿ ಮಾಫಿ ಮಾಡಬೇಕು. ರೈತರು ತಮ್ಮ ಜಮೀನಿನಲ್ಲಿ ಬದುಗಳನ್ನು ಕಟ್ಟಬೇಕೆಂದು ಕೇಳಿರಲಿಲ್ಲ ಮತ್ತು ಅವಕ್ಕೆ ಅವರು ತಮ್ಮ ಅನುಮತಿ ಕೊಟ್ಟಿರಲಿಲ್ಲ. ಇದನ್ನು

ಉಚಿತವಾಗಿ ಸರ್ಕಾರದವರು ಮಾಡಿಸಿಕೊಡುತ್ತಾರೆಂದು ರೈತರು ಭಾವಿಸಿದ್ದರು. ಆದರೆ ಈಗ ವಸೂಲಿಗೆ ಹೊರಟಿದ್ದಾರೆ. ಇದು ಸರಿಯಲ್ಲ. ಇದನ್ನು ಮನ್ನಾ ಮಾಡುವುದಕ್ಕೆ ಮಾನ್ಯ ಕೃಷಿ ಸಚಿವರು ಸರ್ಕಾರದ ಮೇಲೆ ಒತ್ತಾಯ ತರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಈ ಸಲದ ಮಾನ್ಯ ಮುಖ್ಯಮಂತ್ರಿಗಳ ಬಡ್ಜೆಟ್ ಭಾಷಣವನ್ನು ನೋಡಿದರೆ ತಿಳಿಯುತ್ತದೆ ಇದರಲ್ಲಿ ೧-೩-೧೯೮೮ರಂದು ಬಾಕಿ ಇದ್ದಂಥ ೧೮೦.೦೪ ಲಕ್ಷ ರೂಪಾಯಿಗಳಷ್ಟು ಭೂಸಾರ ಸಂರಕ್ಷಣೆ ಸಾಲವನ್ನು ಮನ್ನಾ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದರ ಜೊತೆಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಅಂದರೆ ೧೯೮೩ರಲ್ಲಿ ಒಂದು ಹೊಸ ಆಜ್ಞೆಯನ್ನು ಈ ಬಗ್ಗೆ ಹೊರಡಿಸಿದೆ. ಅದೇನೆಂದರೆ, ಭೂಸಾರ ಸಂರಕ್ಷಣೆ ಕೆಲಸದ ಬಾಬ್ತು ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಯಾವುದೇ ರೀತಿಯ ಹಣವನ್ನು ವಸೂಲಿ ಮಾಡಬಾರದು ಎಂದು. ಈ ಕೆಲಸ ಮಾಡಲು ಸರ್ಕಾರಕ್ಕೆ ರೈತರು ಒಪ್ಪಿಗೆ ಕೊಟ್ಟಿರಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ನಾವು ಎಲ್ಲಿಯೇ ಆಗಲಿ, ಈ ಕೆಲಸ ತೆಗೆದುಕೊಳ್ಳಬೇಕಾದರೆ ಶೇಕಡ ೭೦ರಷ್ಟು ರೈತರು ಒಪ್ಪಬೇಕು. ರೈತರ ಒಪ್ಪಿಗೆ ಪಡೆದೇ ನಾವು ಈ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಹೆಚ್ಚು ಬೆಳೆಯಿರಿ ಎಂಬ ಘೋಷಣೆಯ ಅನ್ವಯ ಕೆರೆಗಳ ಹಿಂದೆ ಕ್ರಾಪಿಂಗ್ ಪ್ಯಾಟ್ರನ್ ಇಂಟರ್‌ಡ್ಯೂಸ್ ಮಾಡಿದರೂ ಸಹ ಏಕೆ ಅದನ್ನು ಅನುಷ್ಠಾನಕ್ಕೆ ತರಲಿಲ್ಲ. ಹೊಗೆಸೊಪ್ಪು ಬೆಳೆಗಾರರಿಗೋಸ್ಕರ ಒಂದು ಮಂಡಳಿಯನ್ನು ರಚನೆ ಮಾಡುವುದಕ್ಕೆ ಯೋಚನೆ ಮಾಡಿದ್ದೀರಾ? ರೈತರು ಬೆಳೆದಂಥ ಆಹಾರಧಾನ್ಯಗಳಿಗೆ ದಲ್ಲಾಳಿಗಳ ಕಾಟ ತಪ್ಪಿಸಲು ಯೋಚನೆ ಮಾಡಿದ್ದೀರಾ? ಇತ್ತೀಚೆಗೆ ರೈತರು ಬೆಳೆ ಇಟ್ಟಂಥ ಭೂಮಿಗಳಲ್ಲಿ ಇಲಿಗಳ ಕಾಟ ಹೆಚ್ಚಿದೆ. ಅದರ ಬಗ್ಗೆ ಸಂಗ್ರಾಮದ ರೀತಿಯಲ್ಲಿ ಹೋರಾಟ ಮಾಡುವುದಕ್ಕೆ ಪ್ರಾರಂಭ ಮಾಡಬೇಕು. ಆಮೇಲೆ ಹತ್ತಿ ಬೆಳೆಯುವುದಕ್ಕೆ ಬೀಜದ ಕೊರತೆ ಇದೆ. ಖಾಸಗೀಯವರಿಗೆ ಈ ವಹಿವಾಟನ್ನು ಒಪ್ಪಿಸುತ್ತೇವೆ ಎನ್ನುವುದರ ಬಗ್ಗೆ ಏನು ಸಲಹೆ ಕೊಡುತ್ತೀರಿ?

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಈ ಪ್ರಶ್ನೆಯನ್ನು ಬೇರೆ ಸದಸ್ಯರು ರೈಸ್ ಮಾಡಿದ್ದಾರೆ ನಾನು ಉತ್ತರ ಹೇಳಿದ್ದೇನೆ. ಹತ್ತಿ ಬೀಜದ ಬಗ್ಗೆ, ಇಲಿಗಳ ಕಾಟದ ಬಗ್ಗೆ ಕೇಳಿದ್ದಾರೆ, ನಾನು ಉತ್ತರ ಕೊಟ್ಟಿದ್ದೇನೆ. ಕ್ರಾಪಿಂಗ್ ಪ್ಯಾಟ್ರನ್ ಬಗ್ಗೆ ಹೇಳಿದ್ದೀರಿ. ಅದನ್ನು ನಾವು ಮಾಡಲಿಕ್ಕೆ ಸಿದ್ಧ. ರೈತರು ಸಹಕರಿಸಬೇಕು. ಇದರ ಬಗ್ಗೆ ನಾವು ರೈತರಲ್ಲಿ ಎನ್‌ಲೈಟನ್ ಮಾಡಬೇಕಾಗುತ್ತದೆ. ನಾವು ಕ್ರಾಪಿಂಗ್ ಪ್ಯಾಟ್ರನ್ ಎನ್‌ಫೋರ್ಸ್ ಮಾಡಲಿಕ್ಕೆ ತಯಾರಿದ್ದೇವೆ. ಅದಕ್ಕೆ ರೈತರ ಸಹಕಾರ ಬೇಕಾಗುತ್ತದೆ. ಆ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ವಿನಯಕುಮಾರ ಸೊರಕೆ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೦ ವರ್ಷಗಳಿಂದಲೂ ಭತ್ತದ ಬೇಸಾಯಕ್ಕೆ ಮುಂಗಾರು ಮಳೆ ಸರಿಯಾಗಿ ಬಾರದ ಕಾರಣ ಮುಂಗಾರು ಬೆಳೆ ನಾಶವಾಗುತ್ತಿದೆ. ಈ ಬೆಳೆಯನ್ನೇ ನಂಬಿನಂಥ ಆರ್ಥಿಕವಾಗಿ ಹಿಂದುಳಿದಂಥ ಜನರಿಗೆ ಬಹಳ ತೊಂದರೆಯಾಗಿದೆ. ಆಮೇಲೆ ಸ್ಪೆಸಿಫಿಕ್ ಕಿಟ್ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಈ ಕಿಟ್ ಕೊಡುವಾಗ ನೆಲಗಡಲೆ ಬೆಳೆಗೆ ಕೊಟ್ಟ ಹಾಗೆ ಬೆಳೆಗಳ ಹೆಸರುಗಳನ್ನು ಕೊಟ್ಟಿದ್ದೀರಿ. ನಮ್ಮಲ್ಲಿ ಆ ಹೆಸರಿನ ಬೆಳೆ ಬೆಳೆಯುತ್ತಿಲ್ಲ. ಎರಡು ಕ್ರಾಪ್ ನಂತರ ಬೆಳೆಸುತ್ತಾರೆ. . ನೆಲಗಡಲೆ ಬೆಳೆಯುವಂಥ ಸಂಪ್ರದಾಯ ನಮ್ಮಲ್ಲಿಲ್ಲ. ಆದ್ದರಿಂದ ಇದರ ಪ್ರಯೋಜನ ಯಾವ ರೀತಿಯೂ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಒಂದನೇ ಬೆಳೆಯನಂತರ ಬೆಳೆಯುವಂಥ ದ್ವಿದಳಧಾನ್ಯಗಳ ಬಗ್ಗೆ ತೆಗೆದುಕೊಂಡರೆ ಅದರಿಂದ ರೈತರಿಗೆ ಅನುಕೂಲವಾಗುವಂಥ ಅವಕಾಶವಿದೆ. ಅದೇ ರೀತಿಯಲ್ಲಿ ಹರಿಜನ-ಗಿರಿಜನರಿಗೆ ತಮ್ಮ ಕೃಷಿ ಇಲಾಖೆಯಿಂದ ಇಂಪ್ಲಿಮೆಂಟ್ಸ್ ಕೊಡುವಂಥ ಸಂದರ್ಭದಲ್ಲಿ ಗಿರಿಜನರಿಗೆ ೪೦ ಪರ್ಸೆಂಟ್ ಸಬ್ಸಿಡಿ ಇದೆ, ಹರಿಜನರಿಗೆ ೨೫ ಪರ್ಸೆಂಟ್ ಇದೆ. ನಮ್ಮಲ್ಲಿ ಜಾಸ್ತಿ ಜನಸಂಖ್ಯೆಯಲ್ಲಿ ಹರಿಜನರು ಇರುವ ಕಾರಣ, ಅವರು ಆರ್ಥಿಕವಾಗಿ ಹಿಂದುಳಿದಿರುವ ಕಾರಣ, ಈ ಹರಿಜನರಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯ ಸಿಕ್ಕುವ ರೀತಿಯಲ್ಲಿ ಏರ್ಪಾಡು ಮಾಡಬೇಕು. ಕಳೆದ ವರ್ಷ ಕರೆಂಟ್ ಪ್ರಾಬ್ಲಂ ವಿಪರೀತವಾಗಿದ್ದಂಥ ಕಾರಣದಿಂದ ಕೃಷಿ ಮಾಡುವಂಥ ೨ನೇ ಬೆಳೆ, ೩ನೇ ಬೆಳೆ ಬೆಳೆಯುವಂಥ ರೈತರಿಗೆ ತೊಂದರೆಯಾಗಿದೆ.

ಶ್ರೀ ಬಿ. ರಾಚಯ್ಯ.—ಡಿಬೇಟ್‌ನಲ್ಲಿ ಭಾಗವಹಿಸದೇ ಇದ್ದಂಥವರಿಗೆ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡಬೇಕು. ಭಾಷಣ ಮಾಡಿದವರಿಗೇ ಅವಕಾಶ ಕೊಟ್ಟರೆ ಮತ್ತೆ ಭಾಷಣ ಆಗುತ್ತದೆ.

ಶ್ರೀ ವಿನಯ ಕುಮಾರ್ ಸೊರಕೆ.—ಡೊಮೆಸ್ಟಿಕ್ ಪರ್ಪಸ್‌ಗೆ ಯಾವ ರೇಟಿನಲ್ಲಿ ಕೆರೋಸಿನ್ ಕೊಡುತ್ತಿದ್ದೀರಿ ಅದೇ ರೇಟಿನಲ್ಲಿ ವ್ಯವಸಾಯಕ್ಕೋಸ್ಕರ ಉಪಯೋಗ ಮಾಡುವಂಥ ಕೆರೋಸಿನ್‌ಗೂ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ವಿ. ದೇಶಪಾಂಡೆ.—ಈಗ ತಾವು ಸ್ಕೇರ್ಸಿಟಿ ಕಿಟ್ ಮತ್ತು ಬೀಜದ ಬಗ್ಗೆ ಪ್ರಸ್ತಾಪ ಮಾಡಿದಿರಿ. ಇಲ್ಲಿ ನಮ್ಮ ಉದ್ದೇಶ ಏನಿದೆಯೆಂದರೆ ಈ ರಾಜ್ಯದಲ್ಲಿ ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳ ಬೆಳೆ ಹೆಚ್ಚಾಗಬೇಕು, ಅದರಿಂದ ರೈತರಿಗೆ ದರ ಸಿಗಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಕೇಂದ್ರ ಸರ್ಕಾರದ ಒಂದು ಆಜ್ಞೆ ಪ್ರಕಾರ ಎಲ್ಲೆಲ್ಲಿ ಕ್ರಾಪ್ ಇನ್ಶೂರೆನ್ಸ್ ಮಾಡಿದ್ದಾರೆ. ಅಲ್ಲಿ ಸ್ಕೇರ್ಸಿಟಿಯಲ್ಲಿ ಯಾವ ರೀತಿಯ ಕಿಟ್‌ಗಳನ್ನು ಕೊಡಬಾರದು ಎಂದು ಆಜ್ಞೆ ಇದೆ. ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ.

ಇದನ್ನು ಹೀಗಾಗಿ ರಿಲ್ಯಾಕ್ಸ್ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಓಪನ್ ವೆಲ್ ಮಾಡುವುದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ವ್ಯವಸ್ಥೆ ಮಾಡಿದ್ದೇವೆ. ಹರಿಜನರಿಗೆ ಹೆಚ್ಚಿನ ಸಬ್ಸಿಡಿ ಕೊಡುವುದಕ್ಕೆ ಕೂಡ ಪ್ರಯತ್ನ ಮಾಡಲಾಗುವುದು.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ಬರಗಾಲ ಪರಿಹಾರ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಹಣ ಬಿಡುಗಡೆ ಮಾಡಿದ್ದೀರಿ. ನಾರ್ತ್ ಕೆನರಾಗೆ ಜಾಸ್ತಿ ಹಣ ಕೊಟ್ಟಿದ್ದೀರಿ ನಾರ್ತ್ ಕೆನರಾದಲ್ಲಿ ಏತ ನೀರಾವರಿಗೆ ಹೆಚ್ಚು ಅವಕಾಶ ಮಾಡಿಕೊಟ್ಟಿದ್ದೀರಿ ತಮಗೆಲ್ಲಾ ಗೊತ್ತಿರುವಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊಡ್ಡ ನೀರಾವರಿಗೆ ಅವಕಾಶ ಇಲ್ಲ ವರಾಹಿ ಯೋಜನೆ ಇದ್ದರೂ ಆದ್ಯತೆ ಪ್ರಕಾರ ಕೆಲಸ ತೆಗೆದುಕೊಂಡಿಲ್ಲ. ವೆಂಟೆಡ್ ಡ್ಯಾಂಗಳಿಗೆ, ಏತನೀರಾವರಿ ಯೋಜನೆಗಳಿಗೆ ಅವಕಾಶ ಕೊಟ್ಟಿಲ್ಲ. ಕಿಟ್ಸ್ ಕೊಟ್ಟಿರುವುದು ಈಗೇನೂ ಪ್ರಯೋಜನವಾಗುವುದಿಲ್ಲ. ಸೌತ್ ಕೆನರಾ ಜಿಲ್ಲೆಯ ರೈತರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಸ್ಕೇರ್‌ಸಿಟಿ ಹಣವನ್ನು ಬಿಡುಗಡೆ ಮಾಡುವವರು ಕಂದಾಯ ಮಂತ್ರಿಯವರು. ಅಧಿಕಾರಿಗಳು ಕೊಟ್ಟಂಥ ವರದಿಗಳ ಆಧಾರದ ಮೇಲೆ ಹಣ ಬಿಡುಗಡೆ ಮಾಡುತ್ತಾರೆ. ಸೌತ್ ಕೆನರಾ ಜಿಲ್ಲೆಗೆ ಸ್ಪೆಷಲ್ ರೈಸ್ ಪ್ರೋಗ್ರಾಂಗೆ ಹಣ ಕೊಡಲಾಗಿದೆ. ಓಪನ್ ವೆಲ್ ಮತ್ತು ಬೋರ್ ವೆಲ್‌ಗಳಿಗೆ ಒಂದು ಕೋಟಿ ರೂಪಾಯಿಗಳ ಗ್ರ್ಯಾಂಟ್ ಕೊಟ್ಟಿದ್ದೇವೆ.

ಅಧ್ಯಕ್ಷರು.—ವಿವರಣೆ ಮತ್ತು ಉತ್ತರ ಮುಗಿಯಿತು.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ಮತ್ತು ತೋಟಗಾರಿಕಾ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೆ. ನನ್ನ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಸದಸ್ಯರುಗಳು ಅಷ್ಟು ಆಸಕ್ತಿಯಿಂದ ಭಾಗವಹಿಸಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಚರ್ಚೆಯನ್ನು ಪ್ರಾರಂಭ ಮಾಡಿದಂಥ ಲಕ್ಕಪ್ಪನವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ನಮ್ಮ ಇಲಾಖೆಯವರು ಬೇಕಾದಷ್ಟು ಗಿಡಗಳನ್ನು ಇಟ್ಟಿದ್ದಾರೆ ಅವರ ಪಕ್ಕದ ತಾಲ್ಲೂಕಿನಲ್ಲಿ. ವಿಶೇಷವಾಗಿ ಕೆಲಸ ನಡೆದಿದ್ದರೂ ಅದನ್ನು ಅವರು ಪ್ರಸ್ತಾಪ ಮಾಡಲಿಲ್ಲ. ಸದಸ್ಯರುಗಳು ಪ್ರಮುಖವಾದ ವಿಷಯದ ಬಗ್ಗೆ ಆಸಕ್ತಿ ವಹಿಸಲಿಲ್ಲ ಎನ್ನುವುದೇ ನನ್ನ ಭಾವನೆ. ರಾಜ್ಯದಲ್ಲಿ ೧೦೫ ಲಕ್ಷ ಹೆಕ್ಟೇರ್ ಭೂಮಿ ಕೃಷಿಗೆ ಒಳಪಟ್ಟಿದ್ದು ಇದರಲ್ಲಿ ೧೧,೪೧ ಲಕ್ಷ ಹೆಕ್ಟೇರ್ ಭೂಮಿ ತೋಟಗಾರಿಕೆ ವ್ಯಾಪ್ತಿಯಲ್ಲಿದ್ದು ೧೦.೮ ಪರ್ಸೆಂಟ್ ಭೂಮಿಯಲ್ಲಿ ಈಗ ತೋಟಗಾರಿಕೆ ಬೆಳೆಗಾಗಿ ಉಪಯೋಗ ಮಾಡಲಾಗುತ್ತಿದೆ ಇದನ್ನು ೮ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷಕ್ಕೆ ಸುಮಾರು ೧೫ ಪರ್ಸೆಂಟ್. ಭೂಮಿಯಲ್ಲಿ ತೋಟಗಾರಿಕೆಯ ಬೆಳೆಯನ್ನು ಅಂದರೆ ಸುಮಾರು ೧೬ ಲಕ್ಷ ಹೆಕ್ಟೇರ್ ಭೂಮಿಯನ್ನು ತೋಟಗಾರಿಕೆ ಭೂಮಿಯನ್ನಾಗಿ ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರದ ಮುಂದೆ ಇದೆ. ಕೃಷಿಯನ್ನು ಅವಲಂಬನೆ ಮಾಡಿರತಕ್ಕ ಜನರು ಕೂಡ, ಇದನ್ನು ಉಪಕಸುಬನ್ನಾಗಿ ಮಾಡಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ವೃದ್ಧಿ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ನನ್ನ ಕ್ಷೇತ್ರದಲ್ಲಿ ಕೇವಲ ೧೦ ಗುಂಟೆ ಜಮೀನಿನಲ್ಲಿ ದೊಡ್ಡ ಕುಟುಂಬವನ್ನು ಸಾಕತಕ್ಕ ನಿದರ್ಶನಗಳು ಇವೆ. ಕೆಲವು ಭಾಗದಲ್ಲಿ ನಾವು ನೋಡಿದಾಗ ಒಂದೇ ಭಾವಿಯಲ್ಲಿ ಸುಮಾರು ೬–೭ ಪಂಪುಸೆಟ್ಟು

೧-೦೦ ಪಿ.ಎಂ.

ಗಳನ್ನು ಹಾಕಿಕೊಂಡು ಅಣ್ಣತಮ್ಮಂದಿರು ಅಷ್ಟು ಜನವು ಉತ್ತಮವಾದ ಜೀವನ ನಡೆಸತಕ್ಕದ್ದನ್ನು ನೋಡಿದ್ದೇವೆ. ತರಕಾರಿ ಬೆಳೆಯನ್ನು ಬೆಳೆದು ಜೀವನ ಮಾಡತಕ್ಕ ದೃಷ್ಯವನ್ನು ಕಂಡಿದ್ದೇವೆ. ಇವನ್ನು ನೋಡಿದಾಗ ತೋಟಗಾರಿಕೆಯಿಂದ ಅಭಿವೃದ್ಧಿಯನ್ನು ಹೊಂದತಕ್ಕ ಕಾರ್ಯ ಉತ್ತಮವಾದದ್ದು ಎಂಬುದಾಗಿ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಜಲಾನಯನ ಪ್ರದೇಶದಲ್ಲೂ ಕೂಡ ತೋಟಗಾರಿಕಾ ಇಲಾಖೆ ಹೆಚ್ಚಿನ ರೀತಿಯಲ್ಲಿ ಭಾಗವಹಿಸುವಂತೆ ಕಾರ್ಯಕ್ರಮ ಗಳನ್ನು ಹಾಕಿಕೊಂಡಿರುವುದು ಬಹಳ ಪ್ರಮುಖವಾದ ವಿಷಯವಾಗಿದೆ. ೧೯೮೭-೮೮ನೇ ಸಾಲಿನಲ್ಲಿ ಸುಮಾರು ೩,೫೪೫ ಹೆಕ್ಟೇರ್‌ಗಳಷ್ಟು ಭೂಮಿಯಲ್ಲಿ ತೋಟಗಾರಿಕಾ ಇಲಾಖೆಯವರು ಭಾಗವಹಿಸಿ ಎಲ್ಲಾ ಜಲಾನಯನ ಪ್ರದೇಶದಲ್ಲೂ ಕೆಲಸ ಮಾಡಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ರೈತರೂ ಅದರಲ್ಲಿ ಭಾಗವಹಿಸಿ ರೈತರಿಗೆ ಅನುಕೂಲವನ್ನು ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ ಅಲ್ಲಿ ಪ್ರಮುಖವಾಗಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರು ಯಾರು ಇದ್ದಾರೆ ಅವರ ಜಮೀನಿನಲ್ಲೇ ನೆಡತಕ್ಕ ಸಸಿಗಳು ಇರಬಹುದು ಅದಕ್ಕೆ ಬೇಕಾದ ಇನ್‌ಪುಟ್ಸ್ ಇರಬಹುದು ಅವರೂ ಕೂಡ ಇದರಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದರಿಂದ ಅವರನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ಹಾಗೆ ಆಗುತ್ತದೆ. ಸಣ್ಣ ರೈತರು ಹಾಗೂ ಮಧ್ಯಮ ವರ್ಗದ ರೈತರ ಬಗ್ಗೆ ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಂಡು, ವಿಶೇಷವಾಗಿ ನಮ್ಮ ಸರ್ಕಾರ ಅವರ ಬಗ್ಗೆ ಆಸಕ್ತಿ ವಹಿಸಿದೆ. ಅದೇ ರೀತಿ ಒಣ ಬೇಸಾಯ ಅಭಿವೃದ್ಧಿ ಯೋಜನೆಯಲ್ಲಿ ತೋಟಗಾರಿಕೆಯನ್ನು ಸೇರಿಸಿ ಸಾಮಾನ್ಯವಾದ ರೈತರೂ ಅವರ ಜೀವನವನ್ನು ಉತ್ತಮಪಡಿಸುವುದಕ್ಕೆ ಅತ್ಯಂತ ಯಶಸ್ವಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಬಹಳ ಪ್ರಮುಖವಾಗಿ ಈ ಇಲಾಖೆಯ ಜವಾಬ್ದಾರಿ ಏನೆಂದರೆ ಹಣ್ಣಿನ ಗಿಡಗಳನ್ನು, ತೆಂಗಿನ ಸಸಿಗಳನ್ನು ಹಾಗೂ ಮತ್ತಿತರ ಶೃಂಗಾರಕ್ಕೆ ಬೇಕಾದ ಸಸಿಗಳನ್ನು ಬೆಳೆಸಿ ಹಂಚತಕ್ಕಂಥದ್ದು. ೧೯೮೭-೮೮ನೇ ಸಾಲಿನಲ್ಲಿ ಈ ರೀತಿ ೮೪ ಲಕ್ಷ ಸಸಿಗಳನ್ನು ಉತ್ಪಾದನೆ ಮಾಡಿ ಅವುಗಳನ್ನು ರೈತರಿಗೆ ಹಂಚಿದ್ದೇವೆ. ಈಗಲೂ ಕೂಡ ಹಂಚಿಕೆಗಾಗಿ ೩೦ ಲಕ್ಷ ಸಸಿಗಳು ತಯಾರಾಗಿ ರೆಡಿಯಾಗಿವೆ. ಮುಂದಿನ ಸಾಲಿಗೂ ಕೂಡ ಅಂದರೆ ೧೯೮೮-೮೯ಕ್ಕೆ ಸುಮಾರು ೯೦ ಲಕ್ಷ ಈ ರೀತಿಯ ಸಸಿಗಳನ್ನು ಉತ್ಪಾದನೆ ಮಾಡತಕ್ಕ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಇದರಲ್ಲಿ ಬಹಳ ಮುಖ್ಯವಾಗಿ ೫೨.೮ ಲಕ್ಷ ಹಣ್ಣಿನ ಸಸಿಗಳನ್ನು ಮತ್ತು ೧೩.೪ ಲಕ್ಷ ತೆಂಗಿನ ಸಸಿಗಳನ್ನು ಮತ್ತಿತರೆ ಕಾರ್ಡಮಮ್, ಪೆಪ್ಪರ್ ಸಸಿಗಳನ್ನು ಬೆಳೆಸುವುದಕ್ಕೂ ಕೂಡ ವಿಶೇಷವಾದ ಆಸಕ್ತಿಯನ್ನು ಇಲಾಖೆ ವಹಿಸಿದ್ದು ಆ ಕೆಲಸವನ್ನೂ ಅತ್ಯಂತ ಯಶಸ್ವಿಯಾಗಿ ಮಾಡುತ್ತಿದೆ. ಇದರ ಜೊತೆಗೆ ತರಕಾರಿ ಬೀಜಗಳು ಸುಮಾರು ೨೦ ೫೯೧ ಕೆ.ಜಿ. ಉತ್ಪಾದನೆ ಮಾಡಿ ವಿಶೇಷ ಘಟಕ ಯೋಜನೆಯಲ್ಲಿ ಅದನ್ನು ವಿತರಣೆ ಮಾಡಿದ್ದೇವೆ ಸುಮಾರು ೫೨೧ ಫಲಾನುಭವಿಗಳಿಗೆ ಗಿಡ ಮತ್ತು ಗೊಬ್ಬರ ಮತ್ತಿತರೆ ಸಲಕರಣೆ ಗಳನ್ನು ಕೊಟ್ಟಿದ್ದೇವೆ. ಇದಕ್ಕಾಗಿ ೮೯ ಲಕ್ಷ ರೂಪಾಯಿಗಳು ಖರ್ಚಾಗಿವೆ. ಅದೇ ರೀತಿ ಟ್ರೈಬಲ್ ಸಬ್‌ಪ್ಲಾನ್‌ನಲ್ಲಿ ಸುಮಾರು ೭೩೯ ಫಲಾನುಭವಿಗಳಿಗೆ ೨೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅವರ ಅಭಿವೃದ್ಧಿಯನ್ನು ಸಾಧನೆ ಮಾಡುವುಕ್ಕೆ ಪ್ರಯತ್ನ ಮಾಡಿದ್ದೇವೆ.

ಇನ್ನು ಹೊಸದಾಗಿ ಎಣ್ಣೆಯನ್ನು ತಯಾರು ಮಾಡತಕ್ಕ ಪಾಂ ಬೆಳೆಯುವುದಕ್ಕೆ ವಿಶೇಷವಾದ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಪ್ರಾಯೋಗಿಕವಾಗಿ ೫೦ ಸಾವಿರ ಹೆಕ್ಟೇರ್ ಭೂಮಿಯಲ್ಲಿ ಪಾಂ ಗಿಡಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಕೂಡ ಇದೆ. ಕಮಾಂಡ್ ಏರಿಯಾದಲ್ಲಿ ಸುಮಾರು ೧ ಸಾವಿರ ಹೆಕ್ಟೇರ್ ಭೂಮಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲು ೪-೫ ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆಯಿಲ್ ಪಾಂ ಗಿಡಗಳನ್ನು ಬೆಳೆಸಿ ಎಣ್ಣೆಯ ಉತ್ಪಾದನೆಯನ್ನು ಜಾಸ್ತಿ ಮಾಡಿ ಬೇರೆ ದೇಶಗಳಿಂದ ಈಗ ಏನು ಎಣ್ಣೆ ಯನ್ನು ತರಿಸುತ್ತಿದ್ದೇವೆ ಅದನ್ನು ಕಡಿಮೆ ಮಾಡಿ, ಇಲ್ಲೇ ಅಂತಹ ಗಿಡಗಳನ್ನು ಬೆಳೆಸಿ ಅದನ್ನು ಅಭಿವೃದ್ಧಿ ಮಾಡತಕ್ಕ ಯೋಜನೆ ಕೂಡ ನಮ್ಮ ಇಲಾಖೆಯಿಂದ ನಡೆದಿದೆ.

ಇನ್ನು ತೋಟಗಾರಿಕೆ ಬೆಳೆ ಬೆಳೆಯತಕ್ಕಂಥ ಬೆಳೆಗಾರರಿಗೆ ಅದನ್ನು ಮಾರ್ಕೆಟಿಂಗ್ ಮಾಡತಕ್ಕಂಥ ವಿಷಯದಲ್ಲಿ ಸಾಕಷ್ಟು ವ್ಯವಸ್ಥೆ ಇಲ್ಲ. ತೋಟಗಾರಿಕೆ ಅಭಿವೃದ್ಧಿ ಏನು ಇದೆ ಇದಕ್ಕೆ ಮಾರ್ಕೆಟಿಂಗ್ ಒಂದು ಮಾರ್ಗವಾಗಿದೆ. ಆ ಮಾರ್ಕೆಟ್ ವ್ಯವಸ್ಥೆಯನ್ನು ಸರಿಯಾಗಿ ಮಾಡುವುದರಿಂದ ನಿಜವಾಗಿಯೂ ಕೂಡ ಅದರ ಅಭಿವೃದ್ಧಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಅದರ

ನಿವಾರಣೆಗೋಸ್ಕರವಾಗಿ ಹಾರ್ಟಿಕಲ್ಚರ್ ಪ್ರೊಡ್ಯೂಸಿಂಗ್ ಮಾರ್ಕೆಟಿಂಗ್ ಮತ್ತು ಪ್ರೊಸೆಸಿಂಗ್ ಸೊಸೈಟಿಯನ್ನು ಎನ್. ಡಿ. ಡಿ. ಬಿ. ಯವರ ಸಹಕಾರದಿಂದ ೩೨ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಂದರೆ ಈಗ ಮಿಲ್ಕ್ ಉತ್ಪಾದಕರ ಸಹಕಾರ ಸಂಘಗಳು ಯಾವರೀತಿ ಕೆಲಸ ಮಾಡುತ್ತಿವೆ ಅದರ ಒಂದು ಮಾದರಿಯಲ್ಲಿ ತರಕಾರಿ ಬೆಳೆಯತಕ್ಕಂಥವರಿಗೆ ತರಕಾರಿ ಕಲೆಕ್ಟ್ ಮಾಡತಕ್ಕಂಥವರಿಗೆ, ಸಾಕಾಣಿಕೆ ಮಾಡುವವರಿಗೆ ಶೀತಲ ಗೃಹಗಳನ್ನು ನಿರ್ಮಾಣ ಮಾಡಿ ಬೇರೆ ಬೇರೆ ಕಡೆಯಿಂದ ಬರುವ ತರಕಾರಿಗೆ ಮಾರ್ಕೆಟ್ ಇರುವಂಥ ಜಾಗದಲ್ಲಿ ಅನುಕೂಲ ಮಾಡಿಕೊಡುವ ವ್ಯವಸ್ಥೆಯನ್ನು ೩೨ ಕೋಟಿ ರೂಪಾಯಿಗಳ ಯೋಜನೆಯ ಅಡಿಯಲ್ಲಿ ತರಲು ಈಗಾಗಲೇ ಎನ್. ಡಿ. ಡಿ. ಬಿ. ಯವರಿಗೆ ಕಳುಹಿಸಿ ಕೊಡಲಾಗಿದೆ. ಇದು ಇನ್ನು ೫ ವರ್ಷಗಳಲ್ಲಿಯೇ ಕಾರ್ಯಗತಗೊಳ್ಳುವ ಸಾಧ್ಯತೆ ಇರುತ್ತದೆ.

ಇನ್ನು ಆಸ್ಕಾಸ್ ಎಂದು ಹೇಳಿ ಹರಿಜನ ಬಂಧುಗಳಿಗೆ ಅವರ ಆರ್ಥಿಕ ಅಭಿವೃದ್ಧಿ ಸಾಧನೆ ಮಾಡು ವುದಕ್ಕೋಸ್ಕರವಾಗಿ ನಮ್ಮ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ಕರ್ನಾಟಕ ಸರ್ಕಾರಕ್ಕೂ ಕೊಟ್ಟಿದ್ದಾರೆ. ಇದರಿಂದ ಸುಮಾರು ೩-೪ ಸಾವಿರ ಜನರಿಗೆ ಅನುಕೂಲವಾಗಬಹುದು. ಆದ್ದರಿಂದ ರಂಗಸ್ವಾಮಿ ಗುಡ್ಡದಲ್ಲಿ ಐದುನೂರು ಎಕರೆ ಮತ್ತು ಗಾಜಿನ ಮನೆಯಲ್ಲಿ ಹೂವುಗಳನ್ನು ಬೆಳೆಯತಕ್ಕಂಥ ಯೋಜನೆಯನ್ನು ಕನ್ನಮಂಗಲದಲ್ಲಿ ಕಾರ್ಯಗತ ಮಾಡತಕ್ಕಂಥ ಸ್ಟೇಜ್‌ನಲ್ಲಿ ಇದ್ದೇವೆ. ನಮ್ಮ ಅಧಿಕಾರಿಗಳನ್ನು ಕೂಡ ಅಲ್ಲಿಗೆ ಕಳುಹಿಸಿ ಕೊಟ್ಟಿದ್ದೇವೆ. ರಂಗಸ್ವಾಮಿ ಗುಡ್ಡದ ಇನ್ನೂರು ಎಕರೆಯಲ್ಲಿ ನಿರ್ಮಾಣ ಮಾಡತಕ್ಕಂಥ ಉತ್ಸಾಹದಲ್ಲಿದ್ದೇವೆ. ಇಲ್ಲಿ ತೆಗೆದಿರುವ ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರು ದೊರಕಿರುತ್ತದೆ. ಈ ಯೋಜನೆ ಅತ್ಯಂತ ಯಶಸ್ವಿಯಾದ ಯೋಜನೆಯಾಗಿದ್ದು ಇದರಿಂದ ಹರಿಜನ ಮತ್ತು ಗಿರಿಜನರಿಗೆ ಅತ್ಯಂತ ಉತ್ತಮವಾದ ಅವಕಾಶವನ್ನು ಕಲ್ಪಿಸಿಕೊಡುತ್ತದೆಂದು ಹೇಳುತ್ತೇನೆ. ಪರಿಶಿಷ್ಟ ಜಾತಿಯವರಿಗೆ ಅನುಕೂಲವಾಗುವಂಥ ಈ ಒಂದು ಕೆಲಸವನ್ನು ಕೇಂದ್ರ ಸರ್ಕಾರದ ಸಹಾಯವನ್ನು ತೆಗೆದುಕೊಂಡು ಒಂದು ಉತ್ತಮವಾದ ಕೆಲಸವನ್ನು ಮಾಡಿದ್ದೇವೆ,

ಮತ್ತೊಂದು ವಿಷಯ ನಾನು ಹೇಳುವುದಾದರೆ ರಾಜ್ಯದಲ್ಲಿ ಮಾರ್ಕೆಟಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿದರೆ ತೋಟಗಾರಿಕೆ ಇಲಾಖೆ ಅಭಿವೃದ್ಧಿ ಸಾಧನೆ ಮಾಡಿದಂತಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಮಾರ್ಕೆಟ್ ಸಿಕ್ಕದಿದ್ದರೆ ರೈತರಿಗೆ ಬೆಳೆಯನ್ನು ಬೆಳೆಯತಕ್ಕಂಥ ಉತ್ಸಾಹ ಹೊರಟು ಹೋಗುತ್ತದೆ. ವರ್ಲ್ಡ್ ಬ್ಯಾಂಕ್ ಸಹಾಯ ತೆಗೆದುಕೊಳ್ಳುವುದು ೫೦ ಕೋಟಿ ರೂಪಾಯಿಗಳು ಇದು ಇಡೀ ರಾಜ್ಯಕ್ಕೆ ಸೇರಿರುವುದು, ಎನ್.ಡಿ.ಡಿ.ಬಿ. ಯಿಂದ ಸಹಾಯವನ್ನು ಪಡೆಯುವುದು ಬೆಂಗಳೂರು ಸುತ್ತಮುತ್ತಲಿಗೆ ಸೇರಿರುವುದು. ವರ್ಲ್ಡ್ ಬ್ಯಾಂಕ್ ಇದು ಇಡಿ ರಾಜ್ಯಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಶೇಖರಣೆ, ಸಾಕಾಣಿಕೆ, ಶೀತಗಾರಕ್ಕೆ ಕೇಂದ್ರ ಜಾಗತಿಕ ಬ್ಯಾಂಕ್‌ನಿಂದ ಹಣ ಸಹಾಯವನ್ನು ಕೊಡು ವಂಥದ್ದಾಗಿರುತ್ತದೆ. ಈ ಎರಡು ಯೋಜನೆಗಳು ಬಂದಲ್ಲಿ ತೋಟಗಾರಿಕೆ ಇಲಾಖೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನು ತೋಟಗಾರಿಕೆಗೆ ಸಂಬಂಧಪಟ್ಟ ಹಾಗೆ ತೆಂಗು ಮುಂತಾದ ಬೆಳೆಗಳಿಗೆ ಬೀಳುವ ರೋಗಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳದಿ ಎಲೆ ರೋಗ, ಮತ್ತು ಕಪ್ಪುತಲೆ ಹುಳುವಿನ ರೋಗ ಎಂದು ಬರುತ್ತದೆ. ಇದನ್ನು ನಿರ್ಮೂಲ ಮಾಡುವುದಕ್ಕೆ ವಿಶೇಷವಾದ ಕೆಲವು ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ವರು ಹಾಕಿಕೊಂಡಿದ್ದಾರೆ.

ಕೇಂದ್ರ ತೆಂಗು ಮಂಡಳಿಯ ನೆರವಿನಿಂದ ತಿಪಟೂರಿನಲ್ಲಿ ಒಂದು ಪ್ರಯೋಗ ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಹಣದ ಕೊರತೆ ಬಂದರೆ ಅಲ್ಲಿನ ಮಾರುಕಟ್ಟೆ ಸಮಿತಿಯವರು ಎಷ್ಟು ಹಣವನ್ನಾದರೂ ಕೊಡುವುದಕ್ಕೆ ತಯಾರಿದ್ದಾರೆ. ಏಕೆಂದರೆ ಇದು ಬಹಳ ಅವಶ್ಯಕವಾಗಿದೆ. ತಮಗೆ ಗೊತ್ತಿರುವ ಹಾಗೆ ತಿಪಟೂರಿನಲ್ಲಿ ಕೊಬ್ಬರಿ ಹೆಚ್ಚಿನ ವ್ಯಾಪಾರ ವಾಗುವುದರಿಂದ ಅವರಿಗೆ ತೆಂಗು ವ್ಯಾಪಾರಕ್ಕೆ ಮುಖ್ಯ ಆಧಾರ. ಆ ದೃಷ್ಟಿಯಿಂದ ಅವರು ಎಷ್ಟು ಹಣವನ್ನಾದರೂ ಕೊಟ್ಟು ಈ ಪ್ರಯೋಗ ಶಾಲೆಯನ್ನು ಸ್ಥಾಪಿಸಲಿಕ್ಕೆ ಮತ್ತು ಕ್ರಿಮಿನಾಶಕಗಳನ್ನು ಉಪಯೋಗಿಸಿ ರೋಗವನ್ನು ನಿರ್ಮೂಲನ ಮಾಡುವುದಕ್ಕೆ ತಯಾರಿದ್ದಾರೆ. ಜನಸಂಖ್ಯೆ ಬೆಳೆದ ಹಾಗೆಲ್ಲ ಪಾರ್ಕುಗಳ ಮತ್ತು ಬ್ರೀತಿಂಗ್ ಸ್ಪೇಸ್‌ನ ಅವಶ್ಯಕತೆ ಬಹಳವಾಗಿರುವುದರಿಂದ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮತ್ತೀಕೆರೆಯಲ್ಲಿ ೧೦೩ ಎಕರೆ ಪ್ರದೇಶದ ಒಂದು ಪಾರ್ಕಿನ ಉದ್ಘಾಟನೆ ಮಾಡಿ ದ್ದಾರೆ. ಅಲ್ಲಿ ಈಗಾಗಲೇ ಕೆಲಸವನ್ನು ಪ್ರಾರಂಭಿಸಿದ್ದೇವೆ. ರೀಜಿನಲ್ ಪಾರ್ಕ್ಸ್ ಎಂದು ಮೂರು ಕಡೆಗಳಲ್ಲಿ ಮಾಡಬೇಕೆಂದು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ದಕ್ಷಿಣ, ಪೂರ್ವ ಮತ್ತು

ಪಶ್ಚಿಮ ಭಾಗಗಳಲ್ಲಿ ಅಂದರೆ ಮುಖ್ಯ ಮಂತ್ರಿಗಳ ಸೂಚನೆಯಂತೆ ಚನ್ನಪ್ಪನ ಹಳ್ಳಿ ಕೆರೆ ಅವರಣದಲ್ಲಿ ೩೮.೨೨ ಎಕರೆ, ದೊಡ್ಡ ನಕುಂಡಿಕೆರೆ ಅವರಣದಲ್ಲಿ ೩೫.೧೦ ಎಕರೆ ಹಾಗೂ ಹೊನ್ನಕೆರೆಹಳ್ಳಿ ಅವರಣದಲ್ಲಿ ೩೨೭.೮೮ ಎಕರೆ ಸರ್ಕಾರಿ ಭೂಮಿಯನ್ನು ಆಯ್ಕೆ ಮಾಡಿ ರೀಜನಲ್ ಪಾರ್ಕ್‌ಗಳನ್ನು ಮಾಡುವುದಕ್ಕೆ ಕ್ರಮ ಕೈಕೊಂಡಿದ್ದೇವೆ. ಲಾಲ್‌ಬಾಗ್‌ನೊಳಗೆ ೩೦ ಎಕರೆ ಪ್ರದೇಶದಲ್ಲಿ ರೋಸ್ ಗಾರ್ಡನ್ ಅನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಯೋಜನೆ ಮಾಡಿದ್ದೇವೆ, ಅದಕ್ಕೋಸ್ಕರ ಸಾಕಷ್ಟು ಪ್ಲಾನ್‌ಗಳನ್ನು ತಯಾರು ಮಾಡಿ ೨ ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಗಳು ಇಷ್ಟಿವೆ ಅನೇಕ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವುಗಳಿಗೆ ನಾನು ಈಗ ಉತ್ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಿಪಟೂರಿನಲ್ಲಿ ಕಪ್ಪುತಲೆ ರೋಗ ವಿಪರೀತ ಹರಡುತ್ತಿರುವುದರಿಂದ ಕಾರಸೆಡ್ಡಹಳ್ಳಿ ಎಂಬ ಇಡೀ ಗ್ರಾಮವನ್ನು ಪೆಸ್ಟಿಸೈಡ್ ಅಕ್ಟ್‌ನೊಳಗೆ ತಂದು ಸಂಪೂರ್ಣವಾಗಿ ಎಲ್ಲಾ ಮರಗಳಿಗೂ ಇಲಾಖೆಯವರೇ ಔಷಧಿಗಳನ್ನು ಸಿಂಪಡಿಸಿ ರೋಗವನ್ನು ಸಂಪೂರ್ಣವಾಗಿ ನಿರ್ನಾಮ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇಲ್ಲದಿದ್ದರೆ ಇದು ಶೀಘ್ರವಾಗಿ ಎಲ್ಲಾ ಕಡೆ ಹರಡತಕ್ಕ ರೋಗವಾದುದರಿಂದ ಮತ್ತು ಆ ಗ್ರಾಮದಲ್ಲಿ ಸಣ್ಣ ಸಣ್ಣ ರೈತರು ಮತ್ತು ಬಡವರು ಇರುವುದರಿಂದ ಆ ಗ್ರಾಮವನ್ನು ಪೆಸ್ಟಿಸೈಡ್ಸ್ ಆಕ್ಟ್ ಕೆಳಗಡೆ ತಂದು ಆ ಗ್ರಾಮದಲ್ಲಿ ಎಲ್ಲೆಲ್ಲಿ ಔಷಧಿಗಳನ್ನು ಸಿಂಪಡಿಸಿ ಆ ಖರ್ಚನ್ನು ರೆವಿನ್ಯೂ ರೂಪದಲ್ಲಿ ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ. ಅದೇ ರೀತಿ ಬೇರೆ ಗ್ರಾಮಗಳಿಗೂ ಅಪ್ಲೈ ಮಾಡುವುದರಲ್ಲಿದ್ದೇವೆ. ಮಾನ್ಯ ಬಚ್ಚೇಗೌಡರು, ಲಕ್ಕಪ್ಪನವರು, ಎಡಿಯೂರಪ್ಪನವರು ಮಾತನಾಡತಕ್ಕ ಸಂದರ್ಭದಲ್ಲಿ ಕೃಷಿಗೆ ಆದ್ಯತೆ ಕೊಟ್ಟು ಮಾತನಾಡಿದರು. ಇದೂ ಕೂಡ ಅವರ ಮನಸ್ಸಿನಲ್ಲಿತ್ತು ಎಂದು ಕಾಣುತ್ತದೆ. ಆದರೆ ಸಮಯಾಭಾವದಿಂದ ಮಾತನಾಡಿಲಿಲ್ಲವೆಂದು ಕಾಣುತ್ತದೆ. ಬಚ್ಚೇಗೌಡರು ಪ್ರತಿ ತಾಲ್ಲೂಕು ಅಧಿಕಾರಿಗಳಿಗೂ ವಾಹನ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ನಾವು ಈಗಾಗಲೇ ಅವರ ಒಂದು ಕಷ್ಟವನ್ನು ಅರಿತುಕೊಂಡು ಜಿಲ್ಲಾ ಪರಿಷತ್ತಿನ ವಾಹನವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ನೀಡಿ, ಯಾವುದೇ ಕೆಲಸಕ್ಕೆ ತೊಂದರೆ ಆಗದ ರೀತಿಯಲ್ಲಿ ವಾಹನವನ್ನು ಸರಬರಾಜು ಮಾಡುವುದಕ್ಕೆ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಹೋಗಿದೆ. ವಾಹನಗಳ ತೊಂದರೆಯಿಂದ ಅಥವಾ ವಾಹನಗಳು ಇಲ್ಲವೆಂಬ ಕಾರಣದಿಂದ ಯಾವುದೇ ಒಂದು ಇಲಾಖೆಯ ಚಟುವಟಿಕೆ ಕಡಿಮೆ ಆಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಆದಷ್ಟು ಬೇಗ ಅವಶ್ಯಕವಾಗಿ ಬೇಕಾದ ಕಡೆ ವಾಹನವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅವರ ಹೊಸಕೋಟೆ ಫಾರಮ್‌ನಲ್ಲಿ ತೆಂಗಿನ ಗಿಡ ಹಾಳಾಗಿದೆ ಎಂದು ಹೇಳಿದ್ದಾರೆ. ಅಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮಿನಲ್ಲಿ ನೀರು ಒದಗುತ್ತಿತ್ತು. ಅಲ್ಲಿರುವ ಕೆರೆಗೆ ಏಳೆಂಟು ವರ್ಷಗಳಿಂದ ನೀರು ಬರದೇ ಇರತಕ್ಕ ಸಂದರ್ಭ ಬಂದು ಮರಗಳೆಲ್ಲಾ ಹಾಳಾಗಿವೆ. ಅದಕ್ಕೋಸ್ಕರ ಬೋರ್‌ವೆಲ್ ಹಾಕಿ ಮರಗಳನ್ನು ಮತ್ತೆ ಅಭಿವೃದ್ಧಿಗೆ ತರುವುದಕ್ಕೆ ಪ್ರಯತ್ನವನ್ನು ಈಗಾಗಲೇ ಮಾಡಿದ್ದೇವೆ. ತೋಟಗಾರಿಕೆ ಇಲಾಖೆಯಿಂದ ಬರೀ ಖರ್ಚೇ ಆಗುತ್ತದೆ, ವಾಪಸ್ ಏನು ಬರುತ್ತದೆ ಎಂಬ ವಿಷಯ ಗೊತ್ತಾಗುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ೧ ಕೋಟಿ ರೂಪಾಯಿಗಿಂತ ಹೆಚ್ಚು ಆದಾಯ ಬರುತ್ತಿದೆ. ಮಾರಾಟದಿಂದ ೧ ಕೋಟಿ ರೂಪಾಯಿಗಿಂತ ಹೆಚ್ಚು ಆದಾಯ ಬರುತ್ತದೆ ಪ್ರತಿವರ್ಷ ಎಂಬ ವಿಷಯವನ್ನು ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮಾನ್ಯ ವೆಂಕಟರಾಮಯ್ಯನವರು ತೆಂಗಿನ ಸಸಿಯನ್ನು ೮ ರೂಪಾಯಿಗೆ ಮಾರುತ್ತಿದ್ದಾರೆ, ಅದನ್ನು ೫ ರೂಪಾಯಿಗೆ ಇಳಿಸಿದರೆ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ರೈತರಿಗೆ ಅನುಕೂಲ ಆಗುತ್ತದೆಂದು ನಾವು ೫ ರೂಪಾಯಿ ಇಟ್ಟಿದ್ದರೆ ೩ ರೂಪಾಯಿ ಮಾಡಬೇಕು ಎಂದು ಹೇಳುತ್ತಿದ್ದರು ಎಂದು ಕಾಣಿಸುತ್ತದೆ. ನಮಗೆ ಅದನ್ನು ಬೆಳೆಸತಕ್ಕ ಕಾಸ್ಟ್ ೭ ರೂಪಾಯಿ ಬೀಳುತ್ತಿದೆ. ಅದನ್ನು ಸಾಕಿ ಸಲಹಿ ಸರಿಯಾಗಿ ಕೊಡಬೇಕಾಗುತ್ತದೆ. ಕೆಲವರಿಗೆ ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್, ಬೇರೆ ಬೇರೆ ಯೋಜನೆಗಳಲ್ಲಿ ಪುಕ್ಕಸಟ್ಟೆ ಕೊಡತಕ್ಕದ್ದೇ ಜಾಸ್ತಿ. ಮಾರ್ಕೆಟ್ಟಿನಲ್ಲಿ ಇದೇ ತೆಂಗಿನ ಸಸಿಗೆ ೧೫ ರಿಂದ ೨೫ ರೂಪಾಯಿಗಳ ವರೆಗೆ ಇದೆ. ಬಹಳ ನಂಬಿಕೆ ಇರತಕ್ಕವರು ಬೆಳೆಸಿರತಕ್ಕ ಸಸಿಗಳನ್ನೇ ೨೫ ರೂಪಾಯಿಗಿಂತ ಕಡಿಮೆ ಕೊಡುವುದಿಲ್ಲ. ಅಂಥ ಸಂದರ್ಭದಲ್ಲಿ ನಾವು ಅತ್ಯಂತ ಆಸಕ್ತಿ ವಹಿಸಿ ಅದಕ್ಕೋಸ್ಕರ ಸ್ಪೆಷಲ್ ಸೆಲ್ ಮಾಡಿ ಮರಗಳನ್ನು ಐಡೆಂಟಿಫೈ ಮಾಡಿ ತೆಂಗಿನ ಕಾಯಿ ಸರಿಯಾಗಿದೆಯೇ ಎಂಬುದನ್ನು ಟೆಸ್ಟ್ ಮಾಡಿ ನರ್ಸರಿಯಲ್ಲಿ ಹೋಗಿ ನೋಡಿ ಸರಿಯಾಗಿಲ್ಲದಿದ್ದರೆ ಅದನ್ನು ನಾಶ ಮಾಡಿ ಯಾವ ರೀತಿಯಲ್ಲೂ ರೈತರಿಗೆ ಅಂಥದ್ದನ್ನು ಹಂಚಬಾರದು ಬೆಳೆದಮೇಲೆ ಅವನು ನಷ್ಟ ಅನುಭವಿಸುವುದಕ್ಕೆ ಮತ್ತು ಅದರಿಂದ ಅವನ

ಅವನತಿಗೆ ಕಾರಣ ಆಗಬಾರದು ಎಂದು ಮಾಡುತ್ತಿದ್ದೇವೆ, ಅದು ಆರೇಳು ವರ್ಷಗಳ ನಂತರದ ಬೆಳೆ. ಆರೇಳು ವರ್ಷ ಬೆಳೆಸಿದ ಮೇಲೆ ಅದರ ಪ್ರತಿಫಲ ಸಿಗದಿದ್ದರೆ ಅವರು ಹಾಳಾಗುತ್ತಾರೆ ಎಂಬ ದೃಷ್ಟಿಯಿಂದ ಯಾವ ಕಾರಣದಿಂದಲೂ ಕೆಟ್ಟ ಸಸಿಗಳನ್ನು ಹಂಚುವುದಕ್ಕೆ ಅವಕಾಶ ಇಲ್ಲದೇ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ವೆಂಕಟರಾಮಯ್ಯನವರಿಗೆ ಹೇಳುತ್ತಿದ್ದೇನೆ. ಹಿಂದೆ ಮಾವಿನ ಸಸಿಗಳನ್ನು ೧೮ ರೂಪಾಯಿಗೆ ಕೊಂಡುಕೊಂಡಿದ್ದಾರೆ ಎಂಬ ವಿಷಯ ಹೇಳಿದ್ದಾರೆ. ಇದು ಡ್ರೈಲ್ಯಾಂಡ್ ಡೆವಲಪ್ಮೆಂಟ್ ಬೋರ್ಡಿನವರು ನೇರವಾಗಿ ನಮ್ಮ ಸಹಕಾರವನ್ನು ಕೇಳಿ ಆಯ್ಕೆ ಮಾಡಿ ಕೊಟ್ಟಿರುವುದು ಬಿಟ್ಟರೆ ಕೋ-ಆಪರೇಟೀವ್ ಸೊಸೈಟಿಯಿಂದ ಅಲ್ಲೇ ತೆಗೆದುಕೊಂಡಿದ್ದಾರೆ. ಬೇರೆ ಕಡೆ ವಿಚಾರಿಸಿ ಸಸಿಗಳು ಸಿಗದೇ ಇರುವ ಕಾರಣದಿಂದ ಮಾವಿನ ಸಸಿಗಳನ್ನು ತೆಗೆದುಕೊಂಡಿದ್ದಾರೆ. ಕೆಲವು ಜಾತಿ ಮಾವಿನ ಸಸಿಗಳಿಗೆ ೨೫ ರೂಪಾಯಿಗಳ ಬೆಲೆ ಇದೆ. ಆದರೆ ಇಲ್ಲಿ ೯ ರಿಂದ ೧೧ ರೂಪಾಯಿಗೆ ಖರೀದಿಸಿರುವುದರಲ್ಲಿ ಯಾವ ಮೋಸ ಅಥವಾ ಬೇರೆ ಏನೂ ಆಗಿಲ್ಲ ಎಂಬ ವಿಷಯವನ್ನು ವೆಂಕಟರಾಮಯ್ಯನವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ತೆಂಗಿಗೆ ಸಪೋರ್ಟ್ ಪ್ರೈಸ್ ಕೊಡಬೇಕೆಂದು ಕೇಳುತ್ತಿದ್ದಾರೆ. ತೆಂಗಿನ ಬೆಳೆ ಈಗ ಕಮರ್ಷಿಯಲ್ ಕ್ರಾಪ್ ಆಗಿದೆ. ಮೂರು ರೂಪಾಯಿಗಿಂತ ಕಡಿಮೆ ತೆಂಗಿನಕಾಯಿ ಬೆಲೆ ಆಗಿಲ್ಲ. ರೋಗ ರುಜಿನಗಳು ಬರದೇ ಇರದಂಥ ರೀತಿಯಲ್ಲಿ ಬೆಳೆ ಬೆಳೆಸಿದರೆ ತೆಂಗಿನ ಬೆಳೆಯಿಂದ ನಷ್ಟವಾಗುವುದಿಲ್ಲ. ಆದ್ದರಿಂದ ಅದಕ್ಕೆ ಸಪೋರ್ಟ್ ಪ್ರೈಸ್ ಕೊಡುವ ಪರಿಸ್ಥಿತಿ ಬರುವುದಿಲ್ಲ ಎಂಬುದು ನನ್ನ ಅನಿಸಿಕೆ.

ಮಾನ್ಯ ಸದಸ್ಯರಾದ ಭೂಪತಿಯವರು ಮಾತನಾಡುತ್ತಾ, ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಮಾತ್ರ ಈ ತೋಟಗಾರಿಕೆಗೆ ಅನುಕೂಲವಿದ್ದರೆ ಸಾಲದು. ಒಳ್ಳೆಯ ಮಾಲು ಮತ್ತು ರೈತರು ಬೆಳೆದಂಥ ಒಳ್ಳೆಯ ತರಕಾರಿಯನ್ನು ಕೃಷ್ಣರಾಜೇಂದ್ರ ಮಾರ್ಕೆಟ್, ಅಥವಾ ಮೈಸೂರಿನ ಮಾರ್ಕೆಟ್‌ಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ, ಆನಂತರ ಉಳಿದದ್ದನ್ನು ಬೇರೆಬೇರೆ ಸೊಸೈಟಿಗಳಿಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಇದರಿಂದಾಗಿ ಕೊಂಡುಕೊಳ್ಳುವವರಿಗೆ ಒಳ್ಳೆಯ ತರಕಾರಿಯೇ ಸಿಕ್ಕುವುದಿಲ್ಲ ಎಂದು ಹೇಳಿದರು. ಅವರು ಹೇಳಿದ್ದುದು ಸ್ವಲ್ಪಮಟ್ಟಿಗೆ ನಿಜವಿರಬಹುದು ಏಕೆಂದರೆ ಸಾಮಾನ್ಯವಾಗಿ ಯಾವ ರೈತನೇ ಆಗಲಿ ತಾನು ಬೆಳೆದ ಒಳ್ಳೆಯ ಮಾಲಿಗೆ ಎಲ್ಲಿ ಒಳ್ಳೆಯ ಬೆಲೆ ಸಿಕ್ಕುತ್ತದೆ, ಎಲ್ಲಿ ಹೆಚ್ಚು ಬೆಲೆ ಬರುತ್ತದೆ ಅಲ್ಲಿಗೆ ತೆಗೆದುಕೊಂಡು ಹೋಗುವುದು ಸ್ವಾಭಾವಿಕ. ಇದನ್ನು ನಾವು ಗಮನಿಸಿ ಏನು ಮಾಡಿದ್ದೇವೆ ಎಂದರೆ ೧೦ ಗಂಟೆಯ ಮೇಲೆ ತರತಕ್ಕ ಯಾವ ತರಕಾರಿಯನ್ನೂ ಕೂಡ ಯಾವ ಸೊಸೈಟಿ ಏನೂ ತೆಗೆದುಕೊಳ್ಳಬಾರದೆಂದು ಮಾಡಿದ್ದೇವೆ. ಒಂದು ವೇಳೆ ಯಾರಾದರೂ ೧೦ ಗಂಟೆಯ ಮೇಲೆ ತರಕಾರಿಯನ್ನು ತಂದರೆ ಆ ಸೊಸೈಟಿಯವರು ತೆಗೆದುಕೊಳ್ಳುವುದಿಲ್ಲ. ಈ ವಿಚಾರದಲ್ಲೂ ಕೂಡ ನಾವು ಒಂದು ಸೂಕ್ತ ಯೋಚನೆಯನ್ನು ಮಾಡುತ್ತಿದ್ದೇವೆ.

ಇನ್ನು ದಾಳಿಂಬೆ ಮರಗಳಿಗೆ ಹಕ್ಕಿಗಳು ಬಂದು ಕುಳಿತುಕೊಂಡು ದಾಳಿಂಬೆ ಹಣ್ಣುಗಳನ್ನೆಲ್ಲಾ ತಿಂದುಹಾಕಿ ನಷ್ಟವನ್ನುಂಟು ಮಾಡುತ್ತಿವೆ, ಇದರ ಬಗ್ಗೆ ಏನು ಮಾಡಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಕಡೆಯಲ್ಲೂ ಇದೇ ರೀತಿ ಇದೆ. ನಮ್ಮ ಮನೆಯ ದಾಳಿಂಬೆ ಮರಕ್ಕೂ ಹಕ್ಕಿಗಳು ಬಂದು ತಿಂದು ಹೋಗುತ್ತವೆ. ಇದಕ್ಕೆ ನಾವು ಏನು ಮಾಡಬಹುದು ಎಂದರೆ ದಾಳಿಂಬೆ ಹಣ್ಣುಗಳಿಗೆ ಪ್ಲಾಸ್ಟಿಕ್ ಪೇಪರ್‌ನ್ನು ಸುತ್ತಬಹುದು, ಇಲ್ಲವೇ ಇಡೀ ಮರಕ್ಕೆ ಗಾರ್ಡ್ ಮಾಡಬಹುದು.

ಇನ್ನು ಪದಾರ್ಥಗಳನ್ನು ಹರಾಜು ಮಾಡುವುದರಲ್ಲಿ ಮೋಸ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಕಡೆ ಇದನ್ನು ನಾವು ಪರಿಶೀಲಿಸಿದ್ದೇವೆ. ಅದನ್ನು ನಾವು ಒಪ್ಪುತ್ತೇವೆ. ನೆಲಮಂಗಲದ ಹತ್ತಿರ ಇರತಕ್ಕ ಒಂದು ಫಾರಂ ಹಾಗೆಯೇ ಇದೆ. ಮೊದಲು ೧೧೩ ಸಾವಿರಕ್ಕೆ ಹರಾಜಾಗಿತ್ತು. ಅದನ್ನು ಕ್ಯಾನ್ಸಲ್ ಮಾಡಿ ಮತ್ತೆ ಹರಾಜು ಹಾಕಿದಾಗ ೩೨ ಸಾವಿರಕ್ಕೆ ಹೋಯಿತು ಮತ್ತೆ ಅದನ್ನೂ ಕ್ಯಾನ್ಸಲ್ ಮಾಡಿ ಪುನಃ ಹರಾಜು ಮಾಡಿದಾಗ ಅದು ೫೮ ಸಾವಿರ ರೂಪಾಯಿಗೆ ಹೋಗಿದೆ. ಈ ರೀತಿ ಅನುಮಾನ ಬಂದ ಕಡೆಗಳಿಗೆ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿ ಅದರ ನಿಜವಾದ ಬೆಲೆ ಎಷ್ಟಾಗಬಹುದೆಂದು ಅಂದಾಜು ಮಾಡಿಸಿ ಅಷ್ಟು ಬೆಲೆ (ಹರಾಜು) ಬರುವವರೆಗೂ ಅದನ್ನು ಹಾಗೆಯೇ ಇಡುವಂತೆ ನಮ್ಮ ಇಲಾಖೆಯವರಿಗೆ ತಿಳಿಸಿದ್ದೇವೆ. ಇನ್ನು ಇಕ್ಬಾಲ್ ಎನ್ನತಕ್ಕ ಒಬ್ಬರು ಡಿ. ಹೆಚ್. ಓ. (ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಆಫೀಸರ್) ಅಮಾನತ್ತಿನಲ್ಲಿದ್ದಾಗ ಹೊರದೇಶಕ್ಕೆ ಹೋಗಿ ಹೆಚ್ಚಿನ ಹಣವನ್ನು ಸಂಪಾದನೆ ಮಾಡಿಕೊಂಡು ಬಂದಿದ್ದಾರೆಂದು ಹೇಳಿದ್ದಾರೆ. ಆದರೆ ಅವರು ಹೊರದೇಶಕ್ಕೆ ಹೋಗಿ ಬಂದಿರತಕ್ಕದ್ದು ಇಲಾಖೆಯ

ಗಮನಕ್ಕಾಗಲಿ, ಸರ್ಕಾರದ ಗಮನಕ್ಕಾಗಲಿ ಬಂದಿಲ್ಲ. ಅವರು ರಾಜ್ಯದಿಂದ ಹೊರಗೆ ಹೋಗುವುದಕ್ಕೆ ಯಾವುದೇ ರೀತಿಯ ಅನುಮತಿಯನ್ನೂ ಇಲಾಖೆಯು ಕೊಟ್ಟಿಲ್ಲ. ಈಗ ಮಾನ್ಯ ಸದಸ್ಯರು ಹೇಳಿರುವುದರಿಂದ ತಕ್ಷಣವೇ ಇದನ್ನು ಎನ್‌ಕ್ವೈರಿ ಮಾಡಿಸಿ ಇದರಲ್ಲಿ ಆ ಅಧಿಕಾರಿಯದು ಏನಾದರೂ ಅಪರಾಧವಾಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಇಲಾಖೆಯಿಂದಲಾಗಲಿ ಅಥವಾ ಸರ್ಕಾರದಿಂದಾಗಲಿ ಅವರು ಹೊರದೇಶಕ್ಕೆ ಹೋಗಲು ಏನಾದರೂ ಹಣವನ್ನು ತೆಗೆದುಕೊಂಡಿದ್ದರೆ...

ಶ್ರೀ ಯು. ಭೂಪತಿ.—ಅಲ್ಲಿ ಅವರು ಎಷ್ಟು ಹಣವನ್ನು ಸಂಪಾದನೆ ಮಾಡಿದ್ದಾರೆಂಬುದು ಮುಖ್ಯವಲ್ಲ. During the suspension period he is not supposed to leave the head quarters without Government's permission. But that man has left the country. Till today the department has not taken any action againt him.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರು ಈ ಇಲಾಖೆಯ ಗಮನಕ್ಕಾಗಲಿ, ಸರ್ಕಾರದ ಗಮನಕ್ಕಾಗಲಿ ಬಾರದ ರೀತಿಯಲ್ಲಿ ಹೊರದೇಶಕ್ಕೆ ಹೋಗಿದ್ದರೆ ಅದು ತಪ್ಪಾಗುತ್ತದೆ. ಇದರ ಬಗ್ಗೆ ವಿಚಾರಣೆಯನ್ನು ತೀವ್ರವಾಗಿ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಯು. ಭೂಪತಿ.—ನಾನು ಇದೊಂದೇ ಸಾರಿ ಅಲ್ಲ ನಿಮಗೆ ಹೇಳಿರುವುದು. ಇದುವರೆಗೆ ೩ ಸಾರಿ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಒಬ್ಬ ಲೆಜಿಸ್ಲೇಟರ್ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಹೇಳಿದ ವಿಚಾರವೂ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುವುದಾದರೆ ಇದಕ್ಕೆ ನಾನು ಯಾವ ರೀತಿ ಹೇಳಬೇಕು. That is why I said bureaucracy is much more powerful.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಕ್ರಮ ತೆಗೆದುಕೊಳ್ಳುವುದರೊಳಗಾಗಿ ಈ ಖಾತೆಗೆ ಇನ್ನೊಬ್ಬರು ಮಂತ್ರಿಗಳು ಬರುತ್ತಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ರೀತಿ ಏನೂ ವಿಧಾನ ಮಾಡುವುದಿಲ್ಲ. ಇನ್ನು ೮-೧೦ ದಿವಸದಲ್ಲೇ ತೀವ್ರವಾಗಿ ಕ್ರಮ ತೆಗೆದುಕೊಂಡು ವಿಚಾರಣೆ ಮಾಡಿಸಿ ಇದರ ಬಗ್ಗೆ ತಮಗೆ ಒಂದು ಕಾಗದವನ್ನು ಬರೆಯುತ್ತೇನೆ. ಈಗಾಗಲೇ ಇದರ ಬಗ್ಗೆ ವಿಚಾರಣೆ ನಡೆಯುತ್ತಿರುವುದಾಗಿ ನನಗೆ ಈಗ ಮಾಹಿತಿ ಬಂದಿದೆ. ಆದರೆ ಇದು ಯಾವ ಹಂತದಲ್ಲಿದೆ ಎಂಬುದು ಗೊತ್ತಿಲ್ಲ. ಒಟ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ ಎನ್ನತಕ್ಕ ವಿಚಾರ ಈಗತಾನೆ ನನ್ನ ಗಮನಕ್ಕೆ ಬಂತು.

ಮಾನ್ಯ ಆಚಾರ್ ಅವರು ಮಾತನಾಡಿ, ಸಾರ್ಕ್ ವಿಷಯವನ್ನು ಹೇಳಿ, ಹಳ್ಳಿಗಳಲ್ಲೂ ಸಹಾ ತೋಟಗಾರಿಕೆ ಇಲಾಖೆ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ನಮ್ಮಲ್ಲಿ ೩೯೫ ಫಾರಂಗಳು ಇದ್ದು ಇವುಗಳ ಸಹಾಯವನ್ನು ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿನ ಜನರು ಪಡೆದುಕೊಳ್ಳಬೇಕೆಂಬುದು ನಮ್ಮ ಉದ್ದೇಶ. ಬೆಂಗಳೂರು ಹಾಗೂ ಇನ್ನಿತರ ನಗರಗಳಲ್ಲಿ ಏನೇನು ಅವಶ್ಯಕತೆ ಇದೆಯೋ ಆ ಬಗ್ಗೆಯೂ ತೋಟಗಾರಿಕೆ ಸೂಕ್ತ ಗಮನ ಕೊಡಬೇಕಾಗುತ್ತದೆ ಗ್ರಾಮಾಂತರ ಪ್ರದೇಶವಲ್ಲಿ ಅಲಂಕಾರಕ್ಕೆ ನಿಗಾ ಕೊಡಬೇಕಾದ ಅವಶ್ಯಕತೆ ಇಲ್ಲ ಸಾಮಾನ್ಯ ಜೀವನಕ್ಕೆ ಸಂಬಂಧಪಟ್ಟ ಹಾಗೆ ಈ ಇಲಾಖೆಯಲ್ಲಿ ಏನು ಸಹಾಯ ಮಾಡಬೇಕೋ ಅದರ ಬಗ್ಗೆ ನಿಗಾ ಕೊಡಬೇಕಾಗುತ್ತದೆ. ಬಾಳೆಹಣ್ಣು ಯೋಜನೆ ಏನಾಯಿತು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆ ಯೋಜನೆ ವೈಂಡ್‌ಅಪ್ ಆಗಿದೆ. ಇನ್ನು ಕ್ಯಾಷ್ಯೂ ಪ್ರಾಜೆಕ್ಟ್ ವಿಶ್ವಬ್ಯಾಂಕಿನ ನೆರವಿನಿಂದ ಆಗಿರತಕ್ಕ ಯೋಜನೆ, ೫ ವರ್ಷದಲ್ಲಿ ಮುಗಿಯಬೇಕಾದ ಈ ಯೋಜನೆ ಮತ್ತೆ ೨ ವರ್ಷ ಹೆಚ್ಚು ಪಡೆದು ೭ ವರ್ಷದಲ್ಲಿ ಪೂರ್ಣಗೊಂಡಿದೆ. ೧೦ ಸಾವಿರ ಹೆಕ್ಟೇರ್‌ನಲ್ಲಿ ಇದು ಆಗಬೇಕಾಗಿದ್ದು ೧೨ ಸಾವಿರ ಹೆಕ್ಟೇರ್‌ನಲ್ಲಿ ಇದನ್ನು ಅಳವಡಿಸಿದ್ದು ನೂರಕ್ಕೆ ನೂರಕ್ಕಿಂತಲೂ ಹೆಚ್ಚು ನಾವು ಇದರಲ್ಲಿ ಸಕ್ಸಸ್ ಆಗಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಒಳ್ಳೆಯ ಗುಣಮಟ್ಟದ ತೆಂಗಿನ ಸಸಿಗಳ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ವಿಶೇಷ ಸೆಲ್ ರಚಿಸಿ ಯಾವ ಕಾರಣದಿಂದಲೂ ಕೆಟ್ಟ ಬೀಜ ರೈತರಿಗೆ ಸರಬರಾಜು ಆಗಬಾರದು ಎಂದು ವಿಶೇಷವಾದ ಆಸಕ್ತಿ ವಹಿಸಿ ಕಾರ್ಯಕ್ರಮ ಕೈಗೊಂಡಿದ್ದೇವೆ. ಕ್ಯಾಂಪ್ಕೋ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಕರ್ನಾಟಕ ಹಾಗೂ ಕೇರಳ ಎರಡೂ ರಾಜ್ಯಗಳ ಸಂಯೋಜನೆಯ ಸಂಸ್ಥೆ ಇದು. ಇವತ್ತು ನಮ್ಮ ರಾಜ್ಯದಲ್ಲಿ

ಅಡಿಕೆ ಬೆಲೆ ಕುಸಿದಿದೆ. ಇದಕ್ಕೆ ಕಾರಣ ಇವತ್ತಿನ ದಿವಸಗಳಲ್ಲಿ ಅಡಿಕೆ ಎಲೆ ಹಾಕುವವರ ಸಂಖ್ಯೆ ಕಡಿಮೆಯಾಗಿದೆ. ನಮ್ಮ ತಂದೆ-ತಾಯಿಗಳು ಆ ಕಾಲದಲ್ಲಿ ಒಂದೊಂದು ಬಾರಿಗೆ ೨೦ ರಿಂದ ೩೦ ಗ್ರಾಮ್ ನಷ್ಟು ಅಡಿಕೆಯನ್ನು ಒಂದೇ ಸಾರಿ ಹಾಕಿಕೊಂಡು ಅಗಿಯುತ್ತಿದ್ದರು. ಆದರೆ ಇವತ್ತು ಚೀವ್ ಮಾಡತಕ್ಕ ಅಭ್ಯಾಸ ಕಡಿಮೆ ಆಗಿರುವುದರಿಂದ ಅಡಿಕೆ ಬೆಲೆ ಕಡಿಮೆಯಾಗಿದೆ. ಆ ದೃಷ್ಟಿಯಿಂದ ಸರ್ಕಾರ ಕೂಡಾ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವುದಕ್ಕಾಗಲೀ, ಪ್ರೋತ್ಸಾಹ ಕೊಡುವುದಕ್ಕಾಗಲೀ ವಿತರಣೆ ಮಾಡುವುದಕ್ಕಾಗಲೀ ಹೆಚ್ಚಿನ ಆಸಕ್ತಿಯನ್ನು ತೋರುತ್ತಿಲ್ಲ. ಪ್ರೋತ್ಸಾಹವನ್ನೂ ಕೂಡ ಕೊಡುತ್ತಿಲ್ಲ. ಈಗಾಗಲೇ ಇರುವ ಅಡಿಕೆ ತೋಟದವರಿಗೆ ಒಳ್ಳೆಯ ಬೆಲೆ ಸಿಗಬೇಕೆಂದು ಸರ್ಕಾರದ ಆಸೆ ಇದೆ. ಅದಕ್ಕೋಸ್ಕರವಾಗಿ ಇದನ್ನು ಪಾಕಿಸ್ತಾನಕ್ಕೆ ರಫ್ತು ಮಾಡತಕ್ಕ ಯೋಜನೆ ಇದೆ. ಈಗಾಗಲೇ ಆ ಸರ್ಕಾರದ ಜೊತೆಯಲ್ಲಿ ಕಾಂಕೋದವರು ವ್ಯವಹಾರ ನಡೆಸಿ ಅದಕ್ಕೂ ಕೂಡಾ ವ್ಯವಸ್ಥೆ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಆಚಾರ್ ಅವರು ಇಲಾಖೆಯ ಜ್ಯೇಷ್ಠತಾ ಪಟ್ಟಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಕೆಲವು ತಕರಾರುಗಳು ಇದ್ದವು. ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯೂನಲ್‌ನಲ್ಲಿ ಕೆಲವು ತಕರಾರುಗಳು ಇದ್ದವು ಅವನ್ನೆಲ್ಲಾ ಕ್ಲಿಯರ್ ಮಾಡಿ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಈಗ ಸರ್ಕಾರದ ಮುಂದೆ ಆ ಜೇಷ್ಠತಾ ಪಟ್ಟಿ ಇದೆ. ಬೇಗನೇ ಅದು ತೀರ್ಮಾನವಾಗುತ್ತದೆಂದು ತಮಗೆ ಹೇಳುತ್ತೇನೆ. ಅದು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮಟ್ಟದಲ್ಲಿ ಇದ್ದು ಆ ಬಗ್ಗೆ ಬೇಗ ಮಾಡುತ್ತೇವೆಂದು ಹೇಳುತ್ತೇನೆ. ಇನ್ನು ಮಾನ್ಯ ಕೆ. ಮಲ್ಲಪ್ಪನವರು ಫಾರಮ್‌ಗಳಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಇರುವ ಬೆಳೆಗಳಿಗೆ ನೀರಿನ ಸೌಕರ್ಯ ಸಾಲದೆಂದಿದ್ದಾರೆ. ಇದು ಸ್ವಲ್ಪಮಟ್ಟಿಗೆ ನಿಜ. ಅಲ್ಲಿ ಓಪನ್ ವೆಲ್‌ಗಳು ಇದ್ದಿದ್ದು ಇವತ್ತು ಅಲ್ಲಿ ನೀರು ಸರಿಯಾಗಿ ಸಿಗುತ್ತಾ ಇಲ್ಲ. ಅಂತಹ ಕಡೆಗಳಲ್ಲಿ ಬೋರ್‌ವೆಲ್‌ಗಳು ಬೇಕಾಗುತ್ತವೆ. ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲಾ ಕಡೆಗೂ ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಏಕ್‌ದಮ್ ಎಲ್ಲಾ ಫಾರಮ್‌ಗಳಿಗೆ ನೀರಿನ ವ್ಯವಸ್ಥೆ ಮಾಡುವ ಅವಕಾಶ ಕಡಿಮೆ ಇದೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೆಂಬುದನ್ನು ನೋಡಿ ಅಲ್ಲಿಯ ಬೆಳೆಗಳು ನಷ್ಟ ಆಗದ ಹಾಗೆ, ಉತ್ಪಾದನೆ ಏನು ಮಾಡುತ್ತಿದ್ದೇವೆ ಅದಕ್ಕೆ ತೊಂದರೆ ಆಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

೧-೩೦ ಪಿ.ಎಂ.

ಮಾನ್ಯ ಶಿವನಂಜಪ್ಪನವರು ನನಗೆ ಬಹಳ ಪರಿಚಯದವರು, ಆದರೆ ಅವರು ನನ್ನನ್ನು ಮನಿಲೆಂಡರ್ ಎಂದು ಹೇಳಿದರು. ನನ್ನ ಹತ್ತಿರ ಮನಿನೂ ಇಲ್ಲ ಯಾವುದೇ ಲೆಂಡರ್ ಇಲ್ಲ. ನಾನು ಮನಿ ಲೆಂಡರ್ ಎಂದು ಅವರಿಗೆ ಯಾರು ಹೇಳಿದರೋ ಗೊತ್ತಿಲ್ಲ. ನಾನು ಅವರಿಗೆ ಹಣವನ್ನು ಕೊಟ್ಟಿಲ್ಲ, ನಾನು ಯಾರ ಹತ್ತಿರವೂ ತೆಗೆದುಕೊಂಡಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ತಾವು ವ್ಯಾಪಾರಗಾರರು, ಎಲೆಕ್ಟ್ರಿಸಿಟಿ ಕಂಟ್ರಾಕ್ಟ್ ಕೂಡ ಮಾಡುತ್ತಿದ್ದರು ಅದಕ್ಕೆ ಹೇಳಿದ್ದೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ಎಲೆಕ್ಟ್ರಿಸಿಟಿ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದಾಗ ಎಷ್ಟೋ ಜನ ರೈತರ ಪಂಪ್‌ಸೆಟ್‌ಗಳಿಗೆ ಕನೆಕ್ಷನ್ ಕೊಡಿಸಿದ್ದೇನೆ. ಅವರು ನನಗೆ ಕೊಡತಕ್ಕ ಹಣವನ್ನು ಕೊಡುತ್ತಿರಲಿಲ್ಲ, ಆದ್ದರಿಂದ ನಾನು ಬಲವಂತವಾಗಿ ವಸೂಲಿ ಮಾಡುತ್ತಿರಲಿಲ್ಲ. ನಾನು ಮನಿ ಲೆಂಡರ್ ಬಿಸಿನೆಸ್ ಏನೂ ಮಾಡುತ್ತಿರಲಿಲ್ಲ. ಕಿತ್ತಲೆ ಹಣ್ಣನ್ನು ಯಾವ ರೈತರು ತಿನ್ನುವುದಕ್ಕೆ ಆಗುತ್ತದೆ? ರೈತರಿಗೆ ಕಾಯಿಲೆ ಬಂದಾಗ ಮಾತ್ರ ತಿನ್ನುವುದಕ್ಕೆ ಆಗುತ್ತದೆನ್ನುವ ಮಾತನ್ನು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿರುವ ರೈತರ ಆರ್ಥಿಕ ಪರಿಸ್ಥಿತಿಯನ್ನು ತೋಟಗಾರಿಕೆ ಇಲಾಖೆ ಒಂದರಿಂದಲೇ ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆಂದರೆ ಆಗುವುದಿಲ್ಲ. ಎಲ್ಲರೂ ಕಿತ್ತಳೆಹಣ್ಣನ್ನು ತಿನ್ನತಕ್ಕ ವ್ಯವಸ್ಥೆ ಮಾಡುತ್ತೇವೆ ಎನ್ನುವುದಕ್ಕೆ ತಕ್ಷಣಕ್ಕೆ ಸಾಧ್ಯವಿಲ್ಲ. ಎಲ್ಲರೂ ಕೂಡ ಬರೀ ರಾಜಕೀಯವಾಗಿ ಮಾತನಾಡುವುದನ್ನು ಬಿಟ್ಟು ಜನರ ಪ್ರತಿನಿಧಿಗಳಾಗಿ ವಿಶೇಷವಾಗಿ ಪ್ರಯತ್ನ ಮಾಡಿದರೆ ಅದನ್ನು ಮಾಡಬಹುದು ಎನ್ನುವುದನ್ನು ಹೇಳಿದ್ದೇನೆ. ಮಾನ್ಯ ಶಿವನಂಜಪ್ಪನವರು ನನಗೆ ಮುಖ್ಯಮಂತ್ರಿಗಳು ತೋಟಗಾರಿಕೆ ಇಲಾಖೆಯನ್ನು ಹೇಗೆ ಕೊಟ್ಟರು ಎಂದು ಕೇಳಿದರು. ತೋಟಗಾರಿಕೆ ಕೊಟ್ಟರೆ ಒಳ್ಳೆಯದಾಗುತ್ತದೆಂದು ತೋಟಗಾರಿಕೆಯನ್ನು ಕೊಟ್ಟಿದ್ದಾರೆಂದು ನನ್ನ ಭಾವನೆ. ಫಾರಂ ಹರಾಜಿನ ಬಗ್ಗೆ ಮಾತನಾಡುತ್ತಾ ೨೫ ಸಾವಿರಕ್ಕೆ ಹರಾಜು ಆಗಿದ್ದ ಫಾರಂ ೨ ಲಕ್ಷಕ್ಕೆ ಆಯಿತು ಎಂದು ಹೇಳಿದ್ದಾರೆ

ಪರ್ಟಿಕ್ಯುಲರ್ ಆಗಿ ಯಾವುದು ಎಂದು ಮೆನ್ಷನ್ ಮಾಡದೇ ಇದ್ದುದರಿಂದ ಅದನ್ನು ಕಂಡು ಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲ. ನಿನ್ನೆ ಅವರು ಹೇಳಿದ ತಕ್ಷಣ ಪ್ರಯತ್ನ ಪಟ್ಟು ೧೫ಸಾವಿರಕ್ಕೆ ಆದದ್ದು ೫೮ ಸಾವಿರಕ್ಕೆ ಆಗಿರುವುದು ಒಂದು ನಿದರ್ಶನ ಸಿಕ್ಕಿದೆ. ಅದರ ಬಗ್ಗೆ ಕೂಡ ಯಾವ ರೀತಿಯಲ್ಲಾದರೂ ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ.

ಮಾನ್ಯ ಶಿವನಂಜಪ್ಪನವರು ಮಾತನಾಡುತ್ತಾ, ತೆಂಗಿನಕಾಯಿಗಳನ್ನು ಅಟ್ಟದ ಮೇಲೆ ಕೊಬ್ಬರಿ ಗೋಸ್ಕರ ಹಾಕಿರುವುದನ್ನು ಕೊಂಡುಕೊಂಡು ಬೆಳೆ ಬೆಳೆದು ತೆಂಗಿನ ಸಸಿಗಳನ್ನು ಹಂಚಿಕೆ ಮಾಡುತ್ತಿದ್ದಾರೆಂದು ಪ್ರಸ್ತಾಪ ಮಾಡಿದರು. ಇದರಲ್ಲಿ ನಮ್ಮ ಸಿಸ್ಟಮ್ ಏನೆಂದರೆ, ಮಾನ್ಯ ರಾಮಯ್ಯನವರು ಮಂತ್ರಿಗಳಾಗಿದ್ದಾಗ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದಾರೆ. ಮರಗಳನ್ನು ಟೆಸ್ಟ್ ಮಾಡಿ ಅದರ ಕಾಯಿಗಳನ್ನು ಕಿತ್ತು ಚೆಕ್ ಮಾಡಿ ಸಸಿಗಳನ್ನು ಮಾಡತಕ್ಕ ಸಂದರ್ಭದಲ್ಲಿಯೂ ಅದರಲ್ಲಿ ಏನಾದರೂ ಡಿಫೆಕ್ಟ್ ಕಂಡುಬಂದರೆ ಅಂತಹ ಸಸಿಗಳನ್ನು ಹಂಚ ಕೂಡದೆಂದು ಅವುಗಳನ್ನು ನಾಶಪಡಿಸ ಬೇಕೆಂದು ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೂ ಕೂಡ ಮಾನ್ಯ ಶಿವನಂಜಪ್ಪನವರು ಇಂತಹ ವ್ಯವಹಾರಗಳಲ್ಲಿ ಅವ್ಯವಹಾರಗಳು ಆಗಿವೆಯೆಂದು ಹೇಳಿದ್ದಾರೆ, ಅಂತಹ ಅವ್ಯವಹಾರಗಳು ನಡೆದಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಯಾರು ಯಾರಿಂದ ತೆಂಗಿನಕಾಯಿಗಳನ್ನು ಕೊಂಡುಕೊಂಡಿದ್ದಾರೆ, ಯಾವ್ಯಾವ ಮರಗಳನ್ನು ಮಾರ್ಕ್ ಮಾಡಿದ್ದಾರೆ ಅಂತಹವರಿಂದಲೇ ಕೊಂಡುಕೊಳ್ಳಬೇಕು. ಯಾರು ಯಾರಿಂದ ಕೊಂಡುಕೊಂಡಿದ್ದಾರೆನ್ನುವ ವಿಚಾರವನ್ನು ಚೆಕ್ ಮಾಡಿ ತಿಳಿಸುತ್ತೇನೆ. ಕೊಂಡುಕೊಳ್ಳುವಾಗ ಏನಾದರೂ ಅವ್ಯವಹಾರ ಕಂಡು ಬಂದರೆ ನಿಜವಾಗಿಯೂ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಏನಾದರೂ ಅನ್ಯಾಯ ಮಾಡಿದರೆ ರೈತರಿಗೆ ಶಾಶ್ವತವಾದ ಅನ್ಯಾಯ ಮಾಡಿದಂತಾಗುತ್ತದೆ, ಅದು ಮಹಾ ಪಾಪ, ಅಂತಹ ಕೆಲಸ ಮಾಡಬಾರದು. ಅಂತಹದ್ದು ಏನಾದರೂ ಆಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಕೋಲ್ಡ್ ಸ್ಟೋರೇಜ್ ಬಗ್ಗೆ ಮಾನ್ಯ ವೆಂಕಟ ರಾಮಯ್ಯನವರು ಪ್ರಸ್ತಾಪ ಮಾಡಿದರು. ಕೋಲ್ಡ್ ಸ್ಟೋರೇಜ್ ನಾಲ್ಕು ಇವೆ, ಬೆಂಗಳೂರು, ಹಾಸನ ಚಿಕ್ಕಬಳ್ಳಾಪುರ, ಕೋಲಾರ. ಕೋಲಾರದ ಕೋಲ್ಡ್ ಸ್ಟೋರೇಜನ್ನು ಕೆ.ಎಂ.ಎಫ್. ನವರಿಗೆ ವಹಿಸಿದ್ದೇವೆ ಅವರು ಟ್ರಯಲ್ ರನ್ ಮಾಡುತ್ತಿದ್ದಾರೆ. ಆ ಪರಿಸ್ಥಿತಿಯಲ್ಲಿದೆ. ಇನ್ನೊಂದು ಚಿಕ್ಕಬಳ್ಳಾಪುರದ್ದು ಕೂಡ ಸ್ವಲ್ಪ ರಿಪೇರಿಯಲ್ಲಿತ್ತು. ಈಗ ರಿಪೇರಿಯಾಗಿದೆ ಅದನ್ನು ಉಪಯೋಗ ಮಾಡತಕ್ಕ ಪರಿಸ್ಥಿತಿಯಿದೆ. ಹಾಸನ ಮತ್ತು ಬೆಂಗಳೂರುಗಳಲ್ಲಿರತಕ್ಕ ಕೋಲ್ಡ್ ಸ್ಟೋರೇಜ್‌ಗಳು ಅವು ಚೆನ್ನಾಗಿ ಕೆಲಸ ಮಾಡುತ್ತಿವೆ.

ಶ್ರೀ ಆರ್. ವೆಂಕಟರಾಮಯ್ಯ.—ತಮಗೆ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ವೈಯುಕ್ತಿಕವಾಗಿ ಪರೀಕ್ಷೆ ಮಾಡುವಷ್ಟು ಸಮಯವಿರಲಿಲ್ಲ. ಅಧಿಕಾರಿಗಳು ಕೊಟ್ಟಿರತಕ್ಕ ಮಾಹಿತಿ ಎಲ್ಲವೂ ಸತ್ಯಕ್ಕೆ ದೂರವಾದುದು ಎಂದು ಹೇಳುವುದು ಸರಿಯಾದುದಲ್ಲ, ನಾನು ನೋಡಿ ಹೇಳುತ್ತೇನೆ. ಬೇಕಾದರೆ ಮಾನ್ಯ ವೆಂಕಟರಾಮಯ್ಯನವರನ್ನು ಕರೆದುಕೊಂಡು ಹೋಗಿ ನೋಡುತ್ತೇನೆ. ನಾವು ಹೇಳುವುದೆಲ್ಲಾ ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ನೀವು ಹೇಳುವುದೆಲ್ಲಾ ಸತ್ಯಕ್ಕೆ ಹತ್ತಿರವಾದುದೆಂದು ಹೇಳುವುದಕ್ಕೆ ಬರುವುದಿಲ್ಲ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವೆಂಕಟರಾಮಯ್ಯ —ನೀವು ಹೇಳುತ್ತಿರುವುದು ಬಹಳ ವೇಗ್ ಆಗಿದೆ. ನೀವು ಬಹಳ ಚೆನ್ನಾಗಿ ತಿಳಿದುಕೊಳ್ಳುತ್ತೀರಿ ಎಂದು ತಿಳಿದುಕೊಂಡಿದ್ದೆ ಏನು ಹೇಳುತ್ತಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ವೇಗ್ ಆಗಿ ಹೇಳುತ್ತಿಲ್ಲ, ನಾನು ಪರೀಕ್ಷೆ ಮಾಡಿ ತಮಗೆ ಇನ್‌-ಫರ್ಮೇಶನ್ ಕೊಡುತ್ತೇನೆ. ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳ ಬಗ್ಗೆ ಗಮನಹರಿಸುತ್ತೇನೆ. ಮಾನ್ಯ ಸದಸ್ಯರುಗಳು ನನ್ನ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಈಗ ಮಾನ್ಯ ಸಚಿವರು ಬೇಡಿಕೆ ಮೇಲೆ ನಡೆದಂಥ ಚರ್ಚೆಗೆ ಉತ್ತರ ಕೊಟ್ಟಿದ್ದಾರೆ. ಈಗ ಈ ವಾಟರ್‌ಶೆಡ್ ಯೋಜನೆಯ ಅಡಿಯಲ್ಲಿ ತೋಟಗಾರಿಕೆಗಾಗಿ ಸಾಕಷ್ಟು ಹಣ

ವನ್ನು ಕೊಡಲಾಗಿದೆ. ಈ ಯೋಜನೆಯ ಅಡಿಯಲ್ಲಿ ಈ ರಾಜ್ಯದಲ್ಲಿ ಎಷ್ಟು ತೋಟಗಾರಿಕೆ ಫಾರ್ಮ್‌ಗಳನ್ನು ನಿರ್ಮಾಣ ಮಾಡಲಾಗಿದೆ ? ಎಷ್ಟು ಹಣವನ್ನು ಇದಕ್ಕೆ ಖರ್ಚು ಮಾಡಲಾಗಿದೆ ? ಇದರಿಂದ ಸರ್ಕಾರಕ್ಕೆ ಆಗಿರುವ ಲಾಭ ಎಷ್ಟು ? ಮತ್ತೆ ಈ ತೆಂಗು, ಅಡಿಕೆ ತೋಟಗಾರಿಕೆ ಇದರಲ್ಲಿ ಸೇರಿದೆಯೋ? ಬೆಳೆ ಹಾಳಾದರೆ ಹೋಗಲಿ, ಆದರೆ ತೋಟವೇ ಹಾಳಾದರೆ ರೈತರಿಗೆ ಅದಕ್ಕಿಂತ ಹೆಚ್ಚಿನ ನಷ್ಟ ಬೇರೆ ಇಲ್ಲ. ಆದ್ದರಿಂದ ಪ್ರಕೃತಿ ವಿಕೋಪಕ್ಕೆ ಒಳಗಾಗಿ ಮತ್ತು ರೋಗರುಜಿನಗಳಿಗೆ ಒಳಗಾಗಿ ತೆಂಗು ಅಡಿಕೆ ತೋಟಗಳು ಹಾಳಾದಾಗ ಅವರಿಗೆ ಪರಿಹಾರ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಏತಕೆ ಮಾಡಬಾರದು ? ಇದನ್ನು ಮಾಡಬೇಕೆನ್ನತಕ್ಕಂಥ ಯೋಜನೆ ನಿಮ್ಮಲ್ಲಿ ಏನಾದರೂ ಇದೆಯಾ ?

ಮೂರನೆಯದು, ಈಗ ಈ ಖುಷ್ಕಿ ಬೆಳೆಯಲ್ಲಿ ರೈತ ರಾಗಿ, ಜೋಳ, ಬೆಳೆಯಲಿಕ್ಕೆ ಅಷ್ಟು ಉಪಯುಕ್ತ ಅಲ್ಲ. ಒಂದು ಎಕರೆ ತೋಟದಲ್ಲಿ ಸುಮಾರು ೨೦ ಮಾವಿನ ಮರ ಹಾಕಿದರೆ, ೨೦ ಹುಣಸೆ ಮರ ಹಾಕಿದರೆ ಮತ್ತು ಈ ತೋಟಗಾರಿಕೆ ಬೆಳೆಯನ್ನು ಮಾಡುವುದಕ್ಕೆ ಮುಂದೆ ಬಂದರೆ ಆತನಿಗೆ ಹೆಚ್ಚು ಲಾಭದಾಯಕವಾಗುತ್ತದೆ. ಆದರೆ ಆತನಿಗೆ ಇದಕ್ಕೆ ಆರ್ಥಿಕ ತೊಂದರೆ ಇದೆ. ಆದ್ದರಿಂದ ಈ ಇಲಾಖೆಯ ವತಿಯಿಂದ ಹೀಗೆ ಖುಷ್ಕಿ ಭೂಮಿಯಲ್ಲಿ ತೋಟಗಾರಿಕೆ ಫಾರ್ಮ್‌ಗಳನು ಅಂದರೆ ಹಣ್ಣಿನ ಗಿಡಗಳನ್ನು ಬೆಳಸಲಿಕ್ಕೆ ಮುಂದೆ ಬರತಕ್ಕಂಥ ರೈತರಿಗೆ ಸಾಲ ಕೊಡತಕ್ಕಂಥ ವ್ಯವಸ್ಥೆ ಅಥವಾ ಕಡಿಮೆ ಬಡ್ಡಿ ದರದರಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡುತ್ತೀರಿ ? ಏಕೆಂದರೆ ಫಲ ಬರುವುದಕ್ಕೆ ಹತ್ತು ವರ್ಷ ಆತ ಕಾಯಬೇಕಾಗುತ್ತದೆ. ಈಗ ತೆಂಗಿನ ಬೆಳೆಗೆ ಈ ಅನುಕೂಲವನ್ನು ಕೊಟ್ಟಿದ್ದಾರೆ. ತೆಂಗಿಗೆ ಏನು ಮಾಡಿದ್ದಾರೆ ಎಂದರೆ, ಅದು ಐದು ವರ್ಷಕ್ಕೆ ಫಲ ಬರುತ್ತದೆ. ಇದಕ್ಕೆ ಏನು ಸಾಲವನ್ನು ಕೊಡುತ್ತಾರೆ ಫಲ ಬರುವವರೆಗೆ ಸಾಲದ ಕಂತನ್ನು ತೆಗೆದುಕೊಳ್ಳುವುದಿಲ್ಲ. ಐದು ವರ್ಷ ಕಳೆದ ಮೇಲೆ ಫಲಕ್ಕೆ ಬಂದಮೇಲೆ ಅಸಲು ಬಡ್ಡಿ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಇದೆ ಈ ರೀತಿಯಲ್ಲಿ ಪಿ.ಎಲ್.ಡಿ. ಬ್ಯಾಂಕುಗಳು ಇವೆ. ಇದರ ಮೂಲಕ ಸಾಲಕೊಟ್ಟು ಫಲ ಕೊಡತಕ್ಕಂಥ ವೇಳೆಯಲ್ಲಿ ಸಾಲ ಮರುಪಾವತಿ ಮಾಡತಕ್ಕಂಥ ಒಂದು ವ್ಯವಸ್ಥೆ ಏನಾದರೂ ಮಾಡಿದ್ದೀರಾ ? ಈ ಮೂರು ಪ್ರಶ್ನೆಗಳಿಗೆ ಮಾನ್ಯ ಸಚಿವರು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ವಾಟರ್‌ಶೆಡ್‌–ಜಲಾನಯನ ಪ್ರದೇಶದಲ್ಲಿ ತೋಟಗಾರಿಕೆ ಮಾಡತಕ್ಕಂಥ ಯೋಜನೆ ಇತ್ತೀಚಿನದು. ೮೬–೮೭ ರಲ್ಲಿ ಪ್ರಾರಂಭವಾಗಿ ೮೭–೮೮ರಲ್ಲಿ ನಾವು ಇಂಪ್ಲಿಮೆಂಟ್ ಮಾಡುವ ಸ್ಟೇಜ್‌ನಲ್ಲಿ ಇದ್ದೇವೆ. ಅಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಸಂಪೂರ್ಣವಾಗಿ ಗಿಡಗಳನ್ನು ಕೊಡುತ್ತೇವೆ. ಬೇಕಾದಂಥ ಇನ್‌ಪುಟ್ಸ್ ಕೊಡುತ್ತೇವೆ. ಇದನ್ನು ಬೆಳಸಲಿಕ್ಕೆ ಅವರನ್ನು ಸಹ ಇನ್‌ವಾಲ್ವ್ ಮಾಡಿಕೊಂಡು ಸಾಕಷ್ಟು ಸಹಕಾರ ಕೊಟ್ಟು ತೋಟ ಬೆಳೆಯುವವರೆಗೆ, ಸಹಕಾರ ಕೊಡುತ್ತೇವೆ. ಸರ್ಕಾರಿ ಜಮೀನು ಇದ್ದರೆ ಅಲ್ಲಿ ಗಿಡಹಾಕಿ ಸಾಮೂಹಿಕವಾಗಿ ತೋಟಗಾರಿಕೆಯನ್ನು ಬೆಳೆಯತಕ್ಕಂಥ ವ್ಯವಸ್ಥೆ ಇದೆ. ದೊಡ್ಡ ರೈತರು ವಾಟರ್‌ಶೆಡ್ ಏರಿಯಾದಲ್ಲಿ ಬಂದರೆ ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ಅವರಿಗೆ ಬರೀ ಗಿಡಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾತ್ರ ಇದೆ. ಪುಕ್ಕಟೆ ಗಿಡಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾತ್ರ ಇದೆ. ಅವರು ಗಿಡಗಳನ್ನು ಬೆಳೆದುಕೊಳ್ಳಬೇಕಾಗುತ್ತದೆ. ಇದನ್ನು ಕೂಡ ಮಾಡಿ ಉತ್ಪಾದನೆ ದೃಷ್ಟಿಯಿಂದ ಅವರಿಗೆ ಪ್ರೋತ್ಸಾಹ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕೆಂದು ಯೋಜನೆ ಕೂಡ ನಮ್ಮಲ್ಲಿ ಇದೆ. ಈಗಾಗಲೇ ಮಾರ್ಜಿನಲ್ ಮತ್ತು ಸ್ಮಾಲ್ ಫಾರ್ಮರ್ಸ್‌ಗೆ ಸಂಪೂರ್ಣವಾಗಿ ತೋಟವನ್ನು ಬೆಳೆಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈಗ ೧೮ ಜಿಲ್ಲೆಗಳಲ್ಲಿ ವಾಟರ್‌ಶೆಡ್ ಏರಿಯಾದಲ್ಲಿ ಎಲ್ಲಾ ಕಡೆಯಲ್ಲೂ ಇದು ಇದೆ. ಎಷ್ಟು ಜನ ಬಂದರೂ ಅವರಿಗೆ ಗಿಡಗಳನ್ನು ಕೊಡುತ್ತೇವೆ. ಎಷ್ಟು ಜನಕ್ಕೆ ಇದರಿಂದ ಅನುಕೂಲವಾಗುತ್ತಿದೆ ಎನ್ನತಕ್ಕಂಥ ಮಾಹಿತಿ ನನ್ನಲ್ಲಿ ಇಲ್ಲ. ಸಾಮಾನ್ಯವಾಗಿ ಈ ಕಾರ್ಯಕ್ರಮಕ್ಕೆ ಬರತಕ್ಕಂತ ಎಲ್ಲರಿಗೂ ಅನುಕೂಲ ಮಾಡಿಕೊಡಬೇಕೆಂಬುದು ಸರ್ಕಾರದ ಇಚ್ಛೆ. ತೆಂಗು, ಅಡಿಕೆ ತೋಟ ಹಾಳಾದಾಗ ಪರಿಹಾರವನ್ನು ಕೊಡುವ ಮಾತನ್ನು ಕೇಳಿದ್ದೀರಿ ಕೆಲವು ನಿಯಮಿತವಾದ ಆದಾಯದ ಒಳಗಡೆ ಇದ್ದರೆ ಮಾತ್ರ ಪರಿಹಾರ ಪಡೆಯಲಿಕ್ಕೆ ಅರ್ಹರಿರುತ್ತಾರೆ. ಅಂತಹವರಿಗೆ ಯಾವುದೇ ರೀತಿಯಲ್ಲಿ ಹಾನಿಯಾದಾಗ ಸರ್ಕಾರದಿಂದ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಇದೆ. ಅದಕ್ಕಿಂತ ಮೇಲೆ ಇದ್ದರೆ ಪರಿಹಾರ ಕೊಡಲಿಕ್ಕೆ ವ್ಯವಸ್ಥೆ ಇಲ್ಲ. ಖುಷ್ಕಿ ಭೂಮಿಯಲ್ಲಿ ತೆಂಗು ಮಾವು ಬೆಳೆಯುತಕ್ಕಂಥವರಿಗೆ ಈಗಾಗಲೇ ಸಾಕಷ್ಟು ಗಿಡಗಳನ್ನು ಒದಗಿಸಿ ಅವರಿಗೆ ಪ್ರೋತ್ಸಾಹ ಕೊಡತಕ್ಕಂಥ ವ್ಯವಸ್ಥೆ ಇದೆ. ಮತ್ತು ಇವರಿಗೆ ಸಾಲದ ಅವಶ್ಯಕತೆ ಬಿದ್ದರೆ ಪಿ.ಎಲ್.ಡಿ.ಬಿ. ಯಿಂದ ಮತ್ತು ಸೊಸೈಟಿಗಳಲ್ಲಿ

ಈಗಾಗಲೇ ಕಡಿಮೆ ಬಡ್ಡಿ ದರದಲ್ಲಿ ಕೊಡುತ್ತಿದ್ದಾರೆ. ಇನ್ನು ಏನಾದರೂ ಪ್ರೋತ್ಸಾಹದ ಕೆಲಸ ಮಾಡುವುದು ಅವಶ್ಯಕವಿದ್ದರೆ, ಜನ ಮುಂದೆ ಬಂದರೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಲಕ್ಕಪ್ಪ.—ಫಾರಂಗಳಲ್ಲಿ ಏನೇನು ಹಣ್ಣಿನ ಬೆಳೆಗಳನ್ನು ಬೆಳೆದಿದ್ದಾರೆ ಎಂಬುದನ್ನು ಹೇಳಲಿಲ್ಲ. ತೋಟಗಳಲ್ಲಿ ಯಾವ ಯಾವ ಹೂವಿನ ಗಿಡಗಳನ್ನು ಬೆಳೆದಿದ್ದಾರೆ, ಯಾವ ಯಾವ ಹಣ್ಣುಗಳನ್ನು ಬೆಳೆದಿದ್ದಾರೆ, ಇವುಗಳನ್ನು ಏನಾದರೂ ಹೊರಗಡೆ ಕಳುಹಿಸುವಂಥ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಇದೆಲ್ಲಾ ಮಾನ್ಯ ಲಕ್ಕಪ್ಪನವರಿಗೆ ಗೊತ್ತಿರತಕ್ಕ ವಿಷಯ. ಸಪೋಟಾ, ತೆಂಗು, ಮಾವು, ಪರಂಗಿಹಣ್ಣು ಇನ್ನು ಮುಂತಾದ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಹೊಸ ಹೊಸ ಜಾತಿಯ ಹಣ್ಣುಗಳನ್ನೂ, ಅಲ್ಲಿಯ ವಾತಾವರಣಕ್ಕೆ ತಕ್ಕಂತೆ ಬೆಳೆಯುತ್ತಾರೆ. ಯಾವ ಯಾವ ಏರಿಯಾದಲ್ಲಿ ಯಾವ ಯಾವ ಹಣ್ಣುಗಳನ್ನು ಬೆಳೆಯಬಹುದೋ, ಅಂತವುಗಳನ್ನು ಬೆಳೆಯುತ್ತಾರೆ. ಇನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಆಲ್ ಇಂಡಿಯಾ ಷೆಡ್ಯೂಲ್ಡ್ ಕ್ಯಾಸ್ಟ್ ಕೋ-ಆಪರೇಟಿವ್ ಸೊಸೈಟಿ ಮಾಡಿದ್ದೇವೆ. ಕುಣಿಗಲ್ ತಾಲ್ಲೂಕಿನಲ್ಲಿ ಕೊಟ್ಟಿರತಕ್ಕಂಥ ೫೦೦ ಎಕರೆ, ಮತ್ತು ಕನ್ನಮಂಗಲದಲ್ಲಿ ಕೊಟ್ಟಿರುವುದೂ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಅನುಕೂಲವಾಗಲೀ ಎಂದು ಮಾಡಿರತಕ್ಕ ಯೋಜನೆ. ಇದರಿಂದ ಯಶಸ್ವಿಯಾಗಿ ಎಕ್ಸ್‌ಪೋರ್ಟ್ ಮಾಡಬಹುದೆಂದು ನನ್ನ ಅನಿಸಿಕೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಈ ಸದನದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಈ ಇಲಾಖೆಯನ್ನು ವಿವರವಾಗಿ ಪರಿಶೀಲಿಸಿ, ಕೆಲವೊಂದು ಶಿಫಾರಸ್‌ಗಳನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳ ಗಮನಕ್ಕೆ ಈ ಶಿಫಾರಸ್‌ಗಳು ಬಂದಿದೆಯೋ ಇಲ್ಲವೊ, ಸಾಧಾರಣವಾಗಿ ಬರುವುದಿಲ್ಲ. ಆಫೀಸರುಗಳ ಮಟ್ಟದಲ್ಲೇ ತೀರ್ಮಾನ ಮಾಡಿ ಉತ್ತರ ಹೇಳುತ್ತಾರೆ. ಮಂತ್ರಿಗಳ ಗಮನಕ್ಕೆ ತರಬೇಕೆಂದು ಇದ್ದರೂ ಈ ಕೆಲಸ ಇವತ್ತಿನವರೆಗೂ ಆಗುತ್ತಾ ಇಲ್ಲ. ದಯಮಾಡಿ ಈ ಬಗ್ಗೆ ಗಮನಹರಿಸಬೇಕೆಂದು ನನ್ನ ಮನವಿ. ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಬಗ್ಗೆ ನಾವು ನೋಡಿದ್ದೇವೆ. ನಿಜವಾಗಿಯೂ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಇದನ್ನು ನಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದೇವೆ. ಆದರೆ ಎಲ್ಲಾ ಮ್ಯಾನ್ಯುಯಲ್ ವರ್ಕ್ಸ್ ನಡೆಯಲು ಸ್ವಲ್ಪ ಮಟ್ಟಿಗೆ ಅದನ್ನು ಮೆಕಾನೈಸ್ಡ್ ಮಾಡುವಂಥ ಅವಶ್ಯಕತೆ ಇದೆ. ಒಂದು ಕಡೆ ಬುಲ್ಡೋಜರ್ ಅವಶ್ಯಕತೆ ಇದೆ, ಟ್ರಾಕ್ಟರ್ ಅವಶ್ಯಕತೆ ಇದೆ. ಇವೆಲ್ಲಾ ಅನುಕೂಲತೆಗಳನ್ನು ಕೊಟ್ಟರೆ. ಈಗಿರತಕ್ಕಂಥ ಕೆಲಸಕ್ಕೆ ಎರಡುಪಟ್ಟು ಹೆಚ್ಚು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ರೀಸರ್ಚ್ ಫಾರಂ ಬಗ್ಗೆ ಹೇಳುವುದಾದರೆ, ಯಾರಿಗೂ ಬೇಡದೇ ಇದ್ದ ಜಾಗದಲ್ಲಿ ನೀವು ಮಾಡುತ್ತೀರಿ. ಇದರಲ್ಲಿ ಯಾವುದೇ ಕ್ವಾಲಿಟಿ ಆಗುವುದಿಲ್ಲ. ಸ್ಮಶಾನಕ್ಕೆ ಬೇಕಾದ ಜಾಗದಲ್ಲಿ ರೀಸರ್ಚ್ ಫಾರಂ ಮಾಡುತ್ತೀರಿ. ನಂಜನಗೂಡಿನ ರಸಬಾಳೆ ನಶಿಸಿ ಹೋಗುತ್ತಿದೆ. ಇದನ್ನು ಉಳಿಸುವುದಕ್ಕೆ, ಫಾರಂ ಮಾಡುವುದಕ್ಕೆ ಜಾಗ ಇಲ್ಲ. ಇದಕ್ಕೆ ಬೇಕಾದ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳಬೇಕು. ೧೦ ವರ್ಷದಿಂದ ಹೀಗೆಯೇ ಕಾಲ ಕಳೆಯುತ್ತಿದ್ದೀರಿ. At any cost they must acquire a proper and fertile land. ಇದರ ಬಗ್ಗೆ ತಕ್ಷಣ ಗಮನಹರಿಸಬೇಕು. ಬೆಂಗಳೂರು ಹಾರ್ಟಿಕಲ್ಚರ್ ಮಾರ್ಕೆಟಿಂಗ್ ಸೊಸೈಟಿ ಎಂದು ೧೬ ಲಕ್ಷ ರೂಪಾಯಿಗಳ ಬಂಡವಾಳ ಹಾಕಿ ಒಂದು ಸೊಸೈಟಿ ಮಾಡಿದಿರಿ. ೧ ಲಕ್ಷ ೭೫ ಸಾವಿರ ಟನ್ ಪ್ರೊಕ್ಯೂರ್ ಮಾಡಬೇಕೆಂದು ಯೋಜನೆ ಇತ್ತು. ಆದರೆ ೫೦೦ ಟನ್ ಪ್ರೊಕ್ಯೂರ್ ಮಾಡಲಿಕ್ಕಾಗಲಿಲ್ಲ. ಒಂದು ವರ್ಷದಲ್ಲಿಯೇ ನೆಗೆದುಬಿದ್ದು ಹೋಯಿತು. ಇದರಲ್ಲಿ ಅಧಿಕಾರಿಗಳ ಕೈವಾಡವೂ ನಡೆದಿದೆ. ಇನ್ನು ಚೆನ್ನಾಗಿ ಕೆಲಸ ಮಾಡತಕ್ಕಂಥ ಲಾಲ್‌ಬಾಗ್ ಸೊಸೈಟಿ ಇದೆ, ಇದಕ್ಕೆ ಬೆಂಬಲ ಕೊಡಿ ಅವರು ಪಕ್ಕದಲ್ಲಿಯೇ ಸ್ವಲ್ಪ ಜಾಗ ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆಯೂ ತೀವ್ರವಾಗಿ ಗಮನಹರಿಸಬೇಕು. ಇನ್ನು ತಮಗೆ ಗೊತ್ತಿರುವಂತೆ ಅಡಿಕೆ ಬೆಲೆಯಲ್ಲಿ ಸ್ಥಿತ್ಯಂತರ ಆಗುತ್ತಿದೆ, ಏರಿಳಿತ ಆಗುತ್ತಿದೆ. ಒಂದು ವರ್ಷ ೨ ಸಾವಿರ, ಒಂದು ವರ್ಷ ೩ ಸಾವಿರ ಆಗುತ್ತದೆ. ಅಡಿಕೆ ಬೆಳೆಗಾರರು ತೊಂದರೆಯಲ್ಲಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು ಹಿಂದೆ ಕ್ಯಾಂಪ್ಕೊ ಎಂಬ ಒಂದು ಸಂಸ್ಥೆಯನ್ನು ಮಾಡಲಾಗಿತ್ತು. ಈ ಸಂಸ್ಥೆಯು ಶಕ್ತಿಸಾಮರ್ಥ್ಯದಿಂದ ಈ ಸಮಸ್ಯೆಯನ್ನು ನಿರ್ವಹಿಸುವುದಕ್ಕೆ ಆಗುತ್ತಿಲ್ಲ.

ಆದುದರಿಂದ ಇದರ ಬಗ್ಗೆ ಸರಕಾರ ಕಣ್ಣುಮುಚ್ಚಿ ಕುಳಿತುಕೊಳ್ಳದೆ ಏನಾದರೂ ಇನಿಷಿಯೇಟೀವ್ ತೆಗೆದುಕೊಳ್ಳಬೇಕು. ಇದರ ಬಗ್ಗೆ ಆಲೋಚನೆ ಮಾಡಿದ್ದೀರಾ ಅಥವಾ ಮಾಡುತ್ತೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರವರು ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್‌ನ್ನು ಮೆಚ್ಚಿಕೊಂಡು ಅದರ ಬಗ್ಗೆ ಉತ್ತಮವಾದ ಮಾತುಗಳನ್ನಾಡಿದ್ದಾರೆ. ಅಲ್ಲಿ ಎಕ್ವಿಪ್‌ಮೆಂಟ್ಸ್ ಅವಶ್ಯಕತೆ ಇದೆ ಎಂದು ತಿಳಿಸಿದ್ದಾರೆ, ನಿಜವಾಗಿಯೂ ಕೂಡಾ ಇಷ್ಟು ದೊಡ್ಡ ಏರಿಯಾದಲ್ಲಿ ಎಕ್ವಿಪ್‌ಮೆಂಟ್ಸ್ ಅವಶ್ಯಕತೆ ಇರಬಹುದು. ಇದನ್ನು ಎರಡು ಮೂರು ಇಲಾಖೆಯವರು ಸೇರಿ ಮಾಡಬೇಕಾಗಿದೆ. ಪರ್ಟಿಕ್ಯುಲರ್ ಆಗಿ ಆ ಒಂದು ವಾಟರ್‌ಷೆಡ್ ಏರಿಯಾದಲ್ಲಿ ಅವಶ್ಯಕತೆ ಇರತಕ್ಕಂಥ ಎಕ್ವಿಪ್‌ಮೆಂಟ್ಸ್‌ನ್ನು ಐಡೆಂಟಿಫೈ ಮಾಡಿ ಒದಗಿಸುವುದಕ್ಕೆ ಸರಕಾರ ಯೋಚನೆ ಮಾಡುತ್ತದೆ ಎಂಬ ವಿಷಯವನ್ನು ತಿಳಿಸುವುದಕ್ಕೆ ಬಯಸುತ್ತೇನೆ. ರೀಸರ್ಚ್ ಫಾರಂಸ್ ಬಗ್ಗೆ ಹೇಳಿದರು, ಆದರೆ ತೋಟಗಾರಿಕೆ ಇಲಾಖೆಯಲ್ಲಿ ಯಾವುದೇ ರೀಸರ್ಚ್ ಫಾರಂಸ್ ಇಲ್ಲ. ನಾವು ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಮತ್ತು ಐ.ಸಿ.ಆರ್. ಮೇಲೆ ಡಿಪೆಂಡ್ ಆಗಿದ್ದೇವೆ. ಅವರು ಮಾಡಿದಂಥ ಸಂಶೋಧನೆಯನ್ನು ರೈತರಿಗೆ ಮುಟ್ಟಿಸುವ ಅಥವಾ ಉಪಯೋಗಿಸಿಕೊಳ್ಳುವ ವ್ಯವಸ್ಥೆ ಇದೆ. ಇದರ ಹೊರತು ನಮ್ಮಲ್ಲಿ ರೀಸರ್ಚ್ ಫಾರಂಸ್ ಅಥವಾ ರೀಸರ್ಚ್ ಇನ್‌ಸ್ಟಿಟ್ಯೂಟ್ಸ್ ಇಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಡಿಕೆ ಬೆಳೆ ಕಡಿಮೆಯಾಗುವುದಕ್ಕೆ ಅಡಿಕೆ ತಿನ್ನುವ ಹವ್ಯಾಸ ಕಡಿಮೆಯಾಗಿರುವುದೇ ಕಾರಣ ಎಂಬುದನ್ನು ಮಾನ್ಯ ಶ್ರೀನಿವಾಸ್‌ರವರೂ ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ ನಮಗೆ ಇರತಕ್ಕಂಥ ಮಾರುಕಟ್ಟೆ ಪಾಕಿಸ್ಥಾನ ಒಂದೇ ಎಂದು ಕಾಣುತ್ತದೆ. ಇದನ್ನು ಪಾಕಿಸ್ಥಾನಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕ್ಯಾಂಪ್ಕೋದವರೂ ಸಹ ಟ್ರೈ ಮಾಡುತ್ತಿದ್ದಾರೆ. ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಈ ಸಮಸ್ಯೆ ಸ್ವಲ್ಪಮಟ್ಟಿಗೆ ಪರಿಹಾರ ಆಗಬಹುದೆಂದು ನನ್ನ ಅನಿಸಿಕೆ. ಮಾರ್ಕೆಟಿಂಗ್ ಸೊಸೈಟೀಸ್ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ, ವ್ಯವಸ್ಥಿತವಾದ ರೀತಿಯಲ್ಲಿ ಅವು ಕೆಲಸ ಮಾಡುವಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

† ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯ ಪಿತಾಮಹ ಎಂ. ಹೆಚ್. ಮರೀಗೌಡರು. ಇವರ ಕಾಲದಲ್ಲಿ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡಿತು. ಒಂದು ಸಪೋಟಾ ಹಣ್ಣು ಒಂದು ರಾಗಿಮುದ್ದೆಗೆ ಸಮಾನ, ಅದರಲ್ಲಿ ಅಷ್ಟು ಸತ್ವಾಂಶ ಇದೆ ಎಂದು ಅವರು ಹೇಳುತ್ತಿದ್ದರು. ಆದರೆ ದುರ್ದೈವ ಎಂದರೆ ಕರ್ನಾಟಕ ರಾಜ್ಯದಲ್ಲಿ ಬೆಳೆಯತಕ್ಕಂಥ ಸಪೋಟ, ಪಪಾಯಿ ಇನ್ನೂ ಮುಂತಾದ ಹಣ್ಣುಗಳನ್ನು ಟೆಂಡರ್ ಮೂಲಕ ಮಾರಾಟ ಮಾಡುತ್ತಾರೆ. ಈ ಹರಾಜಿನಲ್ಲಿ ತಮಿಳುನಾಡಿನವರು ಕೇರಳದವರು ಹೆಚ್ಚು ಬೆಲೆಯನ್ನು ಕೂಗಿ, ಈ ಹಣ್ಣುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಇದರ ಉಪಯೋಗ ಹೊರರಾಜ್ಯಗಳಿಗೆ ಆಗುತ್ತಿದೆಯೇ ಹೊರತು, ಈ ರಾಜ್ಯಕ್ಕೆ ಆಗುತ್ತಿಲ್ಲ. ಈ ರೀತಿ ಟೆಂಡರ್ ಕರೆಯುವಾಗ ಒಂದು ಕಂಡೀಷನ್ ಹಾಕಿ, ಸ್ಥಳೀಯರಿಗೆ ಅದರಲ್ಲಿ ಭಾಗವಹಿಸಲು ಅನುಮತಿ ನೀಡಿ, ಈ ಹಣ್ಣಿನ ಉಪಯೋಗ ನಮ್ಮ ರಾಜ್ಯದವರಿಗೇ ಆಗುವಂತೆ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂದು ಕೇಳುತ್ತೇನೆ. ಇನ್ನು ಎರಡನೆಯದಾಗಿ, ನಂಜನಗೂಡು ರಸಬಾಳೆ ರಾಜ್ಯದಲ್ಲಿ ಬೆಳೆಯುವ ಇನ್ನಿತರ ರಸಬಾಳೆ ಹಣ್ಣುಗಳಿಗಿಂತ ಅತ್ಯುತ್ತಮವಾದ ಬಾಳೆಯ ಹಣ್ಣಾಗಿದೆ. ನಂಜನಗೂಡು ರಸಬಾಳೆಯ ಬಗ್ಗೆ ಸಂಶೋಧನೆ ಮಾಡಲು ಅಪಾರ ಹಣವನ್ನು ವೆಚ್ಚ ಮಾಡಿ, ಕಟ್ಟಡವನ್ನು ಕಟ್ಟಿ, ಜಮೀನನ್ನು ತೆಗೆದುಕೊಂಡು ಪ್ರಯೋಗ ಮಾಡಿದರು. ಆದರೆ ಅದರ ಪ್ರತಿಫಲ ಏನೂ ಇಲ್ಲದಂತಾಗಿದೆ. ನನ್ನ ಕ್ಷೇತ್ರದಲ್ಲಿರುವ ದೇವರಹಳ್ಳಿಯಲ್ಲಿ ಈ ಒಂದು ರಸಬಾಳೆ ಹಣ್ಣನ್ನು ಬೆಳೆಯುತ್ತಾರೆ, ಇದನ್ನು ಬಿಟ್ಟರೆ ಬೇರೆ ಎಲ್ಲಿಯೂ ಇದನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಇದು ನಶಿಸಿ ಹೋಗುತ್ತದೆ. ಇದರ ಬಗ್ಗೆ ಹೆಚ್ಚು ಗಮನಹರಿಸಿ ಸಂಶೋಧನೆ ಮುಖಾಂತರ ಇದು ನಶಿಸಿ ಹೋಗದಂತೆ ಮಾಡಲು ಸರಕಾರ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಮರೀಗೌಡರನ್ನು ನೆನೆಸಿಕೊಂಡು ಒಂದು ಸಪೋಟಾ ಹಣ್ಣು ಒಂದು ಮುದ್ದೆಗೆ ಸಮ ಎನ್ನತಕ್ಕಂಥ ಮಾತನ್ನು ಹೇಳಿದರು. ನಮ್ಮ ರಾಜ್ಯದಲ್ಲಿ ಬೆಳೆಯತಕ್ಕಂಥ ಹಣ್ಣಾಗಲೀ, ತರಕಾರಿಯಾಗಲಿ, ಇಲ್ಲಿ ಉಪಯೋಗವಾಗಿ ನಂತರ ಹೆಚ್ಚಿನದನ್ನು ನಾವು ಬೇರೆ ದೇಶಕ್ಕಾಗಲೀ ಅಥವಾ ಪಕ್ಕದ ರಾಜ್ಯಗಳಿಗಾಗಲೀ ಎಕ್ಸ್‌ಪೋರ್ಟ್ ಮಾಡಬೇಕೆಂಬ ಭಾವನೆ ಸರಿಯಾದರೂ ಕೂಡಾ, ಇದನ್ನು ಬೆಳೆಯತಕ್ಕಂಥ ರೈತರು ಉಳಿಯಬೇಕಾದರೆ ಅವರ ಮಾರ್ಕೆಟ್ಟನ್ನು ನಾವು ರಿಸ್ಟ್ರಿಕ್ಟ್ ಮಾಡುವುದಕ್ಕೆ ಆಗುವುದಿಲ್ಲ.

ನಾನು ಚಿಂತಾಮಣಿಗೆ ಹೋಗಿದ್ದೆ. ಅಲ್ಲಿ ರೂಪಾಲಿ ಎಂಬ ಒಂದು ಟೊಮ್ಯಾಟೋ ಹಣ್ಣನ್ನು ಬೆಳೆಯುತ್ತಾರೆ. ಅಲ್ಲಿ ಬೊಂಬಾಯಿಗೆ ಹೋಗತಕ್ಕಂಥ ಲಾರಿಗಳು ಬಂದು ನಿಂತಿದ್ದವು. ಅಲ್ಲಿ ಬೆಳೆದಂಥ ಟೊಮ್ಯಾಟೋ ಹಣ್ಣನ್ನು ಇಲ್ಲೇ ಪ್ಯಾಕ್ ಮಾಡಿ ಬೊಂಬಾಯಿಗೆ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಅಲ್ಲಿ ಮಾಡಿಕೊಂಡಿದ್ದಾರೆ. ಈ ಟೊಮ್ಯಾಟೋ ಹಣ್ಣುಗಳು ಇಲ್ಲಿ ಉಪಯೋಗವಾಗುವುದಿಲ್ಲವೇ, ಮಾರಾಟವಾಗುವುದಿಲ್ಲವೇ ಎಂದು ನಾನು ಕೇಳಿದರೆ, ಅವರು ಹೇಳಿದರು, ಇಲ್ಲಿ ಒಂದು ಕೆ.ಜಿ. ಹಣ್ಣಿಗೆ ಒಂದೂ ಒಂದೂವರೆ ರೂಪಾಯಿ ಮಾತ್ರ ಸಿಗುತ್ತದೆ, ಬೊಂಬಾಯಿಗೆ ಕಳುಹಿಸಿದರೆ ಒಂದು ಕೆ.ಜಿ.ಗೆ ನಾಲ್ಕು ರೂಪಾಯಿ ಎಂಬತ್ತು ಪೈಸೆ ಸಿಗುತ್ತದೆ ಎಂದು ಹೇಳಿದರು. ಹಾಗೂ ಈ ಹಣ್ಣನ್ನು ಒಂದು ಎಕರೆಯಲ್ಲಿ ಬೆಳೆದರೆ, ಮೂರುವರೆ ತಿಂಗಳಿಗೆ ಒಂದು ಸಲ, ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಸಂಪಾದನೆಯಾಗುತ್ತದೆ ಎಂದು ಹೇಳಿದರು. ಆದುದರಿಂದ ನಮ್ಮ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು. ಡಿಮ್ಯಾಂಡ್, ಸಪ್ಲೈ ಮತ್ತು ಮಾರ್ಕೆಟಿಂಗ್ ಇವುಗಳು ಅವರಿಗೆ ಎಲ್ಲಿ ಅನುಕೂಲವಾಗುತ್ತದೆಯೋ ಅಲ್ಲಿಗೆ ಅವರು ಕಳುಹಿಸುತ್ತಾರೆ. ಇದನ್ನು ನಾವು ಸಂಪೂರ್ಣವಾಗಿ ತಡೆಯುವುದಕ್ಕೆ ಆಗುವುದಿಲ್ಲ.

ನಮ್ಮ ಫಾರಂಗಳಲ್ಲಿ ಬೆಳೆಯುತಕ್ಕಂಥ ಯಾವುದೇ ಬೆಳೆಗಳಾಗಲಿ ನಮ್ಮ ಅಥಾರಿಟಿಯಲ್ಲಿ ಇದ್ದರೆ ಆ ಬೆಳೆಗಳನ್ನು ನಮ್ಮ ಜನಗಳಿಗೆ ಹಂಚಿಕೆ ಮಾಡಬೇಕು. ಬೇರೆ ಕಡೆ ಕಳುಹಿಸಿಕೊಡತಕ್ಕಂಥ ಆತುರ ಏನೂ ಇಲ್ಲ. ಜೊತೆಗೆ ನಂಜನಗೂಡು ರಸಬಾಳೇ, ಹಣ್ಣಿನ ಬಗ್ಗೆ ಜ್ಞಾಪಿಸಿಕೊಂಡರೆ ಬಾಯಲ್ಲಿ ನೀರೂರಬಹುದು ಆ ಬೆಳೆಯನ್ನು ಸೇವೆ ಮಾಡಲು ನಮ್ಮ ಇಲಾಖೆಯವರು ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ನಾನು ನಿನ್ನೆ ದಿವಸ ಮಾತನಾಡುವಾಗ ಲಾಲ್‌ಬಾಗ್ ಸೊಸೈಟಿಯ ವ್ಯಾಪ್ತಿಯನ್ನು ವಿಸ್ತರಣೆ ಮಾಡಬೇಕೆಂದು ಹೇಳಿದ್ದೆ, ರೈತರು ಬೆಳೆದಂತಹ ಟಮೋಟೋ ಅಥವಾ ಆಲೂಗಡ್ಡೆ ಕೊಂಡುಕೊಂಡು, ಬಾಂಬೇ, ಕಲ್ಕತ್ತ, ಮುಂತಾದ ಕಡೆಗಳಿಗೆ ಕಳುಹಿಸಿಕೊಡತಕ್ಕಂಥ ಪ್ರಯತ್ನ ಮಾಡಬೇಕು. ಮಾನ್ಯ ಜಾಲಪ್ಪನವರು ಒಂದು ವ್ಯಾಗನ್ ಹಿಂದೆ ಕಳುಹಿಸಿಕೊಟ್ಟು ಅದರಲ್ಲಿ ಸಕ್ಸಸ್‌ಫುಲ್ ಆದರು. ಆದ್ದರಿಂದ ತಾವು ಸಹ ಮಾರ್ಕೆಟ್ ಸ್ಟಡೀ ಮಾಡಿ ರೇಟ್ ಸಿಗುವುದಾದರೆ ಕಳುಹಿಸಿಕೊಡಿ, ಮತ್ತು ಸೊಸೈಟಿಗೆ ತರಕಾರಿ ತಂದಂಥ ರೈತರಿಗೆ ಬೇಸಿಕ್ ಫೆಸಿಲಿಟೀಸ್ ಕೊಡಬೇಕು. ಅವರು ರಾತ್ರಿ ೧೦-೦೦ ಗಂಟೆ ನಂತರ ಬಂದರೆ ಅವರಿಗೆ ಅಲ್ಲಿ ಏನೇನೂ ವ್ಯವಸ್ಥೆ ಇಲ್ಲ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಪ್ರಶ್ನೆಗೆ ಈಗಾಗಲೇ ಕೊಟ್ಟಿದ್ದೇನೆ. ಈಗ ಎರಡು ಯೋಜನೆಗಳು ಬರುತ್ತಿವೆ. ಅವು ಯಾವುದೆಂದರೆ ಎನ್.ಡಿ.ಡಿ. ಮತ್ತು ಇನ್ನೊಂದು ವರಲ್ಡ್ ಬ್ಯಾಂಕ್ ಯೋಜನೆಗಳು ಬಂದ ಮೇಲೆ ಕೋಲ್ಡ್ ಸ್ಟೋರೇಜ್‌ನಲ್ಲಿ ಕಡಿಮೆ ಬೆಲೆ ಇದ್ದಾಗ ಇಟ್ಟು ಹೆಚ್ಚು ಬೆಲೆ ಬಂದಾಗ ಮಾರಾಟ ಮಾಡುವಂತಹ ವ್ಯವಸ್ಥೆಯಾಗಿ ರೈತರಿಗೆ ಅನುಕೂಲವಾಗಬಹುದು, ಇನ್ನು ತರಕಾರಿಯನ್ನು ಸೊಸೈಟಿ ಮುಖಾಂತರ ಕೊಂಡುಕೊಂಡು ಹೊರಗಡೆ ಕಳುಹಿಸಿಕೊಡುವ ಬಗ್ಗೆ ಹೇಳಿದ್ದಾರೆ ಆ ಬಗ್ಗೆ ಪ್ರಯತ್ನ ಮಾಡುತ್ತೇನೆಂದು ಸಹ ಹೇಳುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ನಮ್ಮ ರೋಣ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ತೋಟಗಾರಿಕಾ ಅಭಿವೃದ್ಧಿಯ ಸಲುವಾಗಿ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ಅಲ್ಲಿ ಒಮ್ಮೆಯಾದರೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿಲ್ಲ. ತಾವು ಹಣ್ಣು ಮತ್ತು ತರಕಾರಿ ಬೆಳೆಯಬೇಕೆಂದು ಹೇಳುತ್ತೀರಿ ಆದರೆ ನಮ್ಮ ತಾಲ್ಲೂಕಿನಲ್ಲಿ ತೋಟಗಾರಿಕಾ ಇಲಾಖೆಯ ಅಧಿಕಾರಿ ಪೋಸ್ಟ್ ಇದ್ದರೂ ಸಹ ಕಳೆದ ನಾಲ್ಕು ವರ್ಷಗಳಿಂದ ವೇಕೆಂಟ್ ಇದೆ. ಈ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ರೋಣ ಮತ್ತು ಮುಂಡರಗಿ ತಾಲ್ಲೂಕುಗಳಿಗೆ ಮತ್ತು ಅಲ್ಲಿನ ಫಾರಂಗಳಿಗೆ ನಮ್ಮ ಇಲಾಖಾಧಿಕಾರಿಗಳು ಭೇಟಿ ಕೊಟ್ಟಿರುತ್ತಾರೆ. ನಾನು ಹೋಗಿಲ್ಲ. ನಾನು ಫಾರಂಗೆ ಭೇಟಿ ಕೊಟ್ಟಾಗ ಮಾನ್ಯ ಸದಸ್ಯರನ್ನು ಸಹ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಮತ್ತು ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ಗಮನಹರಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಕರ್ನಾಟಕ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಏಲಕ್ಕಿ ಬೆಳೆನಾಶವಾಗುತ್ತಿದೆ, ಮಡಕೇರಿಯಲ್ಲಿ ಒಂದು ಏಲಕ್ಕಿ ರೀಸರ್ಚ್ ಸ್ಟೇಷನ್ ಉಂಟು. ಅಲ್ಲಿ ಬಹಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಆದರೂ ಸಹ ಸರ್ಕಾರದವರು ಇವರ ರಕ್ಷಣೆಗೆ ಬಂದಿಲ್ಲ. ಇವತ್ತು ಒಂದು ಕೆ.ಜಿ. ಏಲಕ್ಕಿ ೫೦೦ ರೂಪಾಯಿಗಳಿದ್ದರೆ ಅದು ಈಗ ೧೦೦–೧೫೦ ರೂಪಾಯಿಗಳಿಗೆ ಇಳಿದಿದೆ. ಏಲಕ್ಕಿ ನಾಶವಾಗುತ್ತಿದೆ, ಸರ್ಕಾರ ಇವರ ರಕ್ಷಣೆಗೆ ಬರಬೇಕು. ಆ ಮೇಲೆ ಮಾನ್ಯ ಮಾಜಿ ಸಚಿವರಾದ ಶ್ರೀ ರಾಮಯ್ಯನವರು ಹೇಳಿದರು ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ೨೯ ಕೋಟಿ ರೂಪಾಯಿಗಳು ಬಂದಿದೆ ಎಂದು. ಈ ಬಗ್ಗೆ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಹೇಳಿರುವ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಈಗ ನನ್ನಲ್ಲಿ ವಿವರಗಳು ಇಲ್ಲ. ಆ ಯೋಜನೆ ಇನ್ನೂ ಕೇಂದ್ರ ಸರ್ಕಾರದ ಮುಂದೆ ಇದೆಯಂತೆ. ಇನ್ನೂ ಹಣ ಬಂದಿಲ್ಲ.

ಶ್ರೀ ಚಂದ್ರಕಾಂತ ಜಿ ಬೆಲ್ಲದ.—ಈ ರಾಜ್ಯದಲ್ಲಿ ಆಲೂಗಡ್ಡೆ ಬೆಳೆ ಎಲ್ಲದಕ್ಕಿಂತಲೂ ಉತ್ತಮವಾಗಿ ಬರುತ್ತದೆ. ಸಿಮ್ಲಾದಲ್ಲಿ ಏನು ಬೆಳೆಯುತ್ತಾರೆ, ಅದಕ್ಕಿಂತಲೂ ಇಲ್ಲಿ ಹೆಚ್ಚು ಇಳುವರಿ ಬರುತ್ತದೆ. ಆದುದರಿಂದ ಕೇಂದ್ರ ಸರ್ಕಾರದ ಐ.ಸಿ.ಎ.ಆರ್. ಟೀಮು ಅವರು ಇಲ್ಲಿಗೆ ಬಂದು ಮೂಲ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಮತ್ತು ರಿಸರ್ಚ್ ಮಾಡುವುದಕ್ಕೆ ಕೆಲವು ಜಮೀನುಗಳನ್ನು ಕೊಡಬೇಕೆಂದು ರಾಜ್ಯ ಸರ್ಕಾರದ ತೋಟಗಾರಿಕೆ ಇಲಾಖೆಯವರನ್ನು ಕೇಳಿದ್ದಾರೆ. ಅದು ಎಲ್ಲಿಗೆ ಬಂದಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಯಾವುದೇ ಒಂದು ರೀಸರ್ಚ್ ಪ್ರಾಜೆಕ್ಟ್ ಇದ್ದರೆ ಅವರು ಏನಾದರೂ ಜಮೀನನ್ನು ಕೇಳಿದರೆ ನಾವು ಕೊಡಲು ಸಿದ್ಧರಿದ್ದೇವೆ. ಅವರು ಬಂದು ಸೂಕ್ತ ಜಮೀನನ್ನು ಆಯ್ಕೆ ಮಾಡಿದರೆ ಅದನ್ನು ನಾವು ಕೊಡುವುದಕ್ಕೆ ಅಡ್ಡಿ ಏನೂ ಇಲ್ಲ. ಅದು ಅಲ್ಲದೆ ಖಾಸಗೀಯವರು, ಬೇಕಾದಷ್ಟು ಜನ ರೀಸರ್ಚ್ ಮಾಡುತ್ತಿದ್ದಾರೆ. ರೂಪಾಲಿ ಬೀಜ ಉತ್ಪಾದನೆಯನ್ನು ಇಂಡೋ ಅಮೆರಿಕನ್ ಸೀಡ್ಸ್ ಅವರೂ ಕೊಡುತ್ತಾ ಇದ್ದಾರೆ. ಅವರಿಗೂ ಕೂಡ ನಮ್ಮ ಸರ್ಕಾರದವರು ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತಿದ್ದಾರೆ. ಹಾಗೂ ಅವರಿಗೆ ರೀಸರ್ಚ್ ಮಾಡಲು ಅನುಕೂಲ ಮಾಡಿ ಕೊಟ್ಟಿದ್ದೇವೆ. ಅದೇ ರೀತಿ ಐ.ಸಿ.ಎ.ಆರ್.ರವರು ಇಲ್ಲಿಗೆ ಬಂದು ಜಾಗ ಕೇಳಿದರೆ ನಾವು ಕೊಡಲು ಸಿದ್ಧರಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಅವರಿಗೆ ತೀವ್ರವಾಗಿ ಜಮೀನು ಕೊಟ್ಟು ರೀಸರ್ಚ್ ಸ್ಟೇಷನ್ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿದ್ದಾರೆ ಅದು ಎಲ್ಲಿಯವರೆಗೆ ಬಂತೋ ಗೊತ್ತಿಲ್ಲ.

ಶ್ರೀ ಎಂ. ಶಿವಣ್ಣ.—ಈ ರಾಜ್ಯದಲ್ಲಿ ಗಿರಿಜನರಿಗೆ ಒಬ್ಬೊಬ್ಬರಿಗೆ ೧೦ ರಿಂದ ೧೫ ಎಕರೆಯವರೆಗೂ ಜಮೀನನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ೨೦೦ ಎಕರೆಯಿಂದ ೩೦೦ ಎಕರೆಯವರೆಗೂ ಜಮೀನನ್ನು ಕೊಟ್ಟಿದ್ದಾರೆ. ಈ ಸ್ಥಳಕ್ಕೆ ಮಾನ್ಯ ಶ್ರೀ ಬಿ. ಸೋಮಶೇಖರ್‌ರವರು ಬಂದು ಭೇಟಿ ಕೊಟ್ಟರು. ಹಾಗೂ ಮಾನ್ಯ ಶ್ರೀ ವೈ. ಕೆ. ರಾಮಯ್ಯನವರು ಸಹ ಭೇಟಿ ಕೊಟ್ಟು, ನೋಡಿದ್ದಾರೆ. ಅವರಿಗೆ ಭೂಮಿ ಕೊಟ್ಟು ೧೦–೧೫ ವರ್ಷಗಳಾಗಿದ್ದರೂ ಕೂಡ, ಅದರಿಂದ ಸರಿಯಾದ ಫಸಲು ಆಗುತ್ತಿಲ್ಲ.

ಅವರು ಅಲ್ಲಿ ಬೆಳೆದಂತ ಬೆಳೆಯನ್ನು ಇನ್ನೂ ತಿಂದಿಲ್ಲ. ಅಲ್ಲಿ ಇನ್ನೂ ತಳಿ ಅಭಿವೃದ್ಧಿ ಆಗಿಲ್ಲ. ಈ ಬಗ್ಗೆ ತೋಟಗಾರಿಕೆ ಇಲಾಖೆಯವರು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ವಿಶೇಷ ಘಟಕ ಯೋಜನೆಯಲ್ಲಿ ಹರಿಜನಗಿರಿಜನರಿಗೆ ಸಂಪೂರ್ಣ ಅರ್ಧ ಎಕರೆಯಲ್ಲಿ ಬೆಳೆಯಲು ೩೦ ತೆಂಗಿನ ಗಿಡಗಳನ್ನು ಕೊಟ್ಟು ಅದಕ್ಕೆ ಖರ್ಚಾಗುವ ೧೬,೦೦೦ ರೂಪಾಯಿಗಳನ್ನು ಕೂಡ ಕೊಟ್ಟು ಅದನ್ನು ಪೋಷಣೆ ಮಾಡಿ ಬೆಳೆಸಬೇಕೆಂದು ಹೇಳಿದ್ದೇವೆ. ಹಾಗೆಯೇ ಗಿರಿಜನರಿಗೆ ಟ್ರೈಬಲ್ ಸ್ಕೀಮ್‌ನಲ್ಲಿ ಹಣ್ಣಿನ ಗಿಡಗಳನ್ನು, ಸಸಿಗಳನ್ನು ಹಾಗೂ ಅದಕ್ಕೆ ಬೇಕಾಗುವ ಖರ್ಚನ್ನು ಕೂಡ, ಕೊಡುತ್ತಿದ್ದೇವೆ. ತೆಂಗಿನ ಗಿಡ ಬೆಳೆಸಲು ೫ ವರ್ಷಕ್ಕೆ ತಗಲುವ ಖರ್ಚನ್ನು ಕೂಡ ಕೊಡುತ್ತಿದ್ದೇವೆ. ಅದೇ ರೀತಿ ಟ್ರೈಬಲ್ ಪ್ಲಾನ್ ಇದೆ. ಅವರು ಅದನ್ನು ಸದುಪಯೋಗ ಮಾಡಿಕೊಳ್ಳಬೇಕು. ಕೆಲವು ಕಡೆ ಏನಾಗಿದೆ ಎಂದರೆ ಕೊಟ್ಟಂಥ ೩೦ ತೆಂಗಿನ ಗಿಡಗಳ ಪೈಕಿ ೨ನ್ನು ತೆಗೆದುಕೊಂಡು ಅದನ್ನು ಹಾಕಿ ಉಳಿದದ್ದನ್ನು ಮಾರ್ಕೆಟ್ಟಿನಲ್ಲಿ ಮಾರಿಕೊಳ್ಳತಕ್ಕಂತಹ ಪ್ರಸಂಗವಿದೆ. ಅದನ್ನು ನಾವು ಪೋಲೀಸಿಗೆ ರೆಫರ್ ಮಾಡಿದ್ದೇವೆ. ಇದರ ಬಗ್ಗೆ ಅಧಿಕಾರಿಗಳ ಜವಾಬ್ದಾರಿಯೂ ಇದೆ,

ಅವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ, ಅವರಿಗೆ ಪ್ರೋತ್ಸಾಹ ಕೊಟ್ಟು ಅವರು ಅದನ್ನು ಬೆಳೆಯಲೇ ಬೇಕೆಂಬ ಒತ್ತಾಯ ತರಬೇಕೆಂದು ಹೇಳುತ್ತಿದ್ದೇನೆ. ನಾನು ಮಂತ್ರಿಯಾಗುವುದಕ್ಕೆ ಮುಂಚೆ ಜಿಲ್ಲೆಯ ಶಾಸಕನಾಗಿ ಈ ಬಗ್ಗೆ ಕೆಲಸ ಮಾಡಿದ್ದೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಸದುಪಯೋಗ ಆಗುವ ಹಾಗೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸ್ವಾಮಿ, ತಾಳೆ ಎಣ್ಣೆಯ ಅಭಿವೃದ್ಧಿಯ ಬಗ್ಗೆ ತರೀಕೆರೆಯಲ್ಲಿ ೮೦೦ ಎಕರೆ ಬಾವಿಕೆರೆಯಲ್ಲಿ ೪೦೦ ಎಕರೆ ಅಭಿವೃದ್ಧಿಗಾಗಿ ಮನವಿಯನ್ನು ಸಲ್ಲಿಸಿದ್ದಾರೆ. ಅದನ್ನು ಅಭಿವೃದ್ಧಿ ಮಾಡಿದರೆ, ಆ ಪ್ರದೇಶದ ಜನರಿಗೆ ಬಹಳ ಅನುಕೂಲವಾಗುತ್ತದೆ. ಅದನ್ನು ಅಭಿವೃದ್ಧಿ ಮಾಡಲು ಆ ಜನರಿಗೆ ಸಬ್ಸಿಡಿ ರೂಪದಲ್ಲಾದರೂ ಏನಾದರೂ ಸಹಾಯ ಮಾಡಿದರೆ ಅವರಿಗೆ ಬಹಳ ಅನುಕೂಲವಾಗುತ್ತದೆ. ಇದನ್ನು ತಾವು ಏತಕ್ಕೆ ಮಾಡಬಾರದು?

೨-೦೦ ಪಿ.ಎಂ.

ತದನಂತರ ಭದ್ರಾ ಜಲಾಶಯದ ಹತ್ತಿರ, ಕೆ.ಆರ್.ಎಸ್. ಜಲಾಶಯದ ಹತ್ತಿರ ಮಾಡಿರುವ ತರಹ ಮಿನಿ ಬೃಂದಾವನವನ್ನು ಮಾಡಬೇಕೆಂದು ನಾನು ಕೇಳುತ್ತಲೇ ಇದ್ದೇನೆ. ಇದುವರೆಗೆ ನಾಲ್ಕು ಜನ ತೋಟಗಾರಿಕೆ ಇಲಾಖೆ ಮಂತ್ರಿಗಳು ಬದಲಾದರೂ ಇನ್ನೂ ಆ ಕೆಲಸ ಮಾಡಿಲ್ಲ. ಆ ಮೇಲೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ೧೨೦೦ ಎಕರೆಯಷ್ಟು ಜಮೀನು ಸರ್ಕಾರದ್ದು ಇದೆ. ಇಲ್ಲಿ ತಾಳೆ ಎಣ್ಣೆ ಬೆಳೆಯುವುದಕ್ಕೆ ಸರ್ಕಾರ ಉಪಯೋಗಿಸಿಕೊಳ್ಳಬಹುದು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಪಾಮ್ ಆಯಿಲ್ ಟ್ರೀಸ್ ಬೆಳೆಯುವುದಕ್ಕೆ ವಾತಾವರಣ ಸೂಟ್ ಆಗಿರಬೇಕು. ಪಾಮ್ ಆಯಿಲ್ ಟ್ರೀಸ್‌ಗೆ ಇಲ್ಲಿ ಉತ್ತಮವಾದ ವಾತಾವರಣ ಸಿಗುವ ಹಾಗಿದ್ದರೆ ಖಂಡಿತಾ ಅದರ ಬೆಳೆಯನ್ನು ಬೆಳೆಯಬಹುದು. ಭದ್ರಾ ಕಮ್ಯಾಂಡ್ ಏರಿಯಾದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಪಾಮ್ ಆಯಿಲ್ ಟ್ರೀಸ್‌ನ್ನು ಬೆಳೆಯುವುದಕ್ಕೆ ಯೋಜನೆ ಹಾಕಲಾಗಿದೆ. ಈಗ ಮಾನ್ಯ ಸದಸ್ಯರು ಹೇಳಿರುವ ೧೨೦೦ ಎಕರೆ ಜಮೀನು ಪಾಮ್ ಆಯಿಲ್ ಟ್ರೀಸ್ ಬೆಳೆಯುವುದಕ್ಕೆ ಅನುಕೂಲಕರವಾದ ವಾತಾವರಣದಲ್ಲಿದ್ದರೆ ಖಂಡಿತಾ ಮಾಡಬಹುದು. ಆಮೇಲೆ, ಭದ್ರಾ ಜಲಾಶಯದ ಹತ್ತಿರ ಮಿನಿ ಬೃಂದಾವನ ಮಾಡಬೇಕೆಂದು ಹೇಳಿದ್ದಾರೆ. ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಿಸುತ್ತೇವೆ.

ಅಧ್ಯಕ್ಷರು.—ಶ್ರೀ ಉಮರಬ್ಬನವರು ಕೇಳಿ,

ಶ್ರೀ ಬಿ.ಎ. ಉಮರಬ್ಬ.—ಬಂಟವಾಳ ತಾಲ್ಲೂಕಿನಲ್ಲಿ ಒಂದು ತೋಟಗಾರಿಕೆ ಇಲಾಖೆಯ ಫಾರ್ಮ್ ಇದೆ. ಈ ಫಾರ್ಮ್‌ನಲ್ಲಿ ಏನು ಕೆಲಸ ನಡೆಯುತ್ತಿದೆಯೆಂದು ಮಾನ್ಯ ಸಚಿವರು ಹೇಳಬೇಕು. ಅಂದರೆ, ಅದರಿಂದ ಎಷ್ಟು ಪ್ರಯೋಜನ ಇದೆ? ಉತ್ಪಾದನೆ ಆಗುತ್ತಿದೆಯೋ ಎಂದು ಹೇಳಬೇಕು. ಉತ್ಪಾದನೆಯಾಗುತ್ತಿಲ್ಲವೆಂದು ಸಚಿವರಿಗೆ ಪ್ರಾಮಾಣಿಕವಾಗಿ ಅನಿಸಿದರೆ ದಯವಿಟ್ಟು ಆ ಜಾಗವನ್ನು ತೋಟಗಾರಿಕೆ ಇಲಾಖೆಯಿಂದ ವಿತ್‌ಡ್ರಾ ಮಾಡಿಕೊಂಡು ಆ ಜಾಗದಲ್ಲಿ ಬಡವರಿಗೆ ನಿವೇಶನಗಳನ್ನು ಮಾಡಿಕೊಡಿ. ಅದರಿಂದ ಬಡವರಿಗಾದರೂ ಅನುಕೂಲವಾಗಲೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರಾದ ಉಮರಬ್ಬನವರು ಅಲ್ಲಿ ಏನು ಉತ್ಪಾದನೆಯಾಗುತ್ತಿದೆಯೆಂದು ನನ್ನನ್ನೇ ಕೇಳುತ್ತಿದ್ದಾರೆ. ಅವರು ಅಲ್ಲಿಯೇ ಇರುವುದರಿಂದ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಒಂದು ಪಕ್ಷ ಅಲ್ಲಿ ಸರಿಯಾಗಿ ಕೆಲಸ ನಡೆಯದೇ ಇದ್ದರೆ ನೀವೇ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿಸಬೇಕು.

ಶ್ರೀ ಬಿ.ಎ. ಉಮರಬ್ಬ.—ಆ ಕೆಲಸ ಮಾಡಿಸುವುದಕ್ಕೆ ನನಗೆ ಅಧಿಕಾರ ಕೊಡಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆಲಸ ಮಾಡಿಸುವುದಕ್ಕೆ ಅಧಿಕಾರ ಏಕೆ ಬೇಕು ?

ಶ್ರೀ ಬಿ.ಎ. ಉಮರಬ್ಬ.—ನಾನು ಅಲ್ಲಿ ಕೆಲಸಕ್ಕೆ ಸೇರಿಕೊಳ್ಳಬೇಕೇನು ? ಅಲ್ಲಿ ಸರಿಯಾಗಿ ಕೆಲಸ ಮಾಡಿಸುವುದಕ್ಕೆ ಶಾಸಕನಾದ ನನಗೆ ಅಧಿಕಾರ ಕೊಡಿ. ಒಂದು ವರ್ಷದಲ್ಲಿ ತೋಟಗಾರಿಕೆ

ಇಲಾಖೆಯ ವಶದಲ್ಲಿರುವ ತೋಟವನ್ನು ಒಂದು ಸುಂದರ ಹಾಗೂ ಉತ್ಪಾದನೆ ಮಾಡತಕ್ಕ ತೋಟವಾಗಿ ಮಾಡುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರಾದ ಉಮರಬ್ಬನವರು ಬಂಟವಾಳ ತಾಲ್ಲೂಕಿನಲ್ಲಿರುವ ತೋಟಗಾರಿಕೆ ಫಾರ್ಮನ್ನು ಅಭಿವೃದ್ಧಿಪಡಿಸುವುದಾದರೆ ಅದಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ಕೊಡುವುದಕ್ಕೆ ನಾನು ರೆಡಿ ಇದ್ದೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು. ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ನಾವು ಸುಮ್ಮನೆ ಕೊಡುವುದು ಏನು ? ನಾವು ಪ್ರಶ್ನೆ ಕೇಳಬೇಕಾಗಿದೆ.

ಅಧ್ಯಕ್ಷರು.—ನೀವು ಕೂಡಿ. ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

> ''ಪ್ರಸ್ತಾವ ಏನೆಂದರ ೩೧–೩–೧೯೮೯ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೧ ಮತ್ತು ೩ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರದ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು ಮಂಜೂರು ಮಾಡಬೇಕು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ ೧–ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯ (ತೋಟಗಾರಿಕೆ ಹೊರತು).

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲ ರಕ್ಷಣೆ ವ್ಯವಸಾಯ (ತೋಟಗಾರಿಕೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೯,೧೨,೮೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೮೨,೦೦,೦೦೦ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩ ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧೪,೨೨,೮೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.